**ಕರ್ನಾಟಕ ಸರ್ಕಾರ**

**ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ**

# ಕರ್ನಾಟಕ ವೃತ್ತಿಗಳ, ಕಸಬುಗಳ, ಆಜೀವಿಕೆಗಳ ಮತ್ತು ಉದ್ಯೋಗಗಳ ಮೇಲಣ ತೆರಿಗೆ ಅಧಿನಿಯಮ, 1976

ಕರ್ನಾಟಕ ಸರ್ಕಾರದ ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ನಿರ್ದೇಶಕರಿಂದ ಮುದ್ರಿತವಾಗಿ ಪ್ರಕಟವಾಗಿದೆ.

# ಕರ್ನಾಟಕ ವೃತ್ತಿಗಳ, ಕಸಬುಗಳ ಆಜೀವಿಕೆಗಳ ಮತ್ತು ಉದ್ಯೋಗಗಳ ಮೇಲಣ ತೆರಿಗೆ ಅಧಿನಿಯಮ, 1976

**ಕರ್ನಾಟಕ ಸರ್ಕಾರ**

ಕ್ರಮಾಂಕ: ಲಾ 128 ಎಲ್.ಎಂಪಿ. 86

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನಸೌಧ
ಬೆಂಗಳೂರು, ದಿನಾಂಕ: 9.12.1986

**ಅಧಿಸೂಚನೆ**

ಕರ್ನಾಟಕ ರಾಜಭಾಷಾ ಅಧಿನಿಯಮ 1963 (ಕರ್ನಾಟಕ ಅಧಿನಿಯಮ 1963ರ 26)ರ 5-ಎ ಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ರಾಜ್ಯಪಾಲನಾದ ನಾನು, ಶ್ರೀ ಎ. ಎನ್. ಬ್ಯಾನರ್ಜಿ, ಬೆಂಗಳೂರು ಕರ್ನಾಟಕ ವೃತ್ತಿಗಳ, ಕಸಬುಗಳ, ಆಜೀವಿಕೆಗಳ ಮತ್ತು ಉದ್ಯೋಗಗಳ ಮೇಲಣ ತೆರಿಗೆ ಅಧಿನಿಯಮ, 1976ರ ಕನ್ನಡ ಭಾಷೆಯಲ್ಲಿರುವ ಈ ಮುಂದಿನ ಭಾಷಾಂತರವು ಸರ್ಕಾರಿ ರಾಜ್ಯಪತ್ರದಲ್ಲಿ ಈ ಅಧಿಸೂಚನೆಯು ಪ್ರಕಟವಾದ ದಿನಾಂಕದಿಂದ ಪರಿಣಾಮಕಾರಿಯಾಗುವಂತೆ ಕನ್ನಡ ಭಾಷೆಯಲ್ಲಿ ಅದರ ಅಧಿಕೃತ ಪಾಠವಾಗಿರತಕ್ಕುದೆಂದು ಈ ಮೂಲಕ ನಿರ್ದಿಷ್ಟಪಡಿಸುತ್ತೇನೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

ಲಿಂಗಯ್ಯ
ಸರ್ಕಾರದ ಅಧೀನ ಕಾರ್ಯದರ್ಶಿ,
ಕಾನೂನು ಮತ್ತು ಸಂಸದೀಯ ವ್ಯವಹಾರಗಳ
ಇಲಾಖೆ, (ಆಡಳಿತ-2)

## ಕರ್ನಾಟಕ ವೃತ್ತಿಗಳ, ಕಸಬುಗಳ, ಆಜೀವಿಕೆಗಳ ಮತ್ತು ಉದ್ಯೋಗಗಳ ಮೇಲಣ ತೆರಿಗೆ ಅಧಿನಿಯಮ 1976

ವಿಷಯಾನುಕ್ರಮಣಿಕೆ


ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

**ಪ್ರಕರಣಗಳು:**

1. ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ
2. ಪರಿಭಾಷೆಗಳು
3. ತೆರಿಗೆಯನ್ನು ವಿಧಿಸುವುದು ಮತ್ತು ಹೊರಿಸುವುದು

3ಎ. ಬಿಟ್ಟುಬಿಡಲಾಗಿದೆ.

4. ನಿಯೋಜಿತಕರ ಪರವಾಗಿ ತೆರಿಗೆಯನ್ನು ಕಟಾವಣೆಗೊಳಿಸಲು ಮತ್ತು ಸಂದಾಯ ಮಾಡಲು ನಿಯೋಜಕನ ಹೊಣೆ.
5. ನೋಂದಣಿ ಮತ್ತು ದಾಖಲಾತಿ.
6. ವಿವರ ಪಟ್ಟಿಕೆಗಳು.

6ಎ. ಮುಂಗಡವಾಗಿ ತೆರಿಗೆ ಪಾವತಿ

7. ನಿಯೋಜಕನ ಅಥವಾ ವ್ಯಕ್ತಿಯ ಕರ ನಿರ್ಧರಣೆ

7ಎ. ಬಿಟ್ಟುಬಿಡಲಾಗಿದೆ.

8. ತಪ್ಪನ್ನು ಸರಿಪಡಿಸುವುದು.
9. ತಪ್ಪಿಸಿಕೊಂಡ ತೆರಿಗೆಯ ನಿರ್ಧರಣೆ.
10. ದಾಖಲಾದ ವ್ಯಕ್ತಿಗಳು ತೆರಿಗೆಯನ್ನು ಪಾವತಿಸುವುದು ಮತ್ತು ವಿವರಪಟ್ಟಿಕೆಯನ್ನು ಸಲ್ಲಿಸುವುದು ಮತ್ತು ಕೆಲವು ದಾಖಲಾದ ವ್ಯಕ್ತಿಗಳ ಸಂದರ್ಭದಲ್ಲಿ ತೆರಿಗೆಯನ್ನು ಕಡಿತಗೊಳಿಸುವುದು
11. ತೆರಿಗೆಯನ್ನು ಕಟಾವಣೆ ಮಾಡಲು ಅಥವಾ ಸಂದಾಯ ಮಾಡಲು ತಪ್ಪಿದುದರ ಪರಿಣಾಮಗಳು.
12. ತೆರಿಗೆಯನ್ನು ಸಂದಾಯ ಮಾಡದಿರುವುದಕ್ಕೆ ದಂಡ.
13. ತೆರಿಗೆ ಮತ್ತು ಇತರ ಮೊಬಲಗುಗಳ ವಸೂಲಿ ಮತ್ತು ತೆರಿಗೆ ವಸೂಲಿಗಾಗಿ ಕಾಲಪರಿಮಿತಿಯ ಅವಧಿ
14. ಅಧಿನಿಯಮವನ್ನು ಕಾರ್ಯಗತಗೊಳಿಸುವ ಪ್ರಾಧಿಕಾರಿಗಳು.

14ಎ. ಅಧೀನ ಪ್ರಾಧಿಕಾರಿಗಳಿಗೆ ಸೂಚನೆ.

15. ವಸೂಲಿ ಏಜೆಂಟರ ನೇಮಕಾತಿ.
16. ಅಪೀಲುಗಳು.
17. ಅಪೀಲು ನ್ಯಾಯಾಧೀಕರಣಕ್ಕೆ ಅಪೀಲು.
18. ಕಮಿಷನರ್, ಹೆಚ್ಚುವರಿ ಕಮಿಷನರ್, ಜಂಟ ಕಮಿಷನರ್ ಮತ್ತು ಡೆಪ್ಯುಟಿ ಕಮಿಷನರ್ ರಿಂದ ಪುನರೀಕ್ಷಣೆ.

18ಎ. ಕೆಲವು ಮೊಕದ್ದಮೆಗಳಲ್ಲಿ ಉಚ್ಚ ನ್ಯಾಯಾಲಯದಿಂದ ಪುನರೀಕ್ಷಣೆ.

19. ಲೆಕ್ಕಪತ್ರಗಳು.
20. ವಸೂಲಿಯ ವಿಶೇಷ ಬಗೆ.
21. ಲೆಕ್ಕಪತ್ರಗಳನ್ನು ಮತ್ತು ದಸ್ತಾವೇಜುಗಳನ್ನು ಹಾಜರುಪಡಿಸುವುದು ಮತ್ತು ಪರಿಶೀಲಿಸುವುದು ಹಾಗೂ ಆವರಣಗಳನ್ನು ಶೋಧಿಸುವುದು.
22. ಮರುಪಾವತಿಗಳು.
23. ಅಪರಾಧಗಳು ಮತ್ತು ದಂಡಗಳು.
24. ಕಂಪನಿಗಳಿಂದ ಅಪರಾಧ.
25. ವ್ಯವಹರಣೆಗಳನ್ನು ವರ್ಗಾಯಿಸುವ ಅಧಿಕಾರ.
26. ಅಪರಾಧಗಳ ರಾಜಿ.

27. ಹಾಜರಾತಿ ಇತ್ಯಾದಿಗಳನ್ನು ಒತ್ತಾಯಪಡಿಸುವ ಅಧಿಕಾರ.
28. ದಾವೆ ಇತ್ಯಾದಿಗಳಿಗೆ ಪ್ರತಿಷೇಧ.
28ಎ. ವ್ಯವಹರಣೆಗಳಲ್ಲಿ ಯಾವುದೇ ಪ್ರಾಧಿಕಾರದ ಮುಂದೆ ಹಾಜರಾಗುವುದು.
29. ವಿನಾಯಿತಿಗೆ ಅಧಿಕಾರ.
30. ಸ್ಥಳೀಯ ಪ್ರಾಧಿಕಾರಗಳು ವೃತ್ತಿ ತೆರಿಗೆಯನ್ನು ವಿಧಿಸತಕ್ಕದಲ್ಲ.
31. ಕೆಲವು ಸಂದರ್ಭಗಳಲ್ಲಿ ಉಪಕರಗಳನ್ನು ವಿಧಿಸತಕ್ಕುದಲ್ಲ.
32. ರಾಜಸ್ವದ ನಷ್ಟಕ್ಕಾಗಿ ಸ್ಥಳೀಯ ಪ್ರಾಧಿಕಾರಿಗಳಿಗೆ ಅನುದಾನಗಳು .
33. ನಿಯಮ ರಚನಾಧಿಕಾರ.
34. ತೊಂದರೆಗಳನ್ನು ನಿವಾರಿಸುವ ಅಧಿಕಾರ.

ಅನುಸೂಚಿ

******

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

**I**

**1976ರ ಅಧಿನಿಯಮ 35.-** ರಾಜ್ಯದ ಆದಾಯಗಳನ್ನು ಹೆಚ್ಚಿಸುವ ಸಲುವಾಗಿ, ವೃತ್ತಿಗಳು, ಕಸಬು, ಆಜೀವಿಕೆಗಳು ಮತ್ತು ಉದ್ಯೋಗಗಳ ಮೇಲೆ ತೆರಿಗೆ ವಿಧಿಸುವುದು ಅಗತ್ಯವೆಂದು ಪರಿಗಣಿಸಲಾಗಿದೆ.

ರೂ. 500 ಮತ್ತು ಹೆಚ್ಚು ಮಾಸಿಕ ಆದಾಯವನ್ನು ಗಳಿಸುತ್ತಿರುವ ವೇತನ ಮತ್ತು ಮಜೂರಿದಾರರು ತಮ್ಮ ದರ್ಜೆಯ ಶ್ರೇಣಿಗೆ ಅನುಸಾರವಾಗಿ ಸದರಿ ತೆರಿಗೆಯನ್ನು ಪಾವತಿಸುವ ಅಗತ್ಯತೆಯಿದೆ. ಸ್ವಯಂ ಉದ್ಯೋಗಿಗಳು ವಾರ್ಷಿಕ ರೂ.50 ರಿಂದ ರೂ.250ರವರೆಗಿನಷ್ಟು ನಿಗದಿತ ಮೊತ್ತವನ್ನು ಪಾವತಿಸುವುದು ಅಗತ್ಯವಾಗಿರುತ್ತದೆ ಮತ್ತು ಈ ಮೊತ್ತವನ್ನು ವಿವಿಧ ವೃತ್ತಿ ಸಮೂಹಗಳ ಗಳಿಕೆ ಸಾಮರ್ಥ್ಯಕ್ಕೆ ಸಂಬಂಧಪಟ್ಟ ವಿಸ್ತೃತ ಮಾನದಂಡದ ಆಧಾರದ ಮೇಲೆ ವಿಧಿಸಲಾಗುತ್ತಿದೆ.

ಉದ್ಯೋಗದಾತರ ನೋಂದಣಿಗಾಗಿ ಉಪಬಂಧವನ್ನು ಕಲ್ಪಿಸಲಾಗಿದೆ ಮತ್ತು ಸ್ವಯಂ ಉದ್ಯೋಗಿಗಳ ನೋಂದಣಿ ಮತ್ತು ತೆರಿಗೆ ವಿಧಿಸುವಿಕೆ ಮತ್ತು ಸಂಗ್ರಹಣೆಯ ಕಾರ್ಯವಿಧಾನವನ್ನು ನಿರೂಪಿಸಲಾಗಿದೆ.

ತೆರಿಗೆ ಮೇಲ್ಮನವಿಗಳು ಮತ್ತು ಇತರ ಪೂರಕ ಆಡಳಿತ ವಿಷಯಗಳಿಗಾಗಿಯೂ ಸಹ ಉಪಬಂಧಗಳನ್ನು ಕಲ್ಪಿಸಲಾಗಿದೆ.

ರಾಜ್ಯ ಸರ್ಕಾರವು ವೃತ್ತಿತೆರಿಗೆಯನ್ನು ವಿಧಿಸುವುದರಿಂದಾಗಿ, ಈ ತೆರಿಗೆಯನ್ನು ವಿಧಿಸಲು ಸ್ಥಳೀಯ ಸಂಸ್ಥೆಗಳು ಪ್ರಸ್ತುತ ಹೊಂದಿರುವ ಅಧಿಕಾರಗಳನ್ನು ಹಿಂಪಡೆಯಲು ಪ್ರಸ್ತಾವಿಸಲಾಗಿದೆ. ಆದರೆ, ಸ್ಥಳೀಯ ಸಂಸ್ಥೆಗಳು ತೆರಿಗೆಯನ್ನು ಪ್ರಸ್ತುತ ಸಂಗ್ರಹಿಸುತ್ತಿರುವುದರಿಂದ ಅವುಗಳಿಗೆ ಆಗುವ ಆದಾಯ ನಷ್ಟದ ಮರುಪಾವತಿಗಾಗಿ ಉಪಬಂಧವನ್ನು ಕಲ್ಪಿಸಲು ಪ್ರಸ್ತಾವಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(1976ರ ವಿಧಾನಸಭೆ ವಿಧೇಯಕ ಸಂಖ್ಯೆ. 34ರಿಂದ ಪಡೆಯಲಾಗಿದೆ)

**II**

**1981ರ ತಿದ್ದುಪಡಿ ಅಧಿನಿಯಮ 8.-** ಪ್ರಸ್ತುತ ವಿಮಾ ಏಜೆಂಟರು ತಮ್ಮ ವೃತ್ತಿಯಲ್ಲಿನ ಸ್ಥಾನಕ್ಕನುಗುಣವಾಗಿ ಮತ್ತು ತಮ್ಮ ವೃತ್ತಿಯನ್ನು ಕೈಗೊಳ್ಳುವ ಸ್ಥಳಗಳಿಗನುಗುಣವಾಗಿ ವೃತ್ತಿ ತೆರಿಗೆಯನ್ನು ಪಾವತಿಸುವುದಕ್ಕೆ ಹೊಣೆಯಾಗಿರುತ್ತಾರೆ. ಈಗಿನ ಉಪಬಂಧಗಳು ಅವರಿಗೆ ತೊಂದರೆದಾಯಕವಾಗಿವೆ ಎಂದು ತಿಳಿಸಲಾಗಿದೆ. ವಿಷಯವನ್ನು ಜಾಗರೂಕವಾಗಿ ಅವಲೋಕಿಸಿದ

ಮೇಲೆ, ಅಧಿನಿಯಮದ ಮೇರೆಗೆ ವೇತನ ಅಥವಾ ಮಜೂರಿ ಗಳಿಕೆದಾರರಿಗೆ ಉಪಬಂಧಿಸಿರುವಂಥದೇ ಬಗೆಯ ಸ್ಲ್ಯಾಬ್ ಪದ್ಧತಿಯಲ್ಲಿ ತೆರಿಗೆ ಪಾವತಿಸುವುದಕ್ಕೆ ಅವರಿಗೆ ಅವಕಾಶ ಕಲ್ಪಿಸಲು ಪ್ರಸ್ತಾವಿಸಲಾಗಿದೆ.

(1981ರ ವಿಧಾನಸಭೆ ವಿಧೇಯಕ ಸಂಖ್ಯೆ. 39 ರಿಂದ ಪಡೆಯಲಾಗಿದೆ)

**III**

**1982ರ ತಿದ್ದುಪಡಿ ಅಧಿನಿಯಮ 13.-** 1982-83ನೇ ವರ್ಷದ ಆಯವ್ಯಯ ಭಾಷಣದಲ್ಲಿ, ಮಾನ್ಯ ಆರ್ಥಿಕ ಮತ್ತು ಪ್ರವಾಸೋದ್ಯಮ ಮಂತ್ರಿಯವರು, ರಾಜ್ಯದ ವರಮಾನವನ್ನು ಹೆಚ್ಚಿಸುವ ಸಲುವಾಗಿ ಹಲವಾರು ಪ್ರಸ್ತಾವನೆಗಳನ್ನು ಸೂಚಿಸಿದರು. ಈ ವಿಧೇಯಕವು ಸದರಿ ಪ್ರಸ್ತಾವನೆಗಳನ್ನು ಕಾರ್ಯರೂಪಕ್ಕೆ ತರಲು ಹಾಗೂ ಕೆಲವು ಇತರ ಸಣ್ಣ ತಿದ್ದುಪಡಿಗಳನ್ನು ಮಾಡಲು ಸಹ ಈ ಅವಕಾಶವನ್ನು ಬಳಸಿಕೊಳ್ಳಲಾಗಿದೆ.

(ಕರ್ನಾಟಕ ರಾಜ್ಯಪತ್ರ ಭಾಗ IV 2ಎ (ವಿಶೇಷ ಸಂಚಿಕೆ) ಸಂ. 223, ದಿನಾಂಕ:27.3.1982 ರ ಪುಟ 31ರಲ್ಲಿ ಪ್ರಕಟಿಸಲಾಗಿದೆ.)

**IV**

**1982ರ ತಿದ್ದುಪಡಿ ಅಧಿನಿಯಮ 26.-** ಕರ್ನಾಟಕ ವೃತ್ತಿಗಳ ಕಸಬುಗಳ, ಆಜೀವಿಕೆಗಳ ಮತ್ತು ಉದ್ಯೋಗಗಳ ಮೇಲಣ ತೆರಿಗೆ ಅಧಿನಿಯಮ, 1976ರ ಅಡಿಯಲ್ಲಿ ತೆರಿಗೆ ಬಾಧ್ಯತೆಯನ್ನು ಆಕರ್ಷಿಸುವುದಕ್ಕಾಗಿ ವರ್ಷದಲ್ಲಿ ವೃತ್ತಿಯ ನಿರ್ವಹಣೆಯ ಕೆಲವು ಕನಿಷ್ಠ ಅವಧಿ ಇರಬೇಕು ಎಂಬುದನ್ನು ನಿರ್ಧರಿಸಲಾಗಿದೆ. ವರ್ಷದಲ್ಲಿ 120 ದಿನಗಳಲ್ಲಿ ಕನಿಷ್ಠ ಅವಧಿಯನ್ನು ಹೆಚ್ಚಿಸಿ ನಿಗದಿಪಡಿಸುವುದು ಅಪೇಕ್ಷಣೀಯವೆಂದು ಪರಿಗಣಿಸಲಾಗಿದೆ.

ಕರ್ನಾಟಕ ಮುನ್ಸಿಪಾಲಿಟಿಗಳ ಅಧಿನಿಯಮದ 94ನೇ ಪ್ರಕರಣದ ಬಾಬ್ತು (xi)ರ ಪರಂತುಕದ ಅನುಸಾರವಾಗಿ ಮುನ್ಸಿಪಾಲಿಟಿಯು ವೃತ್ತಿ ತೆರಿಗೆಯನ್ನು ವಿಧಿಸಿರುವಲ್ಲಿ ಬಾಬ್ತು (ix)ರ ಮೇರೆಗೆ ತೆರಿಗೆಯನ್ನು ವಿಧಿಸತಕ್ಕದಲ್ಲದೇ ಇರುವ ವೃತ್ತಿ ತೆರಿಗೆಯನ್ನು ಈಗ ಎಲ್ಲಾ ಸಂದರ್ಭಗಳಲ್ಲಿ ವಿಧಿಸುತ್ತಿರುವುದರಿಂದ, ಕರ್ನಾಟಕ ಮುನ್ಸಿಪಾಲಿಟಿಗಳ ಅಧಿನಿಯಮದ ಪರಂತುಕದ ಬಾಬ್ತು (ix) ನ್ನು ಬಿಟ್ಟುಬಿಡಲಾಗುತ್ತಿದೆ.

ಆದ್ದರಿಂದ ಈ ವಿಧೇಯಕ.

(ಕರ್ನಾಟಕ ರಾಜ್ಯಪತ್ರ ಭಾಗ IV 2ಎ (ವಿಶೇಷ ಸಂಚಿಕೆ) ಸಂ. 469, ದಿನಾಂಕ:10.06.1982ರಲ್ಲಿ ಪ್ರಕಟಿಸಲಾಗಿದೆ.)

(1982ರ ವಿಧಾನ ಸಭೆಯ ವಿಧೇಯಕ ಸಂಖ್ಯೆ. 23 ರಿಂದ ಪಡೆಯಲಾಗಿದೆ.)

**V**

**1985ರ ತಿದ್ದುಪಡಿ ಅಧಿನಿಯಮ 1.-** ಈ ಅಧಿನಿಯಮದ ಅನುಸೂಚಿಯ ಕ್ರಮ.ಸಂಖ್ಯೆ. 1ಕ್ಕೆ ತಿದ್ದುಪಡಿಯನ್ನು, ಪ್ರತಿ ತಿಂಗಳಿಗೆ 1,500/- ರೂಪಾಯಿಗಳಿಗಿಂತ ಕಡಿಮೆ ಇರುವ ಮಜೂರಿ ಅಥವಾ ವೇತನವನ್ನು ಗಳಿಸುವ ಎಲ್ಲಾ ಮಜೂರಿ ಗಳಿಕೆದಾರರನ್ನು ವಿನಾಯಿತಿಗೊಳಿಸುವ ಸರ್ಕಾರದ ತೀರ್ಮಾನವನ್ನು ಸೇರಿಸಲು ಪ್ರಸ್ತಾಪಿಸಲಾಗಿದೆ.

ಅಸ್ತಿತ್ವದಲ್ಲಿರುವ ಉಪಬಂಧಗಳನ್ನು ಸುವ್ಯವಸ್ಥೀಕರಣಗೊಳಿಸುವುದಕ್ಕಾಗಿ ಕೆಲವು ಇತರ ತಿದ್ದುಪಡಿಗಳನ್ನು ಮಾಡುವ ಅವಕಾಶಗಳನ್ನು ಸಹ ಕಲ್ಪಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(1983ರ ವಿಧಾನಸಭೆಯ ವಿಧೇಯಕ ಸಂಖ್ಯೆ. 31 ರಿಂದ ಪಡೆಯಲಾಗಿದೆ).

**VI**

**1985ರ ತಿದ್ದುಪಡಿ ಅಧಿನಿಯಮ 29.-** 1985-86ನೇ ವರ್ಷದ ಮುಖ್ಯಮಂತ್ರಿಯವರು ತಮ್ಮ ಆಯವ್ಯಯ ಭಾಷಣದಲ್ಲಿ, ಪ್ರತಿ ತಿಂಗಳಿಗೆ 1200/- ರೂಗಳಿಗಿಂತ ಕಡಿಮೆ ವೇತನ ಮಜೂರಿಯನ್ನು ಪಡೆಯುವ ಗಳಿಕೆದಾರರನ್ನು ಮತ್ತು 75,000/-ರೂಗಳಿಗಿಂತ ಕಡಿಮೆ ವಾರ್ಷಿಕ ವಹಿವಾಟು ಹೊಂದಿರುವ ವ್ಯಾಪಾರಿಗಳನ್ನು ವೃತ್ತಿಯ ತೆರಿಗೆಯನ್ನು ಸಂದಾಯ ಮಾಡುವುದರಿಂದ ವಿನಾಯಿತಿಗೊಳಿಸುವುದೆಂಬುದನ್ನು ಮತ್ತು ಕೆಲವು ಹೆಚ್ಚಿನ ವೃತ್ತಿಗಳನ್ನು ಒಟ್ಟು ತೆರಿಗೆಗೆ ಸೇರಿಸುವುದೆಂದು ಸೂಚಿಸಿದ್ದಾರೆ.

ಆದ್ದರಿಂದ ಈ ವಿಧೇಯಕ.

(1985ರ ವಿಧಾನಸಭೆಯ ವಿಧೇಯಕ ಸಂಖ್ಯೆ. 25 ರಿಂದ ಪಡೆಯಲಾಗಿದೆ).

**VII**

**1986ರ ತಿದ್ದುಪಡಿ ಅಧಿನಿಯಮ 13.-** ಜೂನ್, 1986ರ ಈಚೆಗೆ, ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮ, 1957ರ ಅಡಿಯಲ್ಲಿ ನೋಂದಾಯಿತ ವ್ಯಾಪಾರಿಗಳಿಗೆ ಸಂಬಂಧಿಸಿದಂತೆ ವೃತ್ತಿ ತೆರಿಗೆಗೆ ಸಂಬಂಧಿಸಿದ ಕೆಲಸಗಾರರನ್ನು, ಸಂಬಂಧಪಟ್ಟ ಕರ ನಿರ್ಧರಣಾ ಪ್ರಾಧಿಕಾರಗಳಿಗೆ ವಹಿಸಿಕೊಡಲಾಗಿದೆ. ಇದು ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮ, 1957ರ ಅಡಿಯಲ್ಲಿ ನೋಂದಣಿ ಶುಲ್ಕವನ್ನು ಸಂಗ್ರಹಿಸುವ ಅಧಿಕಾರಿಗಳಿಗೆ ಪ್ರತಿ ವರ್ಷ ಏಪ್ರಿಲ್ ತಿಂಗಳಿನಲ್ಲಿ ವ್ಯಾಪಾರಿಗಳಿಗೆ ಸಹ ವೃತ್ತಿ ತೆರಿಗೆಯನ್ನು ಏಕಕಾಲದಲ್ಲಿ ಸಂಗ್ರಹಿಸಲು ಅನುಕೂಲಕರವಾಗುತ್ತದೆ. ಆದ್ದರಿಂದ, ವರ್ಷದ ಸೆಪ್ಟಂಬರ್ 30 ರಿಂದ ವರ್ಷದ ಏಪ್ರಿಲ್ 30 ರ ವರೆಗೆ ಪಟ್ಟಿಯಲ್ಲಿ ಸೇರಿಸಲಾದ ವ್ಯಕ್ತಿಗಳಿಗೆ ಸಂಬಂಧಿಸಿದಂತೆ ಸಂದಾಯ ಮಾಡುವುದಕ್ಕೆ ಕೊನೆಯ ದಿನಾಂಕವನ್ನು ಮುಂಚಿತವಾಗಿ ಸೂಚಿಸಲಾಗಿದೆ.

(1986ರ ವಿಧಾನಸಭೆಯ ವಿಧೇಯಕ ಸಂಖ್ಯೆ. 20 ರಿಂದ ಪಡೆಯಲಾಗಿದೆ).

**VIII**

**1987ರ ತಿದ್ದುಪಡಿ ಅಧಿನಿಯಮ, 13.-** ಆಯವ್ಯಯ ಭಾಷಣದಲ್ಲಿ ಮಾಡಲಾದ ಪ್ರಸ್ತಾವಗಳನ್ನು ಕಾರ್ಯರೂಪಕ್ಕೆ ತರಲು, ಕರ್ನಾಟಕ ವೃತ್ತಿಗಳ, ಕಸಬುಗಳ, ಆಜೀವಿಕೆಗಳ ಮತ್ತು ಉದ್ಯೋಗಗಳ ಮೇಲಣ ತೆರಿಗೆ ಅಧಿನಿಯಮ, 1976 ನ್ನು ತಿದ್ದುಪಡಿ ಮಾಡಲು ಪ್ರಸ್ತಾಪಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(1987ರ ವಿಧಾನಸಭೆಯ ವಿಧೇಯಕ ಸಂಖ್ಯೆ.19 ರಿಂದ ಪಡೆಯಲಾಗಿದೆ).

**IX**

**1989ರ ತಿದ್ದುಪಡಿ ಅಧಿನಿಯಮ 15.-** ಆಯವ್ಯಯ ಭಾಷಣದಲ್ಲಿ ಮಾಡಲಾದ ಪ್ರಸ್ತಾವಗಳನ್ನು ಕಾರ್ಯರೂಪಕ್ಕೆ ತರಲು, ಕರ್ನಾಟಕ ವೃತ್ತಿಗಳ ಕಸಬುಗಳ, ಆಜೀವಿಕೆಗಳ ಮತ್ತು ಉದ್ಯೋಗಗಳ ಮೇಲಣ ತೆರಿಗೆ ಅಧಿನಿಯಮ, 1976ನ್ನು ತಿದ್ದುಪಡಿ ಮಾಡಲು ಪ್ರಸ್ತಾಪಿಸಲಾಗಿದೆ. ತಡವಾಗಿ ಸಂದಾಯವಾದ ತೆರಿಗೆಯ ಸಂಬಂಧದಲ್ಲಿ 1987ರ ಮಾರ್ಚ್ 31ರ ವರೆಗೆ ಸಂದಾಯವಾಗಬೇಕಾದ ಬಡ್ಡಿಯ ಬಾಕಿಯನ್ನು ಮತ್ತು 1989ರ ಜೂನ್ 30 ರಂದು ಅಥವಾ

ಮೊದಲು ತೆರಿಗೆಗಳನ್ನು ಸಂದಾಯ ಮಾಡಿದ್ದರೆ, 1987ರ ಮಾರ್ಚ್ 31 ರವರೆಗೆ ಬರಬೇಕಾದ ತೆರಿಗೆಗಳ ಮೇಲೆ ಸಂದಾಯವಾಗಬೇಕಾದ ಬಡ್ಡಿಯನ್ನು ಸಹ ಸಂದಾಯದಿಂದ ವಿನಾಯಿತಿಗೊಳಿಸಲು ಅಧಿನಿಯಮದ 11ನೇ ಪ್ರಕರಣವನ್ನು ತಿದ್ದುಪಡಿ ಮಾಡುವ ಅವಕಾಶವನ್ನು ಸಹ ಕಲ್ಪಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(1989ರ ವಿಧಾನಸಭೆಯ ವಿಧೇಯಕ ಸಂಖ್ಯೆ. 6 ರಿಂದ ಪಡೆಯಲಾಗಿದೆ).

**X**

**1990ರ ತಿದ್ದುಪಡಿ ಅಧಿನಿಯಮ 5.-** ಆಯವ್ಯಯ ಭಾಷಣದಲ್ಲಿ ಮಾಡಲಾದ ಪ್ರಸ್ತಾವಗಳನ್ನು ಕಾರ್ಯರೂಪಕ್ಕೆ ತರಲು, ಕರ್ನಾಟಕ ವೃತ್ತಿಗಳ ಕಸಬುಗಳ, ಆಜೀವಿಕೆಗಳ ಮತ್ತು ಉದ್ಯೋಗಗಳ ಮೇಲಣ ತೆರಿಗೆ ಅಧಿನಿಯಮ, 1976ನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಸದರಿ ಅಧಿನಿಯಮ ಕೆಲವು ಉಪಬಂಧಗಳನ್ನು ಸುವ್ಯವಸ್ಥೀಕರಣಗೊಳಿಸಲು ಅವಕಾಶವನ್ನು ಸಹ ಕಲ್ಪಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(1990ರ ವಿಧಾನಸಭೆಯ ವಿಧೇಯಕ ಸಂಖ್ಯೆ. 2 ರಿಂದ ಪಡೆಯಲಾಗಿದೆ).

**XI**

**1991ರ ತಿದ್ದುಪಡಿ ಅಧಿನಿಯಮ 13.-** ಆಯವ್ಯಯ ಭಾಷಣದಲ್ಲಿ ಮಾಡಲಾದ ಪ್ರಸ್ತಾವಗಳನ್ನು ಕಾರ್ಯರೂಪಕ್ಕೆ ತರಲು, ಕರ್ನಾಟಕ ವೃತ್ತಿಗಳ, ಕಸಬುಗಳ, ಆಜೀವಿಕೆಗಳ ಮತ್ತು ಉದ್ಯೋಗಗಳ ಮೇಲಣ ತೆರಿಗೆ ಅಧಿನಿಯಮ, 1976 ನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(1991ರ ವಿಧಾನಸಭೆಯ ವಿಧೇಯಕ ಸಂಖ್ಯೆ. 8 ರಿಂದ ಪಡೆಯಲಾಗಿದೆ).

**XII**

**1992ರ ತಿದ್ದುಪಡಿ ಅಧಿನಿಯಮ 5.-** ಆಯವ್ಯಯ ಭಾಷಣದಲ್ಲಿ ಮಾಡಲಾದ ಪ್ರಸ್ತಾವಗಳನ್ನು ಕಾರ್ಯರೂಪಕ್ಕೆ ತರಲು, ಕರ್ನಾಟಕ ವೃತ್ತಿಗಳ, ಕಸಬುಗಳ, ಆಜೀವಿಕೆಗಳ ಮತ್ತು ಉದ್ಯೋಗಗಳ ಮೇಲಿನ ತೆರಿಗೆ ಅಧಿನಿಯಮ, 1976ಕ್ಕೆ ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಸದರಿ ಅಧಿನಿಯಮಕ್ಕೆ ಆನುಷಂಗಿಕ ತಿದ್ದುಪಡಿಯನ್ನು ಮಾಡಲು ಸಹ ಅವಕಾಶವನ್ನು ಕಲ್ಪಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(1992ರ ವಿಧಾನಸಭೆಯ ವಿಧೇಯಕ ಸಂಖ್ಯೆ. 13 ರಿಂದ ಪಡೆಯಲಾಗಿದೆ).

## XIII

**1993ರ ತಿದ್ದುಪಡಿ ಅಧಿನಿಯಮ 5.-** ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ಹುದ್ದೆಗಳ ಮರುಪದನಾಮವನ್ನು ಮಾಡುವ ಪರಿಣಾಮವಾಗಿ, ಸಂಬಂಧಪಟ್ಟ ತೆರಿಗೆ ಕಾನೂನುಗಳಲ್ಲಿ ಸೂಕ್ತ ತಿದ್ದುಪಡಿಗಳನ್ನು ಮಾಡುವುದು ಅವಶ್ಯಕವಾಗಿದೆ**.**

ಜನಾರ್ಧನಾಚಾರ್ಯರವರ ಪ್ರಕರಣದಲ್ಲಿ ನಮ್ಮ ಉಚ್ಛ ನ್ಯಾಯಾಲಯದ ವಿಭಾಗೀಯ ನ್ಯಾಯಪೀಠದ ತೀರ್ಪನ್ನು ರದ್ದುಗೊಳಿಸುವಾಗ ಶಾಹ್ ವಾಲೇಸ್ ಪ್ರಕರಣದಲ್ಲಿ ನಮ್ಮ ಉಚ್ಛ ನ್ಯಾಯಾಲಯದ ಪೂರ್ಣ ನ್ಯಾಯಪೀಠವು, ಅಧಿನಿಯಮದ ಸಂಬಂಧಪಟ್ಟ ಉಪಬಂಧಗಳನ್ನು ಅಧಿಸೂಚನೆಗಳ ಮೂಲಕ ವಿನಾಯಿತಿಗಳನ್ನು ನೀಡಿರುವಂಥ ಸರಕುಗಳ ವರ್ಗಕ್ಕೆ ಸಂಬಂಧಿಸಿದ ಯಾವುದೇ ನಮೂದನ್ನು ಸೇರಿಸುವ ಮೂಲಕ ತರುವಾಯ ತಿದ್ದುಪಡಿ ಮಾಡಿದಾಗ, ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮ, 1957ರ 8ಎ ಪ್ರಕರಣದ ಮೇರೆಗೆ ಹೊರಡಿಸಲಾದ ಅಧಿಸೂಚನೆಗಳು ಜಾರಿಯಲ್ಲಿಲ್ಲದ್ದಾಗುವುದೆಂದು ತೀರ್ಮಾನಿಸಿತ್ತು. ಆದ್ದರಿಂದ, ಈಗಾಗಲೇ ಹೊರಡಿಸಲಾದ ಅಧಿಸೂಚನೆಗಳನ್ನು ಹೊರತುಪಡಿಸಲು ಸದರಿ ಅಧಿನಿಯಮವನ್ನು ಸೂಕ್ತವಾಗಿ ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಯಿತು.

ವಿಷಯವು ತುರ್ತು ಸ್ವರೂಪದ್ದಾಗಿದ್ದುದರಿಂದ ಮತ್ತು ಉಭಯ ಸದನಗಳೆರಡೂ ಅಧಿವೇಶನದಲ್ಲಿಲ್ಲದಿದ್ದುದರಿಂದ, ಕರ್ನಾಟಕ ತೆರಿಗೆ ಕಾನೂನುಗಳು (ತಿದ್ದುಪಡಿ) ಅಧ್ಯಾದೇಶ 1992 ಅನ್ನು ಹೊರಡಿಸುವ ಮೂಲಕ ತಿದ್ದುಪಡಿಗಳನ್ನು ಮಾಡಲಾಗಿದೆ.

ಮೇಲಿನ ಆಧ್ಯಾದೇಶಕ್ಕೆ ಬದಲಾಗಿ ಈ ವಿಧೇಯಕವನ್ನು ಮಂಡಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(1992ರ ವಿಧಾನಸಭೆಯ ವಿಧೇಯಕ ಸಂಖ್ಯೆ. 29 ರಿಂದ ಪಡೆಯಲಾಗಿದೆ).

## XIV

**1993ರ ತಿದ್ದುಪಡಿ ಅಧಿನಿಯಮ 11.-** ಆಯವ್ಯಯ ಭಾಷಣದಲ್ಲಿ ಮಾಡಲಾದ ಪ್ರಸ್ತಾವಗಳನ್ನು ಮತ್ತು ಅದಕ್ಕೆ ಸಂಬಂಧಿಸಿದ ವಿಷಯಗಳನ್ನು ಕಾರ್ಯರೂಪಕ್ಕೆ ತರಲು, ಕರ್ನಾಟಕ ವಿಲಾಸಿ ವಸ್ತುಗಳ ಮೇಲಿನ ತೆರಿಗೆ ಅಧಿನಿಯಮ, 1979 (ಹೋಟೆಲ್ ಗಳು ಮತ್ತು ವಸತಿ ಗೃಹಗಳು), ಕರ್ನಾಟಕ ವೃತ್ತಿಗಳ, ಕಸಬುಗಳ, ಆಜೀವಿಕೆಗಳ ಮತ್ತು ಉದ್ಯೋಗಗಳ ಮೇಲಿನ ತೆರಿಗೆ ಅಧಿನಿಯಮ, 1976, ಕರ್ನಾಟಕ ಮನೋರಂಜನಾ ತೆರಿಗೆ ಅಧಿನಿಯಮ, 1958 ಮತ್ತು ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮ, 1958 ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮ, 1957 ಅನ್ನು ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.
(1993ರ ವಿಧಾನಸಭೆಯ ವಿಧೇಯಕ ಸಂಖ್ಯೆ. 15 ರಿಂದ ಪಡೆಯಲಾಗಿದೆ).

## XV

**1994ರ ತಿದ್ದುಪಡಿ ಅಧಿನಿಯಮ 18.-** ಆಯವ್ಯಯ ಭಾಷಣದಲ್ಲಿ ಮಾಡಲಾದ ಪ್ರಸ್ತಾವಗಳನ್ನು ಮತ್ತು ಅದಕ್ಕೆ ಸಂಬಂಧಿಸಿದ ವಿಷಯಗಳನ್ನು ಕಾರ್ಯರೂಪಕ್ಕೆ ತರಲು, ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮ, 1957, ಕರ್ನಾಟಕ ವೃತ್ತಿಗಳ, ಕಸಬುಗಳ, ಆಜೀವಿಕೆಗಳ ಮತ್ತು ಉದ್ಯೋಗಗಳ ಮೇಲಿನ ತೆರಿಗೆ ಅಧಿನಿಯಮ, 1976 ಕರ್ನಾಟಕ ಸರಕುಗಳ ಪ್ರವೇಶದ ಮೇಲಿನ ತೆರಿಗೆ ಅಧಿನಿಯಮ, 1979, ಕರ್ನಾಟಕ ಮನೋರಂಜನಾ ತೆರಿಗೆ ಅಧಿನಿಯಮ, 1958, ಮೈಸೂರು ಜೂಜು ತೆರಿಗೆ ಅಧಿನಿಯಮ, 1932 ಮತ್ತು ಕರ್ನಾಟಕ ಕೃಷಿ ಆದಾಯ ತೆರಿಗೆ ಅಧಿನಿಯಮ, 1957 ಅನ್ನು ತಿದ್ದುಪಡಿಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.
(1994ರ ವಿಧಾನಸಭೆಯ ವಿಧೇಯಕ ಸಂಖ್ಯೆ. 12 ರಿಂದ ಪಡೆಯಲಾಗಿದೆ).

**XVI**

**1995ರ ತಿದ್ದುಪಡಿ ಅಧಿನಿಯಮ 6.-** ಆಯವ್ಯಯ ಭಾಷಣದಲ್ಲಿ ಮಾಡಲಾದ ಪ್ರಸ್ತಾವಗಳನ್ನು ಮತ್ತು ಅದಕ್ಕೆ ಸಂಬಂಧಿಸಿದ ವಿಷಯಗಳನ್ನು ಕಾರ್ಯರೂಪಕ್ಕೆ ತರಲು ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮ, 1957, ಕರ್ನಾಟಕ ಕೃಷಿ ಆದಾಯ ತೆರಿಗೆ ಅಧಿನಿಯಮ, 1957, ಕರ್ನಾಟಕ ವೃತ್ತಿಗಳ, ಕಸಬುಗಳ, ಆಜೀವಿಕೆಗಳ ಮತ್ತು ಉದ್ಯೋಗಗಳ ಮೇಲಿನ ತೆರಿಗೆ ಅಧಿನಿಯಮ, 1976, ಕರ್ನಾಟಕ ಮನೋರಂಜನಾ ತೆರಿಗೆ ಅಧಿನಿಯಮ, 1958 ಕರ್ನಾಟಕ ಸರಕುಗಳ ಪ್ರವೇಶದ ಮೇಲಿನ ತೆರಿಗೆ ಅಧಿನಿಯಮ, 1979, ಕರ್ನಾಟಕ ವಿಲಾಸಿ (ಹೋಟೆಲ್ ಗಳು ಮತ್ತು ವಸತಿ ಗೃಹಗಳು), ಮೇಲಿನ ತೆರಿಗೆ ಅಧಿನಿಯಮ, 1979, ಮೈಸೂರು ಜೂಜು ತೆರಿಗೆ ಅಧಿನಿಯಮ, 1932 ಅನ್ನು ತಿದ್ದುಪಡಿಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.
(1995ರ ವಿಧಾನಸಭೆಯ ವಿಧೇಯಕ ಸಂಖ್ಯೆ. 4 ರಿಂದ ಪಡೆಯಲಾಗಿದೆ. )

**XVII**

**1996ರ ತಿದ್ದುಪಡಿ ಅಧಿನಿಯಮ 5.-** ಆಯವ್ಯಯ ಭಾಷಣದಲ್ಲಿ ಮಾಡಲಾದ ಪ್ರಸ್ತಾವಗಳನ್ನು ಮತ್ತು ಅದಕ್ಕೆ ಸಂಬಂಧಿಸಿದ ವಿಷಯಗಳನ್ನು ಕಾರ್ಯರೂಪಕ್ಕೆ ತರಲು ಕರ್ನಾಟಕ ವಿಲಾಸಿ ವಸ್ತುಗಳ (ಹೋಟೆಲ್‌ಗಳು ಮತ್ತು ವಸತಿ ಗೃಹಗಳು) ಅಧಿನಿಯಮ, 1979 ಕರ್ನಾಟಕ ವೃತ್ತಿಗಳ, ಕಸಬುಗಳ, ಆಜೀವಿಕೆಗಳ ಮತ್ತು ಉದ್ಯೋಗಗಳ ಮೇಲಿನ ತೆರಿಗೆ ಅಧಿನಿಯಮ, 1976. ಕರ್ನಾಟಕ ಮನೋರಂಜನಾ ತೆರಿಗೆ ಅಧಿನಿಯಮ, 1958, ಕರ್ನಾಟಕ ಕೃಷಿ ಆದಾಯ ತೆರಿಗೆ ಅಧಿನಿಯಮ, 1957 ಮತ್ತು ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮ, 1957 ಅನ್ನು ತಿದ್ದುಪಡಿಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.
(1996ರ ವಿಧಾನಸಭೆಯ ವಿಧೇಯಕ ಸಂಖ್ಯೆ.12 ರಿಂದ ಪಡೆಯಲಾಗಿದೆ.)

**XVIII**

**1997ರ ತಿದ್ದುಪಡಿ ಅಧಿನಿಯಮ 7.-** ಆಯವ್ಯಯ ಭಾಷಣದಲ್ಲಿ ಮಾಡಲಾದ ಪ್ರಸ್ತಾವಗಳನ್ನು ಮತ್ತು ಅದಕ್ಕೆ ಸಂಬಂಧಿಸಿದ ವಿಷಯಗಳನ್ನು ಕಾರ್ಯರೂಪಕ್ಕೆ ತರಲು ಕರ್ನಾಟಕ ವಿಲಾಸ ತೆರಿಗೆ (ಹೋಟೆಲ್, ವಸತಿ ನಿವಾಸ ಮತ್ತು ಕಲ್ಯಾಣ ಮಂಟಪಗಳು) ಅಧಿನಿಯಮ, 1979 (1979ರ ಕರ್ನಾಟಕ ಅಧಿನಿಯಮ 22), ಕರ್ನಾಟಕ ಸರಕುಗಳ ಪ್ರವೇಶದ ಮೇಲಿನ ತೆರಿಗೆ ಅಧಿನಿಯಮ, 1979 (1979 ರ ಕರ್ನಾಟಕ ಅಧಿನಿಯಮ 27), ಕರ್ನಾಟಕ ವೃತ್ತಿಗಳ, ಕಸಬುಗಳ, ಆಜೀವಿಕೆಗಳ ಮತ್ತು ಉದ್ಯೋಗಗಳ ಮೇಲಿನ ತೆರಿಗೆ ಅಧಿನಿಯಮ,1976 (1976 ರ ಕರ್ನಾಟಕ ಅಧಿನಿಯಮ 35), ಕರ್ನಾಟಕ ಅಬಕಾರಿ ಅಧಿನಿಯಮ, 1966 (1966 ರ ಕರ್ನಾಟಕ ಅಧಿನಿಯಮ 21), ಕರ್ನಾಟಕ ಮನೋರಂಜನಾ ತೆರಿಗೆ ಅಧಿನಿಯಮ, 1958 (1976 ರ ಕರ್ನಾಟಕ ಅಧಿನಿಯಮ 30), ಕರ್ನಾಟಕ ಕೃಷಿ ಆದಾಯ ತೆರಿಗೆ ಅಧಿನಿಯಮ, 1957 (1957 ರ ಕರ್ನಾಟಕ ಅಧಿನಿಯಮ 22), ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮ, 1957 (1957 ರ ಕರ್ನಾಟಕ ಅಧಿನಿಯಮ 25) ಮೈಸೂರು ಜೂಜು ತೆರಿಗೆ ಅಧಿನಿಯಮ, 1932 (1932 ರ ಮೈಸೂರು ಅಧಿನಿಯಮ IX) ಅನ್ನು ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.
(1997ರ ವಿಧಾನಸಭೆಯ ವಿಧೇಯಕ ಸಂಖ್ಯೆ.12 ರಿಂದ ಪಡೆಯಲಾಗಿದೆ.)

## XIX

**1998ರ ತಿದ್ದುಪಡಿ ಅಧಿನಿಯಮ 3.-** ಆಯವ್ಯಯ ಭಾಷಣದಲ್ಲಿ ಮಾಡಲಾದ ಪ್ರಸ್ತಾವನೆಗಳನ್ನು ಮತ್ತು ಅದಕ್ಕೆ ಸಂಬಂಧಪಟ್ಟ ವಿಷಯಗಳನ್ನು ಕಾರ್ಯರೂಪಕ್ಕೆ ತರಲು ಅಗತ್ಯವೆಂದು ಪರಿಗಣಿಸಲಾಗಿದೆ. ಕರ್ನಾಟಕ ತೆರಿಗೆ ಕಾನೂನುಗಳ ತಿದ್ದುಪಡಿ ಅಧಿನಿಯಮ, 1997 (1997ರ ಕರ್ನಾಟಕ ಅಧಿನಿಯಮ 7), ಕರ್ನಾಟಕ ಸರಕುಗಳ ಪ್ರವೇಶ ತೆರಿಗೆ ಅಧಿನಿಯಮ, 1979 (1979ರ ಕರ್ನಾಟಕ ಅಧಿನಿಯಮ 27), ಕರ್ನಾಟಕ ವಿಲಾಸ ತೆರಿಗೆ (ಹೋಟೆಲ್, ವಸತಿ ನಿವಾಸ ಮತ್ತು ಕಲ್ಯಾಣ ಮಂಟಪಗಳು) ಅಧಿನಿಯಮ, 1979 (1979ರ ಕರ್ನಾಟಕ ಅಧಿನಿಯಮ 22), ಕರ್ನಾಟಕ ಮನೋರಂಜನಾ ತೆರಿಗೆ ಅಧಿನಿಯಮ, 1958 (1958ರ ಕರ್ನಾಟಕ ಅಧಿನಿಯಮ 30), ಮೈಸೂರು ಜೂಜು ತೆರಿಗೆ ಅಧಿನಿಯಮ, 1932 (1932ರ ಮೈಸೂರು ಅಧಿನಿಯಮ IX), ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮ, 1957 (1957ರ ಕರ್ನಾಟಕ ಅಧಿನಿಯಮ 25)ನ್ನು ತಿದ್ದುಪಡಿ ಮಾಡುವುದು ಮತ್ತು ಕೆಲವೊಂದು ಆನುಷಂಗಿಕ ತಿದ್ದುಪಡಿಗಳನ್ನು ಸಹ ಮಾಡಲಾಗುತ್ತದೆ.

ಆದ್ದರಿಂದ ಈ ವಿಧೇಯಕ.

(1998ರ ವಿಧಾನಸಭೆ ವಿಧೇಯಕ ಸಂಖ್ಯೆ. 6 ರಿಂದ ಪಡೆಯಲಾಗಿದೆ)

## XX

**2001ರ ತಿದ್ದುಪಡಿ ಅಧಿನಿಯಮ 5.-** ಆಯವ್ಯಯ ಭಾಷಣದಲ್ಲಿ ಮಾಡಲಾದ ಪ್ರಸ್ತಾವನೆಗಳನ್ನು ಕಾರ್ಯರೂಪಕ್ಕೆ ತರಲು, ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮ, 1957 (1957ರ ಕರ್ನಾಟಕ ಅಧಿನಿಯಮ 25), ಕರ್ನಾಟಕ ಸರಕುಗಳ ಪ್ರವೇಶ ತೆರಿಗೆ ಅಧಿನಿಯಮ 1979 (1979ರ ಕರ್ನಾಟಕ ಅಧಿನಿಯಮ 27), ಕರ್ನಾಟಕ ವಿಲಾಸ ತೆರಿಗೆ ಅಧಿನಿಯಮ, 1979 (1979ರ ಕರ್ನಾಟಕ ಅಧಿನಿಯಮ 22), ಕರ್ನಾಟಕ ಮನೋರಂಜನಾ ತೆರಿಗೆ ಅಧಿನಿಯಮ, 1958 (1958ರ ಕರ್ನಾಟಕ ಅಧಿನಿಯಮ 30), ಕರ್ನಾಟಕ ವೃತ್ತಿಗಳು, ಕಸಬುಗಳು, ಆಜೀವಿಕೆಗಳು ಮತ್ತು ಉದ್ಯೋಗಗಳ ಮೇಲಣ ತೆರಿಗೆ ಅಧಿನಿಯಮ, 1976 (1976ರ ಕರ್ನಾಟಕ ಅಧಿನಿಯಮ 35) ಮತ್ತು ಕರ್ನಾಟಕ ಕೃಷಿ ವರಮಾನ ತೆರಿಗೆ ಅಧಿನಿಯಮ, 1957 (1957ರ ಕರ್ನಾಟಕ ಅಧಿನಿಯಮ 22)ನ್ನು ತಿದ್ದುಪಡಿ ಮಾಡುವುದು ಅಗತ್ಯವೆಂದು ಪರಿಗಣಿಸಲಾಗಿದೆ. ಕೆಲವೊಂದು ಆನುಷಂಗಿಕ ತಿದ್ದುಪಡಿಗಳನ್ನು ಸಹ ಮಾಡಲಾಗುತ್ತದೆ.

ಆದ್ದರಿಂದ ಈ ವಿಧೇಯಕ.

(2001ರ ವಿಧಾನಸಭೆ ವಿಧೇಯಕ ಸಂಖ್ಯೆ.7, ಕಡತ ಸಂಖ್ಯೆ. ಸಂವ್ಯಶಾಇ 9 ಶಾಸನ 2001ರ ಅನ್ವಯ)

## XXI

**2003ರ ತಿದ್ದುಪಡಿ ಅಧಿನಿಯಮ 7**.- ಆಯವ್ಯಯ ಭಾಷಣದಲ್ಲಿ ಮಾಡಲಾದ ಪ್ರಸ್ತಾವನೆಗಳನ್ನು ಕಾರ್ಯರೂಪಕ್ಕೆ ತರಲು, ಕರ್ನಾಟಕ ಕೃಷಿ ಆದಾಯ ತೆರಿಗೆ ಅಧಿನಿಯಮ, 1957, ಕರ್ನಾಟಕ ತೆರಿಗೆ ಅಧಿನಿಯಮ, 1957, ಕರ್ನಾಟಕ ಮನೋರಂಜನಾ ತೆರಿಗೆ ಅಧಿನಿಯಮ, 1958, ಕರ್ನಾಟಕ ವೃತ್ತಿಗಳು, ಕಸಬುಗಳು, ಆಜೀವಿಕೆಗಳು ಮತ್ತು ಉದ್ಯೋಗಗಳ ಮೇಲಣ ತೆರಿಗೆ ಅಧಿನಿಯಮ, 1976, ಕರ್ನಾಟಕ ವಿಲಾಸ ತೆರಿಗೆ ಅಧಿನಿಯಮ, 1979 ಮತ್ತು ಕರ್ನಾಟಕ ವಿದ್ಯುಚ್ಛಕ್ತಿ (ಕರ ನಿರ್ಧರಣಾ ಬಳಕೆ) ಅಧಿನಿಯಮ, 1979ನ್ನು ತಿದ್ದುಪಡಿ ಮಾಡುವುದು ಅಗತ್ಯವೆಂದು ಪರಿಗಣಿಸಲಾಗಿದೆ. ಕೆಲವೊಂದು ಆನುಷಂಗಿಕ ತಿದ್ದುಪಡಿಗಳನ್ನು ಸಹ ಮಾಡಲಾಗುತ್ತದೆ.

ಆದ್ದರಿಂದ ಈ ವಿಧೇಯಕ.

(2003ರ ವಿಧಾನಸಭೆ ವಿಧೇಯಕ ಸಂಖ್ಯೆ. 9, ಕಡತ ಸಂಖ್ಯೆ. ಸಂವ್ಯಶಾಇ 17 ಶಾಸನ 2003ರ)

**XXII**

**2003ರ ತಿದ್ದುಪಡಿ ಅಧಿನಿಯಮ 13.-** ಕರ್ನಾಟಕ ಅಧಿನಿಯಮಗಳ ವಿವಿಧ ಕ್ರೋಢೀಕೃತ ಮತ್ತು ಇಂದೀಕೃತ ಸಂಪುಟಗಳನ್ನು ಸಿದ್ದಪಡಿಸುವುದು ಮತ್ತು ಕಾಲಕಾಲಕ್ಕೆ ಎಲ್ಲಾ ಅಗತ್ಯತೆ ತೀರಿದ ತಿದ್ದುಪಡಿ ಅಧಿನಿಯಮಗಳನ್ನು ನಿರಸನಗೊಳಿಸುವುದು ಅಗತ್ಯವೆಂದು ಪರಿಗಣಿಸಲಾಗಿದೆ.

ಸರ್ಕಾರವು ಮೇಲಿನ ಉದ್ದೇಶಕ್ಕಾಗಿ ಏಕಸದಸ್ಯ ಸಮಿತಿಯನ್ನು ರಚಿಸಿತು. ಈ ಸಮಿತಿಯು 1.11.1956 ರಿಂದ 31.12.2000 ರ ಅವಧಿಯಲ್ಲಿನ ಕರ್ನಾಟಕ ಅಧಿನಿಯಮಗಳನ್ನು ಪರಿಶೀಲಿಸಿತು ಮತ್ತು "ನಿರಸನ ಮತ್ತು ತಿದ್ದುಪಡಿ ಮಾಡುವ ವಿಧೇಯಕ, 2002"ನ್ನು ಪ್ರಸ್ತಾವಿಸಿತು. ಇದು, ಈ ಕೆಳಕಂಡ ವಿವಿಧ ಅಧಿನಿಯಮಗಳನ್ನು ನಿರಸನಗೊಳಿಸುವುದನ್ನು ಉದ್ದೇಶಿಸಿದೆ,-

(i) ಸದ್ಯದಲ್ಲಿ ಜಾರಿಯಲ್ಲಿರುವ ಅಥವಾ ಇಲ್ಲದಿರುವ, ಕರ್ನಾಟಕ ಅಧಿನಿಯಮಗಳನ್ನು ತಿದ್ದುಪಡಿ ಮಾಡಿರುವ ಅಧಿನಿಯಮಗಳು;

(ii) ಅಸ್ತಿತ್ವದಲ್ಲಿ ಜಾರಿಯಲ್ಲಿಲ್ಲದಿರುವ, ಪ್ರಾದೇಶಿಕ ಅಧಿನಿಯಮಗಳನ್ನು ತಿದ್ದುಪಡಿ ಮಾಡಿರುವ ಅಧಿನಿಯಮಗಳು;

(iii) ಅಗತ್ಯತೆ ತೀರಿದ ವಿನಿಯೋಗ ಅಧಿನಿಯಮಗಳು;

(iv) ಅನೂರ್ಜಿತಗೊಂಡಿರುವ ಅಥವಾ ನ್ಯಾಯಾಲಯಗಳು ಅಗತ್ಯ ಇಂಗಿತವಾಗಿ ಅನೂರ್ಜಿತಗೊಳಿಸಿರುವ ಅಧಿನಿಯಮಗಳು;

(v) ಕೇಂದ್ರ ಅಧಿನಿಯಮಗಳು ಇಂಗಿತವಾಗಿ ನಿರಸನಗೊಳಿಸಿದ ಅಧಿನಿಯಮಗಳು;

(vi) ತಾತ್ಕಾಲಿಕ ಮತ್ತು ಅಗತ್ಯತೆ ತೀರಿರುವಂಥ ಅಧಿನಿಯಮಿತಿಗಳಾಗಿರುವ ಅಧಿನಿಯಮಗಳು; ಮತ್ತು

(vii) ಜಾರಿಯಲ್ಲಿರುವ ಕೇಂದ್ರ ಅಧಿನಿಯಮಗಳು ಮತ್ತು ಪ್ರಾದೇಶಿಕ ಅಧಿನಿಯಮಗಳನ್ನು ತಿದ್ದುಪಡಿ ಮಾಡುವ ಅಧಿನಿಯಮಗಳು.

ಈಗಾಗಲೇ ವ್ಯಕ್ತವಾಗಿ ನಿರಸಿತವಾದ ಅಧಿನಿಯಮಗಳನ್ನು ಈ ವಿಧೇಯಕವು ಒಳಗೊಳ್ಳುವುದಿಲ್ಲ.

ಅಗತ್ಯವೆಂದು ಪರಿಗಣಿಸಿರುವ ಕೆಲವೊಂದು ಅಧಿನಿಯಮಗಳನ್ನು ತಿದ್ದುಪಡಿ ಮಾಡುವ ಉದ್ದೇಶವನ್ನು ಸಹ ಈ ವಿಧೇಯಕ ಹೊಂದಿದೆ.

ಆದ್ದರಿಂದ ಈ ವಿಧೇಯಕ.

(2002ರ ವಿಧಾನ ಪರಿಷತ್‌ನ ವಿಧೇಯಕ ಸಂಖ್ಯೆ.4)
[ಏಳನೇ ಅನುಸೂಚಿಯ II ಮತ್ತು IIIನೇ ಪಟ್ಟಿಯ ವಿವಿಧ ನಮೂದುಗಳು]

**XXIII**

**2004ರ ತಿದ್ದುಪಡಿ ಅಧಿನಿಯಮ 26**.- ಆಯವ್ಯಯ ಭಾಷಣದಲ್ಲಿ ಮಾಡಲಾದ ಪ್ರಸ್ತಾವನೆಗಳನ್ನು ಕಾರ್ಯರೂಪಕ್ಕೆ ತರಲು, ಮೈಸೂರು ಜೂಜು ತೆರಿಗೆ ಅಧಿನಿಯಮ, 1932 (1932ರ ಮೈಸೂರು ಅಧಿನಿಯಮ IX), ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮ, 1957 (1957ರ ಕರ್ನಾಟಕ ಅಧಿನಿಯಮ 25), ಕರ್ನಾಟಕ ಮನೋರಂಜನಾ ತೆರಿಗೆ ಅಧಿನಿಯಮ, 1958 (1958ರ ಕರ್ನಾಟಕ ಅಧಿನಿಯಮ 30), ಕರ್ನಾಟಕ ವೃತ್ತಿಗಳು, ಕಸಬುಗಳು, ಆಜೀವಿಕೆಗಳು ಮತ್ತು ಉದ್ಯೋಗಗಳ ಮೇಲಣ ತೆರಿಗೆ ಅಧಿನಿಯಮ, 1976 (1976ರ ಕರ್ನಾಟಕ ಅಧಿನಿಯಮ 35), ಕರ್ನಾಟಕ ವಿಲಾಸ ತೆರಿಗೆ ಅಧಿನಿಯಮ, 1979 (1979ರ ಕರ್ನಾಟಕ ಅಧಿನಿಯಮ 22) ಮತ್ತು ಕರ್ನಾಟಕ ಸರಕುಗಳ ಪ್ರವೇಶ ತೆರಿಗೆ ಅಧಿನಿಯಮ 1979 (1979ರ ಕರ್ನಾಟಕ ಅಧಿನಿಯಮ 27)ನ್ನು ತಿದ್ದುಪಡಿ ಮಾಡುವುದು ಅಗತ್ಯವೆಂದು ಪರಿಗಣಿಸಲಾಗಿದೆ.

ಸದರಿ ಅಧಿನಿಯಮಗಳ ಕೆಲವು ಉಪಬಂಧಗಳನ್ನು ತರ್ಕಬದ್ಧಗೊಳಿಸಲು ಮತ್ತು ಕ್ರೋಢೀಕರಿಸಲು ಮತ್ತು ಈಗಾಗಲೇ ಘೋಷಿಸಿರುವ ಪರಿಹಾರಗಳನ್ನು ಅನುಷ್ಠಾನಕ್ಕೆ ತರಲು ಕೆಲವೊಂದು ಆನುಷಂಗಿಕ ತಿದ್ದುಪಡಿಗಳನ್ನು ಮಾಡಲು ಈ ಅವಕಾಶವನ್ನು ಸಹ ತೆಗೆದುಕೊಳ್ಳಲಾಗಿದೆ.

ಆದ್ದರಿಂದ ಈ ವಿಧೇಯಕ.
(ಕಡತ ಸಂಖ್ಯೆ. ಸಂವ್ಯಶಾಇ 23 ಶಾಸನ 2004ರ ಅನ್ವಯ)

**XXIV**

**2005ರ ತಿದ್ದುಪಡಿ ಅಧಿನಿಯಮ 11.-** ಆಯವ್ಯಯ ಭಾಷಣದಲ್ಲಿ ಮಾಡಲಾದ ಪ್ರಸ್ತಾವನೆಗಳನ್ನು ಕಾರ್ಯರೂಪಕ್ಕೆ ತರಲು, ಮೈಸೂರು ಜೂಜು ತೆರಿಗೆ ಅಧಿನಿಯಮ, 1932 (1932 ರ ಮೈಸೂರು ಅಧಿನಿಯಮ IX) ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮ, 1957 (1957ರ ಕರ್ನಾಟಕ ಅಧಿನಿಯಮ 25), ಕರ್ನಾಟಕ ಮನೋರಂಜನಾ ತೆರಿಗೆ ಅಧಿನಿಯಮ, 1958 (1958ರ ಕರ್ನಾಟಕ ಅಧಿನಿಯಮ 30), ಕರ್ನಾಟಕ ವೃತ್ತಿಗಳ, ಕಸಬುಗಳ, ಆಜೀವಿಕೆಗಳ ಮತ್ತು ಉದ್ಯೋಗಗಳ ಮೇಲಿನ ತೆರಿಗೆ ಅಧಿನಿಯಮ, 1976 (1976ರ ಕರ್ನಾಟಕ ಅಧಿನಿಯಮ 35), ಕರ್ನಾಟಕ ಸರಕುಗಳ ಪ್ರವೇಶದ ಮೇಲಿನ ತೆರಿಗೆ ಅಧಿನಿಯಮ, 1979 (1979ರ ಕರ್ನಾಟಕ ಅಧಿನಿಯಮ 27), ಕರ್ನಾಟಕ ಲಾಟರಿಗಳ ಮೇಲಿನ ತೆರಿಗೆ ಅಧಿನಿಯಮ, 2004 (2004ರ ಕರ್ನಾಟಕ ಅಧಿನಿಯಮ 3), ಕರ್ನಾಟಕ ಸರಕುಗಳ ಪ್ರವೇಶದ ಮೇಲಿನ ವಿಶೇಷ ತೆರಿಗೆ ಅಧಿನಿಯಮ, 2004 (2004ರ ಕರ್ನಾಟಕ ಅಧಿನಿಯಮ 29) ಮತ್ತು ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮ, 2003 (2004ರ ಕರ್ನಾಟಕ ಅಧಿನಿಯಮ 32) ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ

ಸದರಿ ಅಧಿನಿಯಮಗಳ ಕೆಲವು ಉಪಬಂಧಗಳನ್ನು ಸುಸಂಗತವಾಗಿರುವಂತೆ ಮಾಡಲು ಅವಕಾಶವನ್ನು ಸಹ ಪಡೆಯಲಾಗಿದೆ.

ಆದ್ದರಿಂದ ಈ ವಿಧೇಯಕ.

**XXV**

**2006ರ ತಿದ್ದುಪಡಿ ಅಧಿನಿಯಮ 5.-** ಆಯವ್ಯಯ ಭಾಷಣದಲ್ಲಿ ಮತ್ತು ಅವುಗಳಿಗೆ ಸಂಬಂಧಪಟ್ಟ ವಿಷಯಗಳಿಗಾಗಿ ಮಾಡಲಾದ ಪ್ರಸ್ತಾವನೆಗಳನ್ನು ಕಾರ್ಯರೂಪಕ್ಕೆ ತರಲು ಕರ್ನಾಟಕ ಕೃಷಿ ಆದಾಯ ತೆರಿಗೆ ಅಧಿನಿಯಮ, 1957, ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮ, 1957, ಕರ್ನಾಟಕ ಮನೋರಂಜನಾ ತೆರಿಗೆ ಅಧಿನಿಯಮ, 1958, ಕರ್ನಾಟಕ ವೃತ್ತಿಗಳ, ಕಸಬುಗಳ, ಆಜೀವಿಕೆಗಳ ಮತ್ತು ಉದ್ಯೋಗಗಳ ಮೇಲಿನ ತೆರಿಗೆ ಅಧಿನಿಯಮ, 1976, ಕರ್ನಾಟಕ ಭೋಗವಸ್ತುಗಳ ತೆರಿಗೆ ಅಧಿನಿಯಮ, 1979 ಮತ್ತು ಕರ್ನಾಟಕ ಸರಕುಗಳ ಪ್ರವೇಶದ ಮೇಲೆ ತೆರಿಗೆ ಅಧಿನಿಯಮ, 1979 ನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಕೆಲವು ತತ್ಪರಿಣಾಮವಾದ ಮತ್ತು ಪ್ರಾಸಂಗಿಕವಾದ ತಿದ್ದುಪಡಿಗಳನ್ನು ಸಹ ಮಾಡಲಾಗಿದೆ**.**

ಆದ್ದರಿಂದ ಈ ವಿಧೇಯಕ.
[2006ರ ವಿಧಾನ ಸಭೆಯ ವಿಧೇಯ ಸಂಖ್ಯೆ: 6]

**XXVI**

**2007ರ ತಿದ್ದುಪಡಿ ಅಧಿನಿಯಮ 5.-** ಆಯವ್ಯಯ ಭಾಷಣದಲ್ಲಿ ಮಾಡಲಾದ ಪ್ರಸ್ತಾವನೆಗಳನ್ನು ಕಾರ್ಯರೂಪಕ್ಕೆ ತರಲು ಮತ್ತು ಅವುಗಳಿಗೆ ಸಂಬಂಧಪಟ್ಟ ವಿಷಯಗಳಿಗಾಗಿ, ಕರ್ನಾಟಕ ಮನೋರಂಜನಾ ತೆರಿಗೆ ಅಧಿನಿಯಮ, 1958, ಕರ್ನಾಟಕ ವೃತ್ತಿಗಳ, ಕಸಬುಗಳ, ಆಜೀವಿಕೆಗಳ ಮತ್ತು ಉದ್ಯೋಗಗಳ ಮೇಲಿನ ತೆರಿಗೆ ಅಧಿನಿಯಮ, 1976 ಮತ್ತು ಕರ್ನಾಟಕ ಭೋಗವಸ್ತುಗಳ ತೆರಿಗೆ ಅಧಿನಿಯಮ, 1979 ರ ತಿದ್ದುಪಡಿ ಮಾಡುವುದು ಮತ್ತು ರಾಜ್ಯ ತೆರಿಗೆಗಳಲ್ಲಿ ಸುಧಾರಣೆಗಳನ್ನು ತರಲು ರಾಷ್ಟ್ರದ ಒಟ್ಟು ಅಭಿಪ್ರಾಯದ ಭಾಗವಾಗಿ, ಕೈಗಾರಿಕೆಗಳಿಗೆ ಮಾರಾಟ ತೆರಿಗೆ ಆಧಾರಿತ ಪ್ರೋತ್ಸಾಹಧನವನ್ನು ಮುಂದುವರೆಸುವುದಕ್ಕೆ ಸಂಬಂಧಿಸದಂತೆ ರಾಜ್ಯ ಸರ್ಕಾರವು ತೆಗೆದುಕೊಂಡ ತೀರ್ಮಾನವನ್ನು ಕಾರ್ಯರೂಪಕ್ಕೆ ತರಲು ಉತ್ತರಾನ್ವಯವಾಗಿಯಾಗಲೀ ಅಥವಾ ಪೂರ್ವಾನ್ವಯವಾಗಿಯಾಗಲೀ 8-ಎ ಪ್ರಕರಣದ ಮೇರೆಗೆ ಹೊರಡಿಸಲಾದ ಯಾವುದೇ

ಅಧಿಸೂಚನೆಯನ್ನು ಹಿಂತೆದುಕೊಳ್ಳಲು ರಾಜ್ಯ ಸರ್ಕಾರವನ್ನು ಅಧಿಕೃತಗೊಳಿಸುವುದಕ್ಕಾಗಿ ಒಂದು ಉಪಬಂಧವನ್ನು ಕಲ್ಪಿಸಲು ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮ, 1957 ಅನ್ನು ತಿದ್ದುಪಡಿ ಮಾಡುವುದು ಸಹ ಅವಶ್ಯಕವೆಂದು ಪರಿಗಣಿಸಲಾಗಿದೆ.

ಕೆಲವು ತತ್ಪರಿಣಾಮವಾದ ಮತ್ತು ಪ್ರಾಸಂಗಿಕವಾದ ತಿದ್ದುಪಡಿಗಳನ್ನು ಸಹ ಮಾಡಲಾಗಿದೆ**.**

ಆದ್ದರಿಂದ ಈ ವಿಧೇಯಕ.

[2007ರ ವಿಧಾನ ಸಭೆಯ ವಿಧೇಯಕ ಸಂಖ್ಯೆ: 22]

[ಭಾರತ ಸಂವಿಧಾನದ ಏಳನೇ ಅನುಸೂಚಿಯ IIನೇ ಪಟ್ಟಿಯ 54, 60 ಮತ್ತು 62ರ ನಮೂದುಗಳು]

**XXVII**

**2008ರ ತಿದ್ದುಪಡಿ ಅಧಿನಿಯಮ 6.-** ಆಯವ್ಯಯ ಭಾಷಣದಲ್ಲಿ ಮಾಡಿದ ಪ್ರಸ್ತಾವಗಳನ್ನು ಮತ್ತು ಅವುಗಳಿಗೆ ಸಂಬಂಧಿಸಿದ ಅಥವಾ ಅವುಗಳಿಗೆ ಪ್ರಾಸಂಗಿಕವಾದ ವಿಷಯಗಳನ್ನು ಜಾರಿಗೊಳಿಸಲು ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮ, 1957, ಕರ್ನಾಟಕ ಮನೋರಂಜನಾ ತೆರಿಗೆ ಅಧಿನಿಯಮ, 1958, ಕರ್ನಾಟಕ ವೃತ್ತಿಗಳ, ಕಸಬುಗಳ, ಆಜೀವಿಕೆಗಳ ಮತ್ತು ಉದ್ಯೋಗಗಳ ಮೇಲಣ ತೆರಿಗೆ ಅಧಿನಿಯಮ, 1976 ಮತ್ತು ಕರ್ನಾಟಕ ಭೋಗವಸ್ತುಗಳ ಮೇಲಣ ತೆರಿಗೆ ಅಧಿನಿಯಮ, 1979 ಇವುಗಳನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ತೆರಿಗೆ ವಿಧಿಸುವುದನ್ನು ಸುವ್ಯವಸ್ಥೆಗೊಳಿಸಲು ಮತ್ತು ಆನುಷಂಗಿಕವಾದ ಕೆಲವು ಇತರ ತಿದ್ದುಪಡಿಗಳನ್ನು ಮಾಡಲು ಕೂಡ ಈ ಅವಕಾಶವನ್ನು ಉಪಯೋಗಿಸಿಕೊಳ್ಳಲಾಗಿದೆ. ಆದ್ದರಿಂದ ಈ ವಿಧೇಯಕ.

[2008ರ ವಿಧಾನ ಸಭೆಯ ವಿಧೇಯಕ ಸಂಖ್ಯೆ: 3, ಕಡತ ಸಂಖ್ಯೆ: ಸಂವ್ಯಶಾಇ 11 ಶಾಸನ 2008]

[ಭಾರತ ಸಂವಿಧಾನದ ಏಳನೇ ಅನುಸೂಚಿಯ IIನೇ ಪಟ್ಟಿಯ 60ನೇ ನಮೂದುಗಳು]

**XXVIII**

**2009ರ ತಿದ್ದುಪಡಿ ಅಧಿನಿಯಮ 7**.- ಆಯವ್ಯಯ ಭಾಷಣದಲ್ಲಿ ಮಾಡಿದ ಪ್ರಸ್ತಾವಗಳನ್ನು ಮತ್ತು ಅವುಗಳಿಗೆ ಸಂಬಂಧಿಸಿದ ವಿಷಯಗಳನ್ನು ಜಾರಿಗೊಳಿಸಲು ಕರ್ನಾಟಕ ಜೂಜು ತೆರಿಗೆ ಅಧಿನಿಯಮ, 1932, ಕರ್ನಾಟಕ ಮನೋರಂಜನಾ ತೆರಿಗೆ ಅಧಿನಿಯಮ, 1958, ಕರ್ನಾಟಕ ವೃತ್ತಿಗಳ, ಕಸಬುಗಳ, ಆಜೀವಿಕೆಗಳ ಮತ್ತು ಉದ್ಯೋಗಗಳ ಮೇಲಣ ತೆರಿಗೆ ಅಧಿನಿಯಮ, 1976 ಮತ್ತು ಕರ್ನಾಟಕ ಭೋಗವಸ್ತುಗಳ ಮೇಲಣ ತೆರಿಗೆ ಅಧಿನಿಯಮ, 1979 ಇವುಗಳನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಕೆಲವು ಆನುಷಂಗಿಕ ಮತ್ತು ಪ್ರಾಸಂಗಿಕ ತಿದ್ದುಪಡಿಗಳನ್ನು ಸಹ ಮಾಡಲಾಗಿದೆ.

ಆದ್ದರಿಂದ ಈ ವಿಧೇಯಕ.

(2009ರ ವಿಧಾನಸಭೆ ವಿಧೇಯಕ ಸಂಖ್ಯೆ. 21, ಕಡತ ಸಂಖ್ಯೆ. ಸಂವ್ಯಶಾಇ 13 ಶಾಸನ 2009)

(ಭಾರತ ಸಂವಿಧಾನದ ಏಳನೇ ಅನುಸೂಚಿಯ IIನೇ ಪಟ್ಟಿಯ 60 ಮತ್ತು 62ನೇ ನಮೂದುಗಳು)

**XXIX**

**2010ರ ತಿದ್ದುಪಡಿ ಅಧಿನಿಯಮ 5.-** ಆಯವ್ಯಯ ಭಾಷಣದಲ್ಲಿ ಮಾಡಿದ ಪ್ರಸ್ತಾವಗಳನ್ನು ಜಾರಿಗೊಳಿಸಲು ಮತ್ತು ಅವುಗಳಿಗೆ ಸಂಬಂಧಿಸಿದ ಮತ್ತು ಪ್ರಾಸಂಗಿಕವಾದ ವಿಷಯಗಳ ಬಗ್ಗೆ ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮ, 1957, ಕರ್ನಾಟಕ ಮನೋರಂಜನಾ ತೆರಿಗೆ ಅಧಿನಿಯಮ, 1958, ಕರ್ನಾಟಕ ವೃತ್ತಿಗಳ, ಕಸಬುಗಳ, ಆಜೀವಿಕೆಗಳ ಮತ್ತು ಉದ್ಯೋಗಗಳ ಮೇಲಣ ತೆರಿಗೆ ಅಧಿನಿಯಮ, 1976 ಮತ್ತು ಕರ್ನಾಟಕ ವಿಲಾಸಗಳ ಮೇಲೆ ತೆರಿಗೆ ಅಧಿನಿಯಮ, 1979 ಇವುಗಳನ್ನು ತಿದ್ದುಪಡಿ ಮಾಡುವುದು ಹಾಗೂ ನಿರ್ದಿಷ್ಟವಾಗಿ ಈ ಮುಂದಿನವುಗಳಿಗೆ ಎಂದರೆ:-

(i) ಸೆಂಚುರಿ ಕ್ಲಬ್ ಮತ್ತು ಇತರರು-ವಿರುದ್ಧ-ಮೈಸೂರು ರಾಜ್ಯ ಮತ್ತು ಇತರರು ಪ್ರಕರಣದಲ್ಲಿ ಭಾರತ ಸಂವಿಧಾನದ ನಲವತ್ತಾರನೇ ತಿದ್ದುಪಡಿಗೆ ಮುಂಚೆ ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮ, 1957ರಲ್ಲಿ ಮಾಡಲಾದ ಉಪಬಂಧಗಳು ಅಸಿಂಧು ಹಾಗೂ ಪ್ರವರ್ತನೀಯವಲ್ಲವೆಂದು ಘೋಷಿಸಿ ಉಚ್ಚ ನ್ಯಾಯಾಲಯವು ನೀಡಿದ ತೀರ್ಪಿನಿಂದಾಗಿ ಉಂಟಾದ ಸಂದೇಹಗಳನ್ನು ನಿವಾರಿಸುವುದಕ್ಕಾಗಿ ಭಾರತ ಸಂವಿಧಾನದ ನಲವತ್ತಾರನೇ ತಿದ್ದುಪಡಿಯ ಮೂಲಕ ಅಂಥ ವ್ಯವಹಾರಗಳ ಮೇಲೆ ತೆರಿಗೆಯನ್ನು ವಿಧಿಸುವುದಕ್ಕೆ ಉಪಬಂಧ ಕಲ್ಪಿಸಲು ರಾಜ್ಯ ವಿಧಾನ ಮಂಡಲಕ್ಕೆ ಅಧಿಕಾರ ನೀಡಲಾದ ದಿನಾಂಕವಾದ 1983ರ ಫೆಬ್ರವರಿ ಎರಡನೇ ದಿನಾಂಕದಿಂದ ಪೂರ್ವಾನ್ವಯವಾಗಿ, ನೋಂದಣಿಯಾದ ಅಥವಾ ನೋಂದಣಿಯಾಗಿಲ್ಲದ, ಕ್ಲಬ್‌ಗಳಂಥ ಸಂಘ ಅಥವಾ ವ್ಯಕ್ತಿಗಳ ನಿಕಾಯವು ಸರಬರಾಜು ಮಾಡಿದ ಸರಕುಗಳ ಮೇಲೆ ತೆರಿಗೆಯನ್ನು ವಿಧಿಸುವುದಕ್ಕೆ ಉಪಬಂಧ ಕಲ್ಪಿಸುವುದು,

(ii) ಸಕ್ಕರೆ ಕಾರ್ಖಾನೆಗಳು ಇರುವ ಸ್ಥಳದಲ್ಲಿ ಸಕ್ಕರೆಯನ್ನು ವ್ಯಾಪಾರಿಗಳಿಗೆ ಮಾರಾಟ ಮಾಡಿದಾಗ, ಆ ತರುವಾಯ ಅವರು ರಾಜ್ಯದಲ್ಲಿ ಯಾವುದೇ ಸ್ಥಳೀಯ ಪ್ರದೇಶದೊಳಗೆ ಅಂಥ ಸಕ್ಕರೆಯು ಪ್ರವೇಶಿಸುವಂತೆ ಮಾಡಿದಾಗ ಕರ್ನಾಟಕ ಸರಕುಗಳ ಪ್ರವೇಶದ ಮೇಲೆ ತೆರಿಗೆ ಅಧಿನಿಯಮ, 1979ರಡಿಯಲ್ಲಿ ಮುಂಗಡವಾಗಿ ಪ್ರವೇಶ ತೆರಿಗೆಯನ್ನು ಸಂಗ್ರಹಿಸುವುದಕ್ಕಾಗಿ ಉಪಬಂಧ ಕಲ್ಪಿಸುವುದು,

- ಅವಶ್ಯಕವೆಂದು ಪರಿಗಣಿಸಲಾಗಿದೆ ಮತ್ತು ಕೆಲವು ಪ್ರಾಸಂಗಿಕವಾದ ಮತ್ತು ಆನುಷಂಗಿಕವಾದ ತಿದ್ದುಪಡಿಗಳನ್ನು ಕೂಡ ಮಾಡಲಾಗಿದೆ.

ಆದ್ದರಿಂದ ಈ ವಿಧೇಯಕ.

(2010ರ ವಿಧಾನಸಭೆ ವಿಧೇಯಕ ಸಂಖ್ಯೆ.9, ಕಡತ ಸಂಖ್ಯೆ. ಸಂವ್ಯಶಾಇ 12 ಶಾಸನ 2010)
(ಭಾರತ ಸಂವಿಧಾನದ ಏಳನೇ ಅನುಸೂಚಿಯ IIನೇ ಪಟ್ಟಿಯ 52, 54, 60 ಮತ್ತು 62ನೇ ನಮೂದುಗಳು)

**XXX**

**2011ರ ತಿದ್ದುಪಡಿ ಅಧಿನಿಯಮ 15.-** (i) ಸಮಗ್ರ ಕರ್ನಾಟಕ ರಾಜ್ಯಕ್ಕೆ ಜೂಜು ತೆರಿಗೆ ಅಧಿನಿಯಮ, 1932 ಮತ್ತು ಮೈಸೂರು ರೇಸ್ ಕೋರ್ಸುಗಳಿಗೆ ಲೈಸನ್ಸ್ ನೀಡಿಕೆ ಅಧಿನಿಯಮ, 1952 ಇವುಗಳು ಅನ್ವಯವಾಗುವಂತೆ ವಿಸ್ತರಿಸಲು;

(ii) ಜೂಜು ತೆರಿಗೆ ಅಧಿನಿಯಮ, 1932ರಲ್ಲಿರುವ ಮತ್ತು ಮೈಸೂರು ರೇಸ್ ಕೋರ್ಸುಗಳಿಗೆ ಲೈಸನ್ಸ್ ನೀಡಿಕೆ ಅಧಿನಿಯಮ, 1952ರಲ್ಲಿ ಇರುವ ಕೆಲವು ಅಗತ್ಯವಿಲ್ಲದ ಉಪಬಂಧಗಳನ್ನು ಮತ್ತು ಅನುಸೂಚಿಗಳನ್ನು ಬಿಟ್ಟುಬಿಡಲು;

(iii) ಕೆಲವು ಅಗತ್ಯವಿಲ್ಲದ ಅಧಿನಿಯಮಿತಿಗಳನ್ನು ನಿರಸನಗೊಳಿಸಲು; ಮತ್ತು

(iv) ಆಯವ್ಯಯದ ಪ್ರಸ್ತಾವಗಳನ್ನು ಮತ್ತು ಅದಕ್ಕೆ ಸಂಬಂಧಪಟ್ಟ ವಿಷಯಗಳನ್ನು ಕಾರ್ಯಗತಗೊಳಿಸಲು,

-ಮೈಸೂರು ಜೂಜು ತೆರಿಗೆ ಅಧಿನಿಯಮ, 1932, ಮೈಸೂರು ರೇಸ್ ಕೋರ್ಸುಗಳಿಗೆ ಲೈಸನ್ಸ್ ನೀಡಿಕೆ ಅಧಿನಿಯಮ, 1932, ಕರ್ನಾಟಕ ಮನೋರಂಜನಾ ತೆರಿಗೆ ಅಧಿನಿಯಮ, 1958, ಕರ್ನಾಟಕ ವೃತ್ತಿಗಳು, ಕಸಬುಗಳು, ಆಜೀವಿಕೆಗಳು ಮತ್ತು ಉದ್ಯೋಗಗಳ ಮೇಲಣ ತೆರಿಗೆ ಅಧಿನಿಯಮ, 1976, ಕರ್ನಾಟಕ ಭೋಗ ವಸ್ತುಗಳ ತೆರಿಗೆ ಅಧಿನಿಯಮ, 1979 ಮತ್ತು ಕರ್ನಾಟಕ ಸರಕುಗಳ ಪ್ರವೇಶ ತೆರಿಗೆ ಅಧಿನಿಯಮ, 1979 ಇವುಗಳನ್ನು ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಕೆಲವು ಆನುಷಂಗಿಕ ಮತ್ತು ಪ್ರಾಸಂಗಿಕ ತಿದ್ದುಪಡಿಗಳನ್ನು ಸಹ ಮಾಡಲಾಗಿದೆ.

ಆದ್ದರಿಂದ ಈ ವಿಧೇಯಕ.

(2011ರ ವಿಧಾನಸಭೆ ವಿಧೇಯಕ ಸಂಖ್ಯೆ.11, ಕಡತ ಸಂಖ್ಯೆ. ಸಂವ್ಯಶಾಇ 13 ಶಾಸನ 2011)
(ಭಾರತ ಸಂವಿಧಾನದ ಏಳನೇ ಅನುಸೂಚಿಯ IIನೇ ಪಟ್ಟಿಯ 34, 52, 60 ಮತ್ತು 62ನೇ ನಮೂದುಗಳು)

**XXXI**

**2012ರ ತಿದ್ದುಪಡಿ ಅಧಿನಿಯಮ 18**.- ಆಯವ್ಯಯ ಭಾಷಣದಲ್ಲಿ ಮಾಡಿದ ಪ್ರಸ್ತಾವಗಳನ್ನು ಮತ್ತು ಅವುಗಳಿಗೆ ಸಂಬಂಧಿಸಿದ ವಿಷಯಗಳನ್ನು ಜಾರಿಗೊಳಿಸಲು ಕರ್ನಾಟಕ ಕೃಷಿ ವರಮಾನ ತೆರಿಗೆ ಅಧಿನಿಯಮ, 1957, ಕರ್ನಾಟಕ ಮನೋರಂಜನಾ ತೆರಿಗೆ ಅಧಿನಿಯಮ, 1958, ಕರ್ನಾಟಕ ವೃತ್ತಿಗಳ, ಕಸಬುಗಳ, ಆಜೀವಿಕೆಗಳ ಮತ್ತು ಉದ್ಯೋಗಗಳ ಮೇಲಣ ತೆರಿಗೆ ಅಧಿನಿಯಮ, 1976, ಕರ್ನಾಟಕ ವಿಲಾಸಗಳ ಮೇಲಣ ತೆರಿಗೆ ಅಧಿನಿಯಮ, 1979 ಮತ್ತು ಕರ್ನಾಟಕ ಸರಕುಗಳ ಪ್ರವೇಶ ಮೇಲಣ ತೆರಿಗೆ ಅಧಿನಿಯಮ, 1979 ಇವುಗಳನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಕೆಲವು ಆನುಷಂಗಿಕ ಮತ್ತು ಪ್ರಾಸಂಗಿಕ ತಿದ್ದುಪಡಿಗಳನ್ನು ಸಹ ಮಾಡಲಾಗಿದೆ.

ಆದ್ದರಿಂದ ಈ ವಿಧೇಯಕ.

(2012ರ ವಿಧಾನಸಭೆ ವಿಧೇಯಕ ಸಂಖ್ಯೆ. 04, ಕಡತ ಸಂಖ್ಯೆ. ಸಂವ್ಯಶಾಇ 24 ಶಾಸನ 2012)
(ಭಾರತ ಸಂವಿಧಾನದ ಏಳನೇ ಅನುಸೂಚಿಯ IIನೇ ಪಟ್ಟಿಯ 46, 52, 60 ಮತ್ತು 62ನೇ ನಮೂದುಗಳು)

**XXXII**

**2013ರ ತಿದ್ದುಪಡಿ ಅಧಿನಿಯಮ 27.-** ಆಯವ್ಯಯ ಭಾಷಣದಲ್ಲಿ ಮಾಡಿದ ಪ್ರಸ್ತಾವಗಳನ್ನು ಜಾರಿಗೊಳಿಸಲು ಮತ್ತು ಅವುಗಳಿಗೆ ಸಂಬಂಧಿಸಿದ ಮತ್ತು ಪ್ರಾಸಂಗಿಕವಾದ ವಿಷಯಗಳಿಗಾಗಿ ಕರ್ನಾಟಕ ವೃತ್ತಿಗಳ, ಕಸಬುಗಳ, ಆಜೀವಿಕೆಗಳ ಮತ್ತು ಉದ್ಯೋಗಗಳ ಮೇಲಣ ತೆರಿಗೆ ಅಧಿನಿಯಮ, 1976 ಮತ್ತು ಕರ್ನಾಟಕ ಸರಕುಗಳ ಪ್ರವೇಶದ ಮೇಲೆ ತೆರಿಗೆ ಅಧಿನಿಯಮ, 1979 ಇವುಗಳನ್ನು ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(2013ರ ವಿಧಾನಸಭೆ ವಿಧೇಯಕ ಸಂಖ್ಯೆ. 09, ಕಡತ ಸಂಖ್ಯೆ. ಸಂವ್ಯಶಾಇ 17 ಶಾಸನ 2013)

(ಭಾರತ ಸಂವಿಧಾನದ ಏಳನೇ ಅನುಸೂಚಿಯ IIನೇ ಪಟ್ಟಿಯ 52 ಮತ್ತು 60ನೇ ನಮೂದುಗಳು)

**XXXIII**

**2013ರ ತಿದ್ದುಪಡಿ ಅಧಿನಿಯಮ 53.-** ಆಯವ್ಯಯ ಭಾಷಣದಲ್ಲಿ ಮಾಡಿದ ಪ್ರಸ್ತಾವಗಳನ್ನು ಜಾರಿಗೊಳಿಸಲು ಮತ್ತು ಅವುಗಳಿಗೆ ಸಂಬಂಧಿಸಿದ ಹಾಗೂ ಪ್ರಾಸಂಗಿಕವಾದ ವಿಷಯಗಳಿಗಾಗಿ ಮತ್ತು ವಿಶೇಷವಾಗಿ ಕರ್ನಾಟಕ ಮಾರಾಟಗಳ ತೆರಿಗೆ ಅಧಿನಿಯಮ, 1957ರ ಅಥವಾ ಕರ್ನಾಟಕ ಸರಕುಗಳ ಪ್ರವೇಶದ ಮೇಲಣ ತೆರಿಗೆ ಅಧಿನಿಯಮ, 1979ರ ಅಡಿಯಲ್ಲಿ ವಾಣಿಜ್ಯ ತೆರಿಗೆಗಳ ಆಯುಕ್ತನು ಹೊರಡಿಸಿದ ಯಾವುದೇ ಸ್ಪಷ್ಟೀಕರಣವು ಸ್ಪಷ್ಟೀಕರಣ ಹಾಗೂ ಪೂರ್ವಭಾವಿ ನಿರ್ಣಯಗಳ ಪ್ರಾಧಿಕಾರದ ಸ್ಪಷ್ಟೀಕರಣಕ್ಕೆ ಅಧ್ಯಾರೋಹಿಯಾಗಿರತಕ್ಕದ್ದು ಎಂದು ನಿರ್ದಿಷ್ಟಪಡಿಸಲು, ಕರ್ನಾಟಕ ಮಾರಾಟಗಳ ತೆರಿಗೆ ಅಧಿನಿಯಮ, 1957, ಕರ್ನಾಟಕ ಮನೋರಂಜನೆಗಳ ತೆರಿಗೆ ಅಧಿನಿಯಮ, 1958, ಕರ್ನಾಟಕ ವೃತ್ತಿಗಳ, ಕಸಬುಗಳ, ಆಜೀವಿಕೆಗಳ ಮತ್ತು ಉದ್ಯೋಗಗಳ ಮೇಲಣ ತೆರಿಗೆ ಅಧಿನಿಯಮ, 1976 ಮತ್ತು ಕರ್ನಾಟಕ ಸರಕುಗಳ ಪ್ರವೇಶದ ಮೇಲೆ ತೆರಿಗೆ ಅಧಿನಿಯಮ, 1979 ಇವುಗಳನ್ನು ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಕೆಲವು ಆನುಷಂಗಿಕ ಮತ್ತು ಪ್ರಾಸಂಗಿಕವಾದ ತಿದ್ದುಪಡಿಗಳನ್ನು ಸಹಾ ಮಾಡಲಾಗಿದೆ.

ಆದ್ದರಿಂದ ಈ ವಿಧೇಯಕ.

(2013ರ ವಿಧಾನಸಭೆ ವಿಧೇಯಕ ಸಂಖ್ಯೆ. 07, ಕಡತ ಸಂಖ್ಯೆ. ಸಂವ್ಯಶಾಇ 36 ಶಾಸನ 2013)
(ಭಾರತ ಸಂವಿಧಾನದ ಏಳನೇ ಅನುಸೂಚಿಯ IIನೇ ಪಟ್ಟಿಯ 52, 54, 60 ಮತ್ತು 62ರ ನಮೂದುಗಳು)

**XXXIV**

**2015ರ ತಿದ್ದುಪಡಿ ಅಧಿನಿಯಮ 14.-** ಆಯವ್ಯಯ ಭಾಷಣದಲ್ಲಿ ಮಾಡಿದ ಪ್ರಸ್ತಾವಗಳನ್ನು ಜಾರಿಗೊಳಿಸಲು ಮತ್ತು ಅವುಗಳಿಗೆ ಸಂಬಂಧಿಸಿದ ವಿಷಯಗಳಿಗಾಗಿ ಮತ್ತು ನಿರ್ದಿಷ್ಟವಾಗಿ ಈ ಕೆಳಗಿನವುಗಳಿಗೆ ಉಪಬಂಧವನ್ನು ಕಲ್ಪಿಸುವುದಕ್ಕಾಗಿ ಕರ್ನಾಟಕ ವೃತ್ತಿಗಳ, ಕಸಬುಗಳ, ಆಜೀವಿಕೆಗಳ ಮತ್ತು ಉದ್ಯೋಗಗಳ ಮೇಲಣ ತೆರಿಗೆ ಅಧಿನಿಯಮ, 1976 ಮತ್ತು ಕರ್ನಾಟಕ ಕೃಷಿ ವರಮಾನ ತೆರಿಗೆ ಅಧಿನಿಯಮ, 1957 ಇವುಗಳನ್ನು ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ,-

(i) ಅರವತ್ತು ವರ್ಷಗಳ ವಯಸ್ಸಾದ ನಾಗರೀಕರಿಗೆ ವೃತ್ತಿ ತೆರಿಗೆ ಪಾವತಿಯಿಂದ ವಿನಾಯಿತಿಯ ಪ್ರಯೋಜನವನ್ನು ನೀಡುವುದು ಮತ್ತು ಅವರನ್ನು ಹಿರಿಯ ನಾಗರೀಕರೆಂದು ಪರಿಗಣಿಸುವುದು;

(ii) ಕಡಿಮೆ ಸಂಬಳದ ವ್ಯಕ್ತಿಗಳನ್ನು ವೃತ್ತಿ ತೆರಿಗೆ ಪಾವತಿಯಿಂದ ಮುಕ್ತಗೊಳಿಸುವುದು;

(iii) ಕಾಫೀ ಬೆಳೆಗಾರರು ಮಾಡಿದ ರೀ-ಪ್ಲಾಂಟೇಷನ್ ವೆಚ್ಚದಲ್ಲಿ ಏರಿಕೆಯಾಗಿರುವುದನ್ನು ಪರಿಗಣಿಸಿ ರೀ-ಪ್ಲಾಂಟಿಂಗ್ ಭತ್ಯೆಗಳನ್ನು ಹೆಚ್ಚಿಸುವುದು.

ಆದ್ದರಿಂದ ಈ ವಿಧೇಯಕ.

(2015ರ ವಿಧಾನಸಭೆ ವಿಧೇಯಕ ಸಂಖ್ಯೆ:07, ಕಡತ ಸಂಖ್ಯೆ ಸಂವ್ಯಶಾಇ 16 ಶಾಸನ 2015)
(ಭಾರತ ಸಂವಿಧಾನದ ಏಳನೇ ಅನುಸೂಚಿಯ II ನೇ ಪಟ್ಟಿಯ 46 ಮತ್ತು 60ನೇ ನಮೂದುಗಳು)

## XXXV

**2016ರ ತಿದ್ದುಪಡಿ ಅಧಿನಿಯಮ 05.-** ಆಯವ್ಯಯ ಭಾಷಣದಲ್ಲಿ ಮಾಡಿದ ಪ್ರಸ್ತಾವಗಳನ್ನು ಜಾರಿಗೊಳಿಸಲು ಕರ್ನಾಟಕ ಮನೋರಂಜನೆಗಳ ಮೇಲಣ ತೆರಿಗೆ ಅಧಿನಿಯಮ 1958 (1958ರ ಕರ್ನಾಟಕ ಅಧಿನಿಯಮ 30), ಕರ್ನಾಟಕ ವೃತ್ತಿಗಳ, ಕಸಬುಗಳ, ಆಜೀವಿಕೆಗಳ ಮತ್ತು ಉದ್ಯೋಗಗಳ ಮೇಲಣ ತೆರಿಗೆ ಅಧಿನಿಯಮ, 1976 (1976ರ ಕರ್ನಾಟಕ ಅಧಿನಿಯಮ 35), ಕರ್ನಾಟಕ ವಿಲಾಸಗಳ ಮೇಲೆ ತೆರಿಗೆ ಅಧಿನಿಯಮ, 1979 (1979ರ ಕರ್ನಾಟಕ ಅಧಿನಿಯಮ 22) ಮತ್ತು ಕರ್ನಾಟಕ ಸರಕುಗಳ ಪ್ರವೇಶದ ಮೇಲೆ ತೆರಿಗೆ ಅಧಿನಿಯಮ, 1979 (1979ರ ಕರ್ನಾಟಕ ಅಧಿನಿಯಮ 27) ಇವುಗಳನ್ನು ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ. ಸದರಿ ಅಧಿನಿಯಮಗಳ ಕೆಲವು ಉಪಬಂಧಗಳನ್ನು ಸುವ್ಯವಸ್ಥಿತಗೊಳಿಸಲೂ ಹಾಗೂ ಕರ್ನಾಟಕ ಕೃಷಿ ಆದಾಯ-ತೆರಿಗೆ ಅಧಿನಿಯಮ, 1957ನ್ನು (1957ರ ಕರ್ನಾಟಕ ಅಧಿನಿಯಮ 22) ನಿರಸನಗೊಳಿಸುವ ಅವಕಾಶವನ್ನು ತೆಗೆದುಕೊಳ್ಳಲಾಗಿದೆ.

ಆದ್ದರಿಂದ ಈ ವಿಧೇಯಕ.

(2016ರ ವಿಧಾನಸಭೆ ವಿಧೇಯಕ ಸಂಖ್ಯೆ. 11, ಕಡತ ಸಂಖ್ಯೆ. ಸಂವ್ಯಶಾಇ 19 ಶಾಸನ 2016)

(ಭಾರತ ಸಂವಿಧಾನದ ಏಳನೇ ಅನುಸೂಚಿಯ IIನೇ ಪಟ್ಟಿಯ 46, 52, 60 ಮತ್ತು 62ನೇ ನಮೂದುಗಳು)

## XXXVI

**2018ರ ತಿದ್ದುಪಡಿ ಅಧಿನಿಯಮ 06.-** ಆಯವ್ಯಯದಲ್ಲಿ ಮತ್ತು ಅದಕ್ಕೆ ಸಂಬಂಧಿಸಿದ ವಿಷಯಗಳಿಗೆ ಮಾಡಲಾದ ಪ್ರಸ್ತಾವಗಳನ್ನು ಜಾರಿಗೆ ತರಲು ಹಾಗೂ ನಿರ್ದಿಷ್ಟವಾಗಿ ಈ ಮುಂದಿನವುಗಳಿಗಾಗಿ ಕರ್ನಾಟಕ ವೃತ್ತಿಗಳ, ಕಸುಬಗಳ, ಆಜೀವಿಕೆಗಳ ಮತ್ತು ಉದ್ಯೋಗಿಗಳ ಮೇಲಣ ತೆರಿಗೆ ಅಧಿನಿಯಮ, 1976ನ್ನು ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ, ಎಂದರೆ:-

(i) ಕಾಮಗಾರಿ ಕರಾರುಗಳನ್ನು ಕಾರ್ಯಗತಗೊಳಿಸುತ್ತಿರುವ ಗುತ್ತಿಗೆದಾರರು, ರೈಲ್ವೆ, ರಾಜ್ಯ ಅಥವಾ ಕೇಂದ್ರ ಸರ್ಕಾರ ಇತ್ಯಾದಿಗಳಲ್ಲಿ ಗುತ್ತಿಗೆದಾರರೆಂದು ನೋಂದಾಯಿತರಾದ ವ್ಯಕ್ತಿಗಳಿಗೆ ಮತ್ತು ಲೈಸೆನ್ಸು ಹೊಂದಿರುವ ಅಥವಾ ಅನುಮೋದಿತಗೊಂಡಿರುವ ವ್ಯಕ್ತಿಗಳ ಸಂಬಂಧದಲ್ಲಿ ವೃತ್ತಿ ತೆರಿಗೆಯನ್ನು, ಕರ್ನಾಟಕ ಸರಕುಗಳು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರಡಿಯಲ್ಲಿ ನೋಂದಾವಣಿಗಾಗಿನ threshold ಮಿತಿಗೆ ಅನುಸಾರವಾಗಿ ವಿಧಿಸುವುದಕ್ಕಾಗಿ, Turn over ಮಿತಿಯನ್ನು ಹೆಚ್ಚಿಸುವುದು;

(ii) ಕರ್ನಾಟಕ ತೆರಿಗೆಗಳ ಕಾನೂನು (ತಿದ್ದುಪಡಿ) ಅಧಿನಿಯಮ, 2016ರ (2016ರ ಕರ್ನಾಟಕ ಅಧಿನಿಯಮ 5) ಮೂಲಕ 1.4.2016ರಿಂದ ಜಾರಿಗೆ ಬರುವಂತೆ ನಿರಸನಗೊಂಡಿರುವ ಕೃಷಿ, ಆದಾಯ ತೆರಿಗೆ ಅಧಿನಿಯಮ, 1957ರಲ್ಲಿ (1957ರ ಕರ್ನಾಟಕ ಅಧಿನಿಯಮ 22) ಪರಿಭಾಷಿಸಲಾದಂತೆ ಪ್ಲಾಂಟೇಶನ್ ಬೆಳೆಗಳನ್ನು ಬೆಳೆಯುವ ಕೃಷಿಕರನ್ನು ಹೊರಗಿಡುವುದು;

(iii) 60 ವರ್ಷ ವಯಸ್ಸಾಗಿರುವ ಹಿಂದೂ ಅವಿಭಕ್ತ ಕುಟುಂಬದ, ಫರ್ಮ್, ಕಂಪನಿ, ನಿಗಮ ಅಥವಾ ಇತರ ಕಾರ್ಪೊರೇಟ್ ನಿಕಾಯ, ಯಾವುದೇ ಸೊಸೈಟಿ, ಕ್ಲಬ್ ಅಥವಾ ಸಂಘಟನೆಯ ಸದಸ್ಯರನ್ನು 3ನೇ ಪ್ರಕರಣದ (2)ನೇ ಉಪಪ್ರಕರಣದ ಪರಂತುಕದ ಅಡಿಯಲ್ಲಿ ವೃತ್ತಿ ತೆರಿಗೆಯಿಂದ ವಿನಾಯಿತಿಯನ್ನು ಕ್ಲೇಮು ಮಾಡುವ ಪ್ರಯೋಜನದಿಂದ ಹೊರಗಿಡುವುದು.

ಆದ್ದರಿಂದ ಈ ವಿಧೇಯಕ.

(2018ರ ವಿಧಾನಸಭೆ ವಿಧೇಯಕ ಸಂಖ್ಯೆ. 59, ಕಡತ ಸಂಖ್ಯೆ. ಸಂವ್ಯಶಾಇ 10 ಶಾಸನ 2018)

(ಭಾರತ ಸಂವಿಧಾನದ ಏಳನೇ ಅನುಸೂಚಿಯ II ನೇ ಪಟ್ಟಿಯ 60ನೇ ನಮೂದು)

## XXXVII

**2023ರ ತಿದ್ದುಪಡಿ ಅಧಿನಿಯಮ 14.-** ಕರ್ನಾಟಕ ಸರ್ಕಾರದಿಂದ ಕರ್ನಾಟಕ ವೃತ್ತಿಗಳ, ಕಸುಬುಗಳ, ಆಜೀವಿಕೆಗಳ ಮತ್ತು ಉದ್ಯೋಗಗಳ ಮೇಲಿನ ತೆರಿಗೆಯನ್ನು ವಿಧಿಸಲು ಹಾಗೂ ಸಂಗ್ರಹಿಸುವ ಉದ್ದೇಶದಿಂದ ಕರ್ನಾಟಕ ವೃತ್ತಿಗಳ, ಕಸುಬುಗಳ, ಆಜೀವಿಕೆಗಳ ಮತ್ತು ಉದ್ಯೋಗಗಳ ಮೇಲಣ ತೆರಿಗೆ ಅಧಿನಿಯಮ, 1976ನ್ನು ಅಧಿನಿಯಮಿತಗೊಳಿಸಲಾಗಿದೆ.

ಆದಾಗ್ಯೂ, ಜಿಎಸ್‌ಟಿ ಅಧಿನಿಯಮವನ್ನು ಅನುಷ್ಠಾನಗೊಳಿಸಿದ ನಂತರ, ಈ ಕೆಲವೊಂದು ತೊಂದರೆಗಳನ್ನು ಎದುರಿಸಲಾಗುತ್ತಿದೆ. ಈ ತೊಂದರೆಗಳನ್ನು ನಿವಾರಿಸಲು ಕರ್ನಾಟಕ ವೃತ್ತಿಗಳ, ಕಸುಬುಗಳ, ಆಜೀವಿಕೆಗಳ ಮತ್ತು ಉದ್ಯೋಗಗಳ ಮೇಲಣ ತೆರಿಗೆ ಅಧಿನಿಯಮ, 1976 (1976ರ ಕರ್ನಾಟಕ ಅಧಿನಿಯಮ 35)ನ್ನು ತಿದ್ದುಪಡಿ ಮಾಡಲು ಪ್ರಸ್ತಾವಿಸಲಾಗಿದೆ.

2023-24ನೇ ಸಾಲಿನ ಆಯವ್ಯಯ ಭಾಷಣದಲ್ಲಿನ 443ನೇ ಖಂಡಿಕೆಯಲ್ಲಿ ಕರ್ನಾಟಕ ವೃತ್ತಿಗಳ, ಕಸುಬುಗಳ, ಆಜೀವಿಕೆಗಳ ಮತ್ತು ಉದ್ಯೋಗಗಳ ಮೇಲಣ ತೆರಿಗೆ (ತಿದ್ದುಪಡಿ) ವಿಧೇಯಕ 2023, ಇತರ ವಿಷಯಗಳ ಜೊತೆಗೆ, ಈ ಕೆಳಕಂಡವುಗಳಿಗೆ ಉಪಬಂಧವನ್ನು ಕಲ್ಪಿಸಲು ಪ್ರಸ್ತಾಪಿಸಲಾಗಿರುತ್ತದೆ. ಎಂದರೆ:-

(1) "ಏಜೆಂಟ್" ಎಂಬ ಪದಕ್ಕೆ, ವ್ಯವಹಾರದ ಕ್ರಮದಲ್ಲಿ ಅಥವಾ ಮುಂದುವರಿಕೆಯಲ್ಲಿ ಇನ್ನೊಬ್ಬ ವ್ಯಕ್ತಿಯ ಪರವಾಗಿ ಕಾರ್ಯನಿರ್ವಹಿಸುವ ಒಬ್ಬ ವ್ಯಕ್ತಿ ಎಂಬ ಪರಿಭಾಷೆಯನ್ನು ಕಲ್ಪಿಸುವ ಸಲುವಾಗಿ, ಪ್ರಕರಣ 2ರ ಖಂಡ (ಎ) ನಂತರ, ಹೊಸ ಖಂಡ (ಎಎ) ಅನ್ನು ಸೇರ್ಪಡೆ ಮಾಡಲು;

ಈ ಅಧಿನಿಯಮದ ಉದ್ದೇಶಗಳಿಗಾಗಿ, "ಕರನಿರ್ಧರಣೆ" ಎಂಬ ಪದಕ್ಕೆ, ಈ ಅಧಿನಿಯಮದ ಅಡಿಯಲ್ಲಿ ತೆರಿಗೆ ಬಾಧ್ಯತೆಯನ್ನು ನಿರ್ಧರಿಸುವುದು ಮತ್ತು ಸ್ವಯಂ-ಕರನಿರ್ಧರಣೆ, ಮರು-ಕರನಿರ್ಧರಣೆ ಮತ್ತು ಅತ್ಯುತ್ತಮ ವಿವೇಚನಾ ಕರನಿರ್ಧರಣೆಯನ್ನು ಒಳಗೊಳ್ಳುತ್ತದೆ ಎಂಬ ಪರಿಭಾಷೆಯನ್ನು ಕಲ್ಪಿಸುವ ಸಲುವಾಗಿ, ಪ್ರಕರಣ 2ರ ಖಂಡ (ಎಎ) ನಂತರ, ಹೊಸ ಖಂಡ (ಎಬಿ) ಅನ್ನೂ ಸೇರ್ಪಡೆ ಮಾಡಲು;

ಮಾಲೀಕತ್ವದ ಘಟಕಕ್ಕೆ ತೆರಿಗೆಯನ್ನು ವಿಧಿಸುವ ಸಂದರ್ಭದಲ್ಲಿ ಇರುವ ದ್ವಂದ್ವವನ್ನು ನಿವಾರಣೆ ಮಾಡಲು, ಮಾಲೀಕತ್ವ ಘಟಕ ಎಂದರೆ ಪರಿಭಾವಿತ ವ್ಯಕ್ತಿ ಎಂದು ವಿವರಣೆಯಲ್ಲಿ ಸೇರಿಸುವುದಕ್ಕಾಗಿ, ಪ್ರಕರಣ 2ರ ಖಂಡ (ಹೆಚ್) ಅನ್ನು ತಿದ್ದುಪಡಿ ಮಾಡಲು;

(2) ಮಾಹಿತಿಯನ್ನು ಉದ್ದೇಶ ಪೂರ್ವಕವಾಗಿ ಬಹಿರಂಗಪಡಿಸದ ಅಥವಾ ತೆರಿಗೆಯನ್ನು ತಪ್ಪಿಸಿಕೊಳ್ಳಲು ಉದ್ಯೋಗದಾತನು ಅಥವಾ ವ್ಯಕ್ತಿಯು ಪ್ರಯತ್ನಿಸಿ ತೆರಿಗೆ ನಿರ್ಧರಣೆಯಿಂದ ತಪ್ಪಿಸಿಕೊಂಡರೆ, ಅದನ್ನು ಸಂದಾಯ ಮಾಡಬೇಕಾದ ತೆರಿಗೆಯ ಒಂದೂವರೆ ಪಟ್ಟು ದಂಡವನ್ನು, ಜಿಎಸ್‌ಟಿ ಅಧಿನಿಯಮದ ಅನುಗುಣವಾಗಿ ತೆರಿಗೆಯ ಶೇಕಡಾ ನೂರರಷ್ಟಕ್ಕೆ ಸಮನಾದ ಮೊತ್ತಕ್ಕೆ ಕಡಿತಗೊಳಿಸುವುದಕ್ಕಾಗಿ, ಪ್ರಕರಣ 9ರ ಉಪ-ಪ್ರಕರಣ (2) ಅನ್ನು ತಿದ್ದುಪಡಿ ಮಾಡಲು;

(3) ತೆರಿಗೆಯನ್ನು ಸಂದಾಯ ಮಾಡಲು ತಪ್ಪಿರುವ ಒಬ್ಬ ಉದ್ಯೋಗದಾತನು ಪ್ರತಿ ತಿಂಗಳಿಗೆ ಸಂದಾಯ ಮಾಡಬೇಕಾದ ಶೇಕಡಾ ಎರಡರ ಬಡ್ಡಿ ದರವನ್ನು, ಜಿಎಸ್‌ಟಿ ಅಧಿನಿಯಮದ ಅನುಗುಣವಾಗಿ ಪ್ರತಿ ತಿಂಗಳಿಗೆ ಶೇಕಡಾ ಒಂದೂವರೆಯಷ್ಟಕ್ಕೆ ಕಡಿತಗೊಳಿಸುವುದಕ್ಕಾಗಿ, ಪ್ರಕರಣ 10ರ ಉಪ-ಪ್ರಕರಣ (6)ನ್ನು ತಿದ್ದುಪಡಿ ಮಾಡಲು;

(4) ಯಾವುದೇ ಉದ್ಯೋಗದಾತನು ಸಂಬಳ ಅಥವಾ ಮಜೂರಿಯ ಸಂದಾಯದ ಸಮಯದಲ್ಲಿ ತೆರಿಗೆಯನ್ನು ಕಟಾಯಿಸದಿದ್ದಲ್ಲಿ ಅಥವಾ ಕಟಾಯಿಸಿದ ನಂತರ ತೆರಿಗೆಯನ್ನು ಸಂದಾಯ ಮಾಡಲು ತಪ್ಪಿದರೆ, ಸಂದಾಯ ಮಾಡಬೇಕಾದ ಶೇಕಡಾ ಒಂದೂ ಕಾಲರಷ್ಟರ ಬಡ್ಡಿಯ ದರವನ್ನು, ಜಿಎಸ್‌ಟಿ ಅಧಿನಿಯಮದ ಅನುಗುಣವಾಗಿ ಶೇಕಡಾ ಒಂದೂವರೆಯಷ್ಟಕ್ಕೆ ಹೆಚ್ಚಿಸಲು, ಪ್ರಕರಣ 11ರ ಉಪ-ಪ್ರಕರಣ (2)ನ್ನು ತಿದ್ದುಪಡಿ ಮಾಡಲು;

(5) ಒಬ್ಬ ನೋಂದಾಯಿತನಾದ ಉದ್ಯೋಗದಾತನು ಅಗತ್ಯಪಡಿಸಿದ ಸಮಯದೊಳಗೆ ತೆರಿಗೆಯನ್ನು ಸಂದಾಯ ಮಾಡದಿದ್ದುದಕ್ಕಾಗಿ ಪಾವತಿಸಬೇಕಾದ ಶೇಕಡಾ ಐವತ್ತರಷ್ಟನ್ನು ಮೀರದ

ದಂಡವನ್ನು, ಒಂದು ಸಮಂಜಸವಾದ ಕಾರಣವಿದ್ದರೂ ಅಥವಾ ಇಲ್ಲದಿದ್ದರೂ ಶೇಕಡಾ ಹತ್ತರಷ್ಟು ಸ್ಥಿರವಾದ ಮೊತ್ತಕ್ಕೆ ಅದನ್ನು ಕಡಿತಗೊಳಿಸುವುದಕ್ಕಾಗಿ, ಪ್ರಕರಣ 12ನ್ನು ತಿದ್ದುಪಡಿ ಮಾಡಲು; ಮತ್ತು

(6) ಜಿಎಸ್‌ಟಿ ಅಧಿನಿಯಮದ ಅನುಷ್ಠಾನದ ಹಿನ್ನೆಲೆಯಲ್ಲಿ, ಪ್ರಸ್ತುತ ಸನ್ನಿವೇಶಗಳಿಗೆ ಹೊಂದಾಣಿಕೆಯಾಗುವಂತೆ ಈ ಅಧಿನಿಯಮದಡಿ ಅನುಸೂಚಿಯನ್ನು ಪ್ರತಿಯೋಜಿಸುವುದಕ್ಕಾಗಿ ಮತ್ತು ಸಂದಾಯ ಮಾಡಬೇಕಾದ ತೆರಿಗೆಯನ್ನು ಕ್ರಮಬದ್ಧಗೊಳಿಸಬೇಕಾಗಿದೆ. ಮುಂದುವರೆದು, ದ್ವಂದ್ವವನ್ನು ನಿವಾರಣೆ ಮಾಡುವುದಕ್ಕಾಗಿ ವಿವರಣೆಗಳನ್ನು ಸಹ ಪ್ರತಿಯೋಜಿಸಬೇಕಾಗಿದೆ.

ಆದ್ದರಿಂದ ಈ ವಿಧೇಯಕ.

[2023ರ ವಿಧಾನಸಭೆ ವಿಧೇಯಕ ಸಂಖ್ಯೆ. 06, ಕಡತ ಸಂಖ್ಯೆ. ಸಂವ್ಯಶಾಇ 06 ಶಾಸನ 2023]
[ಭಾರತ ಸಂವಿಧಾನದ ಏಳನೇ ಅನುಸೂಚಿಯ ಎರಡನೇ ಪಟ್ಟಿಯ 60ನೇ ನಮೂದು]
[ಕರ್ನಾಟಕ ರಾಜ್ಯಪತ್ರ ವಿಶೇಷ ಸಂಚಿಕೆ ಸಂಖ್ಯೆ.113 ಭಾಗ - IVಎ ದಿನಾಂಕ 14.03.2023ರಲ್ಲಿ ಪ್ರಕಟಗೊಂಡಿದೆ]

***

## **1976ರ ಕರ್ನಾಟಕ ಅಧಿನಿಯಮ ಸಂಖ್ಯೆ.35**

*(ಕರ್ನಾಟಕ ವಿಶೇಷ ರಾಜ್ಯಪತ್ರ 29ನೇ ದಿನ, ಏಪ್ರಿಲ್ 1976ರಲ್ಲಿ ಮೊದಲು ಪ್ರಕಟವಾಗಿದೆ)*

# **ಕರ್ನಾಟಕ ವೃತ್ತಿಗಳು, ಕಸಬುಗಳು, ಆಜೀವಿಕೆಗಳು ಮತ್ತು ಉದ್ಯೋಗಗಳ ಮೇಲಿನ ತೆರಿಗೆ ಅಧಿನಿಯಮ, 1976**

(1976ರ ಏಪ್ರಿಲ್ 28ನೇ ದಿನಾಂಕದಂದು ರಾಜ್ಯಪಾಲರಿಂದ ಅನುಮತಿ ಪಡೆಯಲಾಗಿದೆ)

(1981ರ ಅಧಿನಿಯಮ ಸಂಖ್ಯೆ.8, 1982ರ 13, 1982ರ 26, 1985ರ 1, 1985ರ 29, 1986ರ 13, 1987ರ 13, 1989ರ 15, 1990ರ 5, 1991ರ 13, 1992ರ 5, 1993ರ 5, 1993ರ 11, 1994ರ 18, 1995ರ 6, 1996ರ 5, 1997ರ 7, 1998ರ 3, 2001ರ 5, 2003ರ 7, 2003ರ 13, 2004ರ 26, 2005ರ 11, 2006ರ 5, 2007ರ 5, 2008ರ 6, 2009ರ 7, 2010ರ 5, 2011ರ 15, 2012ರ 18, 2013ರ 27, 2013ರ 53, 2015ರ 14, 2016ರ 5, 2018ರ 6 ಮತ್ತು 2023ರ 14ರ ಮೂಲಕ ತಿದ್ದುಪಡಿಯಾದಂತೆ)

ರಾಜ್ಯದಲ್ಲಿನ ವೃತ್ತಿಗಳ, ಕಸಬುಗಳ, ಆಜೀವಿಕೆಗಳ ಮತ್ತು ಉದ್ಯೋಗಗಳ ಮೇಲಿನ ತೆರಿಗೆಯನ್ನು ವಿಧಿಸುವುದಕ್ಕಾಗಿ ಮತ್ತು ವಸೂಲಿ ಮಾಡುವುದಕ್ಕಾಗಿ ಉಪಬಂಧಿಸುವ ಅಧಿನಿಯಮ;

ವೃತ್ತಿಗಳ, ಕಸಬುಗಳ, ಆಜೀವಿಕೆಗಳ, ಮತ್ತು ಉದ್ಯೋಗಗಳ ಮೇಲಿನ ತೆರಿಗೆಯನ್ನು ವಿಧಿಸುವುದಕ್ಕಾಗಿ ಮತ್ತು ವಸೂಲಿ ಮಾಡುವುದಕ್ಕಾಗಿ ಉಪಬಂಧಿಸುವುದು ವಿಹಿತವಾಗಿರುವುದರಿಂದ;

ಭಾರತ ಗಣರಾಜ್ಯದ ಇಪ್ಪತ್ತೇಳನೆಯ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:-

**1. ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ವೃತ್ತಿಗಳ, ಕಸಬುಗಳ, ಆಜೀವಿಕೆಗಳ ಮತ್ತು ಉದ್ಯೋಗಗಳ ಮೇಲಿನ ತೆರಿಗೆ ಅಧಿನಿಯಮ, 1976 ಎಂದು ಕರೆಯತಕ್ಕದು.

(2) ಇದು ಇಡೀ ಕರ್ನಾಟಕ ರಾಜ್ಯಕ್ಕೆ ವ್ಯಾಪ್ತವಾಗುತ್ತದೆ.

(3) ಇದು 1976ರ ಏಪ್ರಿಲ್ ಒಂದನೆಯ ದಿನಾಂಕದಂದು ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದು.

**2. ಪರಿಭಾಷೆಗಳು.-** ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) **"ತೆರಿಗೆದಾರ''** ಎಂದರೆ ಈ ಅಧಿನಿಯಮದ ಮೇರೆಗೆ ತೆರಿಗೆಯನ್ನು ಸಂದಾಯ ಮಾಡಬೇಕಾದ ವ್ಯಕ್ತಿ ಅಥವಾ ನಿಯೋಜಕ;

[1][(ಎಎ) "ಏಜೆಂಟ್" ಎಂದರೆ, ವ್ಯವಹಾರದ ಕ್ರಮದಲ್ಲಿ ಅಥವಾ ಮುಂದುವರಿಕೆಯಲ್ಲಿ ಇನ್ನೊಬ್ಬ ವ್ಯಕ್ತಿಯ ಪರವಾಗಿ ಕಾರ್ಯನಿರ್ವಹಿಸುವ ಒಬ್ಬವ್ಯಕ್ತಿ;

(ಎಬಿ) ಈ ಅಧಿನಿಯಮದ ಉದ್ದೇಶಗಳಿಗಾಗಿ, "ಕರನಿರ್ಧರಣೆ" ಎಂದರೆ, ಈ ಅಧಿನಿಯಮದ ಅಡಿಯಲ್ಲಿ ತೆರಿಗೆ ಬಾಧ್ಯತೆಯನ್ನು ನಿರ್ಧರಿಸುವುದು ಮತ್ತು ಸ್ವಯಂ-ಕರನಿರ್ಧರಣೆ, ಮರು-ಕರನಿರ್ಧರಣೆ ಮತ್ತು ಅತ್ಯುತ್ತಮ ವಿವೇಚನಾ ಕರನಿರ್ಧರಣೆಯನ್ನು ಒಳಗೊಳ್ಳುತ್ತದೆ; ][1]

1. 2023ರ ಅಧಿನಿಯಮ ಸಂಖ್ಯೆ 14ರ ಮೂಲಕ ದಿನಾಂಕ 01.04.2023ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(ಬಿ) "ತೆರಿಗೆ ನಿರ್ಧರಣಾ ಪ್ರಾಧಿಕಾರ" ಎಂದರೆ [1][ವೃತ್ತಿ ತೆರಿಗೆಯ ಡೆಪ್ಯೂಟಿ ಕಮಿಷನರ್ ಅಥವಾ ವೃತ್ತಿ ತೆರಿಗೆಯ ಅಸಿಸ್ಟೆಂಟ್ ಕಮಿಷನರ್ ಅಥವಾ [2][ವೃತ್ತಿ ತೆರಿಗೆ ಅಧಿಕಾರಿ][2] ಈ

ಅಧಿನಿಯಮದ ಮೂಲಕ ಅಥವಾ ಮೇರೆಗೆ ಯಾವುದೇ ತೆರಿಗೆ ನಿರ್ಧರಣೆಯನ್ನು ಮಾಡಲು ಈ ಬಗ್ಗೆ ರಾಜ್ಯ ಸರ್ಕಾರವು ಅಧಿಕೃತಗೊಳಿಸಿದ ಇತರ ಯಾರೇ ಅಧಿಕಾರಿ;

1. 1993ರ ಅಧಿನಿಯಮ ಸಂಖ್ಯೆ 11ರ ಮೂಲಕ ದಿನಾಂಕ 01.04.1993ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 1993ರ ಅಧಿನಿಯಮ ಸಂಖ್ಯೆ 5ರ ಮೂಲಕ ದಿನಾಂಕ 09.11.1992ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಸಿ) "ಬೆಂಗಳೂರು ನಗರ ಸಮುಚ್ಚಯ'' ಎಂದರೆ ನಗರ ಭೂ (ಪರಮಾವಧಿ ಮತ್ತು ನಿಯಂತ್ರಣ) ಅಧಿನಿಯಮ, 1976 (ಕೇಂದ್ರಾ ಅಧಿನಿಯಮ 1976ರ 33)ರ ಅನುಸೂಚಿ 1ರಲ್ಲಿ ಹಾಗೆಂದು ನಿರ್ದಿಷ್ಟಪಡಿಸಿದ ಪ್ರದೇಶ;

(ಡಿ) "ಕಮಿಷನರ್'' ಎಂದರೆ, 14ನೇ ಪ್ರಕರಣದ ಮೇರೆಗೆ ನೇಮಿತನಾದ ವೃತ್ತಿ ತೆರಿಗೆಯ ಕಮಿಷನರ್ ಮತ್ತು ಇದು ಈ ಪ್ರಕರಣದ ಮೇರೆಗೆ ನೇಮಿತನಾದ ವೃತ್ತಿ ತೆರಿಗೆಯ [1][ಅಡಿಷನಲ್ ಕಮಿಷನರನ್ನು][1] (ಯಾರಾದರೂ ಇದ್ದರೆ) ಒಳಗೊಳ್ಳುತ್ತದೆ;

1. 1993ರ ಅಧಿನಿಯಮ ಸಂಖ್ಯೆ 5ರ ಮೂಲಕ ದಿನಾಂಕ 09.11.1992ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಇ) [1]["ಜಂಟಿ ಕಮಿಷನರ್'']][1] ಎಂದರೆ 14ನೇ ಪ್ರಕರಣದ ಮೇರೆಗೆ ವೃತ್ತಿ ತೆರಿಗೆಯ [1][ಜಂಟಿ ಕಮಿಷನ್‌ರಾಗಿ][1] ನೇಮಿತನಾದ ಯಾರೇ ವ್ಯಕ್ತಿ;

1. 1993ರ ಅಧಿನಿಯಮ 5ರ ಮೂಲಕ 09.11.1992ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಎಫ್) "ನಿಯೋಜಕ" ಅಧೀನದಲ್ಲಿ ನಿಯಮಿತವಾಗಿ ಯಾವುದೇ ವೇತನವನ್ನು ಅಥವಾ ಮಜೂರಿಯನ್ನು ಗಳಿಸುವ ನಿಯೋಜಿತನಿಗೆ ಸಂಬಂಧಿಸಿದ "ನಿಯೋಜಕ'' ಎಂದರೆ, ಅಂಥ ವೇತನವನ್ನು ಅಥವಾ ಮಜೂರಿಯನ್ನು ಬಟವಾಡೆ ಮಾಡಲು ಜವಾಬ್ದಾರನಾಗಿರುವ ವ್ಯಕ್ತಿ ಅಥವಾ ಅಧಿಕಾರಿ ಮತ್ತು ಇದು ಕಚೇರಿಯ ಅಥವಾ ಯಾವುದೇ ಕಾರ್ಯ ಸಂಸ್ಥೆಯ ಮುಖ್ಯಸ್ಥನನ್ನು ಮತ್ತು ನಿಯೋಜಕನ ವ್ಯವಸ್ಥಾಪಕನನ್ನು ಅಥವಾ ಏಜೆಂಟನನ್ನು ಒಳಗೊಳ್ಳುತ್ತದೆ;

(ಜಿ) "ತಿಂಗಳು'' ಎಂದರೆ, ಕ್ಯಾಲೆಂಡರ್ ತಿಂಗಳು;

(ಹೆಚ್) "ವ್ಯಕ್ತಿ'' ಎಂದರೆ; ಕರ್ನಾಟಕ ರಾಜ್ಯದಲ್ಲಿ ಯಾವುದೇ ವೃತ್ತಿ, ಕಸಬು ಆಜೀವಿಕೆ ಅಥವಾ ಉದ್ಯೋಗದಲ್ಲಿ ತೊಡಗಿರುವ ಯಾರೇ ವ್ಯಕ್ತಿ ಮತ್ತು ಇದು, ಹಾಗೆ ತೊಡಗಿರುವ ಹಿಂದೂ ಅವಿಭಕ್ತ ಕುಟುಂಬ, ಸಂಸ್ಥೆ, ಕಂಪನಿ, ನಿಗಮ ಅಥವಾ ಇತರ ನಿಗಮಿತನಿಕಾಯ, ಯಾವುದೇ ಸಂಘ, ಕ್ಲಬ್ ಅಥವಾ ಸಂಸ್ಥೆಯನ್ನು ಒಳಗೊಳ್ಳುತ್ತದೆ. ಆದರೆ ಸಾಂಧರ್ಭಿಕವಾಗಿ ಮಜೂರಿಯನ್ನು ಗಳಿಸುವ ಯಾರೇ ವ್ಯಕ್ತಿಯನ್ನು ಒಳಗೊಳ್ಳುವುದಿಲ್ಲ.

**[1][ವಿವರಣೆ.-** ಸಂಸ್ಥೆ, ಕಂಪನಿ, ನಿಗಮ ಅಥವಾ ಇತರ ನಿಗಮ ನಿಕಾಯ, ಯಾವುದೇ ಸಮಾಜ, ಕ್ಲಬ್ ಅಥವಾ ಒಕ್ಕೂಟದ ಪ್ರತಿಯೊಂದು [2][ಮಾಲೀಕತ್ವದ ಘಟಕ][2] ಶಾಖೆಯನ್ನು ಒಬ್ಬ ವ್ಯಕ್ತಿಯೆಂಬುದಾಗಿ ಪರಿಗಣಿಸತಕ್ಕದ್ದು.][1]

1. 2003ರ ಅಧಿನಿಯಮ ಸಂಖ್ಯೆ 7ರ ಮೂಲಕ ದಿನಾಂಕ 01.04.2003ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
2. 2023ರ ಅಧಿನಿಯಮ ಸಂಖ್ಯೆ 14ರ ಮೂಲಕ ದಿನಾಂಕ 01.04.2023ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(ಐ) "ವೃತ್ತಿ ತೆರಿಗೆ'' ಅಥವಾ "ತೆರಿಗೆ'' ಎಂದರೆ, ಈ ಅಧಿನಿಯಮದ ಉಪಬಂಧಗಳ ಮೇರೆಗೆ ವಿಧಿಸಬಹುದಾದ ತೆರಿಗೆ;

[1][(ಜೆ) "ವೇತನ'' ಅಥವಾ "ಮಜೂರಿ'' ಎಂಬುದು, ನಗದು ಅಥವಾ ವಸ್ತು ರೂಪದಲ್ಲಿ ಸಂದಾಯ ಮಾಡಬಹುದಾದ ಯಾರೇ ವ್ಯಕ್ತಿಯನ್ನು ನಿಯಮಿತವಾಗಿ ಪಡೆಯುವ ವೇತನವನ್ನು ಅಥವಾ ಮಜೂರಿಯನ್ನು, ತುಟ್ಟಿಭತ್ಯೆಯನ್ನು ಮತ್ತು ಇತರ ಎಲ್ಲ ಪರಿಶ್ರಮ ಧನವನ್ನು ಒಳಗೊಳ್ಳುತ್ತದೆ ಮತ್ತು ಅದು ಆದಾಯ ತೆರಿಗೆಯ ಅಧಿನಿಯಮ, 1961ರ 17ನೇ ಪ್ರಕರಣದಲ್ಲಿ

ಪರಿಭಾಷಿತವಾದಂತೆ, ಪರಿಲಬ್ಧಗಳನ್ನು ಮತ್ತು ವೇತನದ ಬದಲಾಗಿ ಪಡೆಯುವ ಲಾಭಗಳನ್ನು ಸಹ ಒಳಗೊಳ್ಳುವುದು;

**ವಿವರಣೆ.-** (i) ಯಾವುದೇ ಹೆಸರಿನಲ್ಲಿ ಪೂರ್ಣವಾಗಿ ಅಥವಾ ಭಾಗಶಃವಾಗಿ 'ಬೋನಸ'ನ್ನು ಪಡೆಯುತ್ತಿರಲಿ, ಆಗ ಅಂಥ ಬೋನಸ್ಸನ್ನು ವರ್ಷದ ಹನ್ನೆರಡು ತಿಂಗಳಿಗೆ ವಿಸ್ತರಿಸತಕ್ಕದ್ದು ಅಥವಾ ಅಂಥ ತಿಂಗಳಿಗಾಗಿ ವೇತನ ಅಥವಾ ಮಜೂರಿಯ ಗಣನೆ ಉದ್ದೇಶಗಳಿಗಾಗಿ ಸಂಬಂಧಪಟ್ಟ ಬೋನಸ್ಸನ್ನು ಅಂಥ ತಿಂಗಳ ಸಂಖ್ಯೆಗೆ ವಿಸ್ತರಿಸತಕ್ಕದ್ದು.

(ii) ಯಾವುದೇ ಹೆಸರಿನಲ್ಲಿ ಪೂರ್ಣವಾಗಿ ಅಥವಾ ಭಾಗಶಃವಾಗಿ 'ವೇತನ' ಪಡೆಯುತ್ತಿರಲಿ, ಆಗ ಅಂಥ ಬಾಕಿಗಳನ್ನು ಅಂಥ ತಿಂಗಳಿಗಾಗಿ ವೇತನ ಅಥವಾ ಮಜೂರಿ ಗಣನೆಯ ಉದ್ದೇಶಗಳಿಗಾಗಿ ಸಂಬಂಧಪಟ್ಟ ಸಮುಚಿತ ತಿಂಗಳುಗಳಿಗೆ ವಿಸ್ತರಿಸತಕ್ಕದ್ದು. ][1]

1. 1989ರ ಅಧಿನಿಯಮ ಸಂಖ್ಯೆ 15ರ ಮೂಲಕ ದಿನಾಂಕ 01.04.1987ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಕೆ) "ಅನುಸೂಚಿ'' ಎಂದರೆ ಈ ಅಧಿನಿಯಮಕ್ಕೆ ಸೇರಿಸಲಾದ ಅನುಸೂಚಿ;

(ಎಲ್) "ನ್ಯಾಯಾಧಿಕರಣ'' ಎಂದರೆ, ಕರ್ನಾಟಕ ಅಪೀಲು ನ್ಯಾಯಾಧಿಕರಣ ಅಧಿನಿಯಮ, 1976 (ಕರ್ನಾಟಕ ಅಧಿನಿಯಮ, 1976ರ 10)ರ ಮೇರೆಗೆ ರಚಿಸಲಾದ ಕರ್ನಾಟಕ ಅಪೀಲು ನ್ಯಾಯಾಧಿಕರಣ;

(ಎಂ) "ವರ್ಷ'' ಎಂದರೆ ಏಪ್ರಿಲ್ ಮೊದಲನೇ ದಿನದಂದು ಪ್ರಾರಂಭವಾಗುವ ವರ್ಷ.

**3. ತೆರಿಗೆ ಮತ್ತು ಶುಲ್ಕವನ್ನು ವಿಧಿಸುವುದು.-** (1) ರಾಜ್ಯದ ಪ್ರಯೋಜನಕ್ಕಾಗಿ ವೃತ್ತಿಗಳು, ಕಸಬುಗಳು, ಆಜೀವಿಕೆಗಳು ಮತ್ತು ಉದ್ಯೋಗದ ಮೇಲೆ ತೆರಿಗೆಯನ್ನು ವಿಧಿಸತಕ್ಕದ್ದು ಮತ್ತು ಸಂಗ್ರಹಿಸತಕ್ಕದ್ದು.

(2) ಅನುಸೂಚಿಯ ಎರಡನೇ ಅಂಕಣದಲ್ಲಿ ನಿರ್ದಿಷ್ಟಪಡಿಸಲಾದಂತೆ, ರಾಜ್ಯದಲ್ಲಿ ಯಾವುದೇ ರೀತಿಯಲ್ಲಿ ಯಾವುದೇ ವೃತ್ತಿಯನ್ನು ಅಥವಾ ಆಜೀವಿಕೆಯನ್ನು ನಡೆಸುತ್ತಿರುವ ಅಥವಾ ಯಾವುದೇ ಕಸಬಿನಲ್ಲಿ ತೊಡಗಿರುವ ಅಥವಾ ಸಾರ್ವಜನಿಕ ಅಥವಾ ಖಾಸಗಿಯಾಗಿ ಯಾವುದೇ ನೇಮಕಾತಿಯನ್ನು ಹೊಂದಿರುವ ಪ್ರತಿಯೊಬ್ಬ ವ್ಯಕ್ತಿಯು, ಸದರಿ ಅನುಸೂಚಿಯ ಮೂರನೇ ಅಂಕಣದಲ್ಲಿ ಅದಕ್ಕೆ ಪ್ರತಿಯಾದ ನಮೂದಿನಲ್ಲಿ ನಮೂದಿಸಿದ ದರದಲ್ಲಿ ತೆರಿಗೆಯನ್ನು ರಾಜ್ಯ ಸರ್ಕಾರಕ್ಕೆ ಪಾವತಿಸಲು ಬದ್ಧನಾಗಿರತಕ್ಕದ್ದು.

[3][ಪರಂತು, ಅರವತ್ತು ವರ್ಷಗಳಾಗಿರುವ ಹಿರಿಯ ನಾಗರಿಕ ವ್ಯಕ್ತಿಗಳು ತೆರಿಗೆಯನ್ನು ಪಾವತಿಸತಕ್ಕದ್ದಲ್ಲ.][3]

[1][ಮತ್ತೂ ಪರಂತು, ಈ ಪ್ರಕರಣದ ಮೇರೆಗೆ ಯಾರೇ ವ್ಯಕ್ತಿಯಿಂದ ತೆರಿಗೆ ವಿಧಿಸುವಿಕೆ ಮತ್ತು ತೆರಿಗೆ ಸಂಗ್ರಹಿಸುವಿಕೆಯು ಸಂವಿಧಾನದ 276ನೇ ವಿಧಿಯ (2)ನೇ ಖಂಡದಲ್ಲಿ ನಿರ್ದಿಷ್ಟಪಡಿಸಲಾದ ನಿರ್ಬಂಧಕ್ಕೆ ಒಳಪಟ್ಟಿರತಕ್ಕದ್ದು.][1]

[2][ಮತ್ತೂ ಪರಂತು, ಯಾರೇ ವ್ಯಕ್ತಿಯು ಒಂದು ವರ್ಷದಲ್ಲಿ ನೂರ ಇಪ್ಪತ್ತು ದಿನಗಳನ್ನು ಮೀರದಂತೆ ಅಂಥ ವೃತ್ತಿ ಅಥವಾ ಆಜೀವಿಕೆಯನ್ನು ನಡೆಸಿದ್ದರೆ ಅಥವಾ ಕಸಬಿನಲ್ಲಿ ತೊಡಗಿದ್ದರೆ ಅಥವಾ ನೇಮಕಾತಿಯನ್ನು ಹೊಂದಿದ್ದರೆ ಅಥವಾ ಉದ್ಯೋಗದಲ್ಲಿದ್ದರೆ ಆ ವ್ಯಕ್ತಿಯು ಯಾವುದೇ ತೆರಿಗೆಯನ್ನು ಆ ವರ್ಷಕ್ಕೆ ಪಾವತಿಸತಕ್ಕದ್ದಲ್ಲ.][2]

1. 1981ರ ಅಧಿನಿಯಮ ಸಂಖ್ಯೆ 8ರ ಮೂಲಕ ದಿನಾಂಕ 04.04.1981 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
2. 1982ರ ಅಧಿನಿಯಮ ಸಂಖ್ಯೆ 26ರ ಮೂಲಕ ದಿನಾಂಕ 27.07.1982 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
3. 2015ರ ಅಧಿನಿಯಮ ಸಂಖ್ಯೆ 14ರ ಮೂಲಕ ದಿನಾಂಕ 01.04.2015 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

4. 2018ರ ಅಧಿನಿಯಮ ಸಂಖ್ಯೆ 6ರ ಮೂಲಕ ದಿನಾಂಕ 01.04.2018 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**[1][3ಎ. xxx][1]**

1. 1998ರ ಅಧಿನಿಯಮ ಸಂಖ್ಯೆ 3ರ ಮೂಲಕ ದಿನಾಂಕ 01.04.1998 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

**4. ನಿಯೋಜಿತಕರ ಪರವಾಗಿ ತೆರಿಗೆಯನ್ನು ಕಟಾವಣೆಗೊಳಿಸಲು ಮತ್ತು ಸಂದಾಯ ಮಾಡಲು ನಿಯೋಜಕನ ಹೊಣೆ.-** ವೇತನವನ್ನು ಅಥವಾ ಮಜೂರಿಯನ್ನು ಪಡೆಯುವ ಯಾರೇ ವ್ಯಕ್ತಿಯು, ಈ ಅಧಿನಿಯಮದ ಮೇರೆಗೆ ಸಂದಾಯ ಮಾಡಬಹುದಾದ ತೆರಿಗೆಯನ್ನು ಅಂಥ ವ್ಯಕ್ತಿಗೆ ವೇತನವನ್ನು ಅಥವಾ ಮಜೂರಿಯನ್ನು ಸಂದಾಯ ಮಾಡುವುದಕ್ಕೆ ಮುಂಚಿತವಾಗಿ, ಅಂಥ ವ್ಯಕ್ತಿಗೆ ಸಂದಾಯ ಮಾಡಬೇಕಾದ ವೇತನದಿಂದ ಅಥವಾ ಮಜೂರಿಯಿಂದ ಅವನ ನಿಯೋಜಕನು ಕಟಾವಣೆ ಮಾಡಿಕೊಳ್ಳತಕ್ಕದು ಮತ್ತು ಅಂಥ ನಿಯೋಜಕನು, ಹಾಗೆ ಕಟಾವಣೆ ಮಾಡಿಕೊಳ್ಳತಕ್ಕದು, ಅಥವಾ ಇಲ್ಲದಿರಲಿ ಅಂಥ ವ್ಯಕ್ತಿಗಳಿಗೆ ವೇತನವನ್ನು ಅಥವಾ ಮಜೂರಿಯನ್ನು ಸಂದಾಯ ಮಾಡಿದಾಗ ಎಲ್ಲ ವ್ಯಕ್ತಿಗಳ ಪರವಾಗಿ ತೆರಿಗೆಯನ್ನು ಸಂದಾಯ ಮಾಡಲು ಬದ್ಧನಾಗಿರತಕ್ಕದು.

ಪರಂತು, ನಿಯೋಜಕನು ಸರ್ಕಾರಿ ಅಧಿಕಾರಿಯಾಗಿದ್ದರೆ, ಈ ಅಧಿನಿಯಮದಲ್ಲಿ ಏನೇ ಇದ್ದರೂ, ಅಂಥ ನಿಯೋಜಕನು ಸದರಿ ಹೊಣೆಯನ್ನು ಯಾವ ರೀತಿಯಲ್ಲಿ ತೀರಿಸಬೇಕೆಂಬುದನ್ನು ರಾಜ್ಯ ಸರ್ಕಾರವು ನಿಯಮಗಳ ಮೂಲಕ ನಿಯಮಿಸಬಹುದು.

**5. ನೋಂದಣಿ ಮತ್ತು ದಾಖಲಾತಿ.-** (1) 4ನೇ ಪ್ರಕರಣದ ಮೇರೆಗೆ ತೆರಿಗೆಯನ್ನು ಸಂದಾಯ ಮಾಡಲು ಬದ್ಧನಾದ (ಸರ್ಕಾರಿ ಅಧಿಕಾರಿಯಾಗಿರದ) ಪ್ರತಿಯೊಬ್ಬ ನಿಯೋಜಕನು, ತೆರಿಗೆ ನಿರ್ಧರಣಾ ಪ್ರಾಧಿಕಾರದಿಂದ ನೋಂದಣಿ ಪ್ರಮಾಣ ಪತ್ರವನ್ನು ನಿಯಮಿಸಲಾದ ರೀತಿಯಲ್ಲಿ ಪಡೆಯತಕ್ಕದು.

[1][ಪರಂತು, ಆಯುಕ್ತನು, ಸದರಿ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ರೀತಿಯಲ್ಲಿ ವಿದ್ಯುನ್ಮಾನ ವ್ಯವಸ್ಥೆಯಲ್ಲಿ ನೋಂದಣಿಗಾಗಿ ಅರ್ಜಿಯನ್ನು ಸಲ್ಲಿಸಬೇಕಾದ ವೆಬ್‌ಸೈಟ್‌ನ್ನು ಅಧಿಸೂಚಿಸಬಹುದು.][1]

1. 2011ರ ಅಧಿನಿಯಮ ಸಂಖ್ಯೆ 15ರ ಮೂಲಕ ದಿನಾಂಕ 01.04.2011 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(2) ಈ ಅಧಿನಿಯಮದ ಮೇರೆಗೆ ತೆರಿಗೆಯನ್ನು ಸಂದಾಯ ಮಾಡಲು ಹೊಣೆಗಾರನಾಗಿರುವ (ವೇತನವನ್ನು ಅಥವಾ ಮಜೂರಿಯನ್ನು ಪಡೆಯುವ ಯಾವ ವ್ಯಕ್ತಿಯು ಸಂಬಂಧದಲ್ಲಿ, ತೆರಿಗೆಯನ್ನು ಅವನ ನಿಯೋಜಕನು ಸಂದಾಯ ಮಾಡುವನೋ ಅಂಥ ವ್ಯಕ್ತಿಯ ಹೊರತಾಗಿ) ಪ್ರತಿಯೊಬ್ಬ ವ್ಯಕ್ತಿಯು, ತೆರಿಗೆ ನಿರ್ಧರಣಾ ಪ್ರಾಧಿಕಾರದಿಂದ ದಾಖಲಾತಿಯ ಪ್ರಮಾಣ ಪತ್ರವನ್ನು ನಿಯಮಿಸಲಾದ ರೀತಿಯಲ್ಲಿ ಪಡೆಯತಕ್ಕದ್ದು.

[1][ಪರಂತು, ಆಯುಕ್ತನು, ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ರೀತಿಯಲ್ಲಿ ವಿದ್ಯುನ್ಮಾನ ವ್ಯವಸ್ಥೆಯಲ್ಲಿ ದಾಖಲಾತಿ ಪಟ್ಟಿಗಾಗಿ ಅರ್ಜಿಯನ್ನು ಸಲ್ಲಿಸತಕ್ಕ ವೆಬ್‌ಸೈಟನ್ನು ಅಧಿಸೂಚಿಸಬಹುದು.][1]

1. 2011ರ ಅಧಿನಿಯಮ ಸಂಖ್ಯೆ 15ರ ಮೂಲಕ ದಿನಾಂಕ 01.04.2011 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(3) ನೋಂದಣಿ ಅಥವಾ ದಾಖಲಾತಿಯ ಪ್ರಮಾಣಪತ್ರವನ್ನು ಪಡೆಯಬೇಕೆಂದು ಅಗತ್ಯಪಡಿಸಲಾಗಿರುವ ಪ್ರತಿಯೊಬ್ಬ ನಿಯೋಜಕನು ಅಥವಾ ವ್ಯಕ್ತಿಯು, ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಿಂದ ತೊಂಬತ್ತು ದಿವಸಗಳ ಒಳಗಾಗಿ ಅಥವಾ ಆ ದಿನಾಂಕದಂದು ಅವನು ಯಾವುದೇ ವೃತ್ತಿಯಲ್ಲಿ, ಕಸಬಿನಲ್ಲಿ, ಆಜೀವಿಕೆಯಲ್ಲಿ ಅಥವಾ ಉದ್ಯೋಗದಲ್ಲಿ ತೊಡಗಿರದಿದ್ದರೆ, ತನ್ನ ವೃತ್ತಿಯು, ಕಸಬು, ಆಜೀವಿಕೆ ಅಥವಾ ಉದ್ಯೋಗವು ಪ್ರಾರಂಭವಾದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಅಥವಾ (2)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ವ್ಯಕ್ತಿಯ ಸಂಬಂಧದಲ್ಲಿ, ಅವನ ದಾಖಲಾತಿಯ ಪ್ರಮಾಣಪತ್ರದಲ್ಲಿ ನಮೂದಿಸಲಾಗಿರುವ ದರಕ್ಕಿಂತ ಹೆಚ್ಚಾದ ಅಥವಾ ಕಡಿಮೆಯಾದ ದರದಲ್ಲಿ ತೆರಿಗೆಯನ್ನು ಸಂದಾಯ ಮಾಡಲು

ಹೊಣೆಗಾರನಾಗಿರುವ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಸಂದರ್ಭಾನುಸಾರ, ನೋಂದಣಿ ಅಥವಾ ದಾಖಲಾತಿಯ ಪ್ರಮಾಣಪತ್ರಕ್ಕಾಗಿ, ಅಥವಾ ಪರಿಷ್ಕೃತ ದಾಖಲಾತಿಯ ಪ್ರಮಾಣಪತ್ರಕ್ಕಾಗಿ ತೆರಿಗೆ ನಿರ್ಧರಣಾ ಪ್ರಾಧಿಕಾರಕ್ಕೆ ನಿಯಮಿಸಲಾದಂತೆ ತಾನು ಸೂಕ್ತವೆಂದು ಭಾವಿಸಬಹುದಾದಂಥ ವಿಚಾರಣೆಯನ್ನು ಮಾಡಿದ ಅನಂತರ [2][ಅರ್ಜಿಯನ್ನು ಸ್ವೀಕರಿಸಿದ ದಿನಾಂಕದಿಂದ ಮೂರು ದಿನಗಳೊಳಗಾಗಿ][2] (ಮೊದಲನೇ ವರ್ಷದಲ್ಲಿ ಈ ಅವಧಿಯನ್ನು ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಿಂದ ತೊಂಬತ್ತು ದಿನಗಳಿಗೆ ವಿಸ್ತರಿಸತಕ್ಕದು). ಅರ್ಜಿಯು ಕ್ರಮಬದ್ಧವಾಗಿದ್ದರೆ ಅಂಥ ಪ್ರಮಾಣಪತ್ರವನ್ನು ಅವನಿಗೆ ಕೊಡಬಹುದು.

[1][ಪರಂತು, ತೆರಿಗೆ ನೋಂದಣಿ ಪ್ರಮಾಣಪತ್ರವನ್ನು ಹೊರಡಿಸಿದ ನಂತರದಲ್ಲಿ ಈ ಅಧಿನಿಯಮದ ಅಡಿಯಲ್ಲಿ ಪಾವತಿಸಬೇಕಾದ ತೆರಿಗೆಯು ಪರಿಷ್ಕೃತವಾದರೆ, ಈ ಅಧಿನಿಯಮದ ಅಡಿಯಲ್ಲಿ ವ್ಯಕ್ತಿಯು ಪಾವತಿಸಬೇಕಾದ ತೆರಿಗೆಯು, ನೋಂದಣಿ ಪ್ರಮಾಣಪತ್ರವು ಪರಿಷ್ಕೃತವಾಗಿಲ್ಲದಿದ್ದರೂ, ಅಂಥ ಪರಿಷ್ಕರಣೆಯ ದಿನಾಂಕದಿಂದ ಅಂಥ ಪರಿಷ್ಕೃತ ದರಗಳಲ್ಲಿ ತೆರಿಗೆಯನ್ನು ಪಾವತಿಸತಕ್ಕದ್ದು.] [1]

1. 1994ರ ಅಧಿನಿಯಮ ಸಂಖ್ಯೆ 18ರ ಮೂಲಕ ದಿನಾಂಕ 01.04.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 2016ರ ಅಧಿನಿಯಮ ಸಂಖ್ಯೆ 5ರ ಮೂಲಕ ದಿನಾಂಕ 01.04.2016 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(4) ತೆರಿಗೆ ನಿರ್ಧರಣಾ ಪ್ರಾಧಿಕಾರವು ಪ್ರತಿಯೊಂದು ದಾಖಲಾತಿಯ ಪ್ರಮಾಣಪತ್ರದಲ್ಲಿ ಅದನ್ನು ಹೊಂದಿರುವವನು ಅನುಸೂಚಿಗೆ ಅನುಸಾರವಾಗಿ ಸಂದಾಯ ಮಾಡಬೇಕಾದ ತೆರಿಗೆಯ ಮೊಬಲಗನ್ನು ಮತ್ತು ಅದನ್ನು ಯಾವ ದಿನಾಂಕದೊಳಗಾಗಿ ಸಂದಾಯ ಮಾಡಬೇಕೆಂಬುದನ್ನು ನಮೂದಿಸತಕ್ಕದ್ದು ಮತ್ತು ಅಂಥ ಪ್ರಮಾಣಪತ್ರವು 12ನೇ ಪ್ರಕರಣದ ಉದ್ದೇಶಗಳಿಗಾಗಿ ತಗಾದೆ ನೋಟೀಸಾಗಿರತಕ್ಕದು.

[1][(5) XXX][1]

1. 1994ರ ಅಧಿನಿಯಮ ಸಂಖ್ಯೆ 18ರ ಮೂಲಕ ದಿನಾಂಕ 01.04.1994 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

[1][(5) ನೋಂದಣಿ ಅಥವಾ ಹೆಸರು ದಾಖಲಾತಿ ಮಾಡಿಕೊಳ್ಳಲು ಹೊಣೆಗಾರನಾದ ಒಬ್ಬ ನಿಯೋಜಕ ಅಥವಾ ಒಬ್ಬ ವ್ಯಕ್ತಿಯು ನಿರ್ದಿಷ್ಟ ಅವಧಿಯೊಳಗೆ ಅಂಥ ನೋಂದಣಿಗಾಗಿ ಅಥವಾ ಹೆಸರು ದಾಖಲಾತಿಗಾಗಿ ಅರ್ಜಿ ಸಲ್ಲಿಸಲು ವಿಫಲನಾದಲ್ಲಿ, ತೆರಿಗೆ ನಿರ್ಧರಣೆ ಪ್ರಾಧಿಕಾರಿಯು, ಅವನಿಗೆ ತನ್ನ ಅಹವಾಲನ್ನು ಹೇಳಿಕೊಳ್ಳಲು ಸಮಂಜಸ ಅವಕಾಶವನ್ನು ನೀಡಿದ ತರುವಾಯ, ನಿಯೋಜಕನ ಸಂದರ್ಭದಲ್ಲಿ ಒಂದು ಸಾವಿರ ರೂಪಾಯಿಗಳ ಮತ್ತು ಇತರ ಯಾವುದೇ ವ್ಯಕ್ತಿಯ ಸಂದರ್ಭದಲ್ಲಿ ಐದು ನೂರು ರೂಪಾಯಿಗಳ ದಂಡವನ್ನು ವಿಧಿಸತಕ್ಕದ್ದು.][1]

1. 2009ರ ಅಧಿನಿಯಮ ಸಂಖ್ಯೆ 07ರ ಮೂಲಕ ದಿನಾಂಕ 01.04.2009 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(6) ನೋಂದಣಿ ಅಥವಾ ದಾಖಲಾತಿಗೆ ಹೊಣೆಗಾರನಾದ ನಿಯೋಜಕನು ಅಥವಾ ವ್ಯಕ್ತಿಯು, ಈ ಪ್ರಕರಣದ ಮೇರೆಗೆ ಸಲ್ಲಿಸಲಾದ ಯಾವುದೇ ಅರ್ಜಿಯಲ್ಲಿ ಉದ್ದೇಶಪೂರ್ವಕವಾಗಿ ಸುಳ್ಳು ಮಾಹಿತಿಯನ್ನು ನೀಡಿದ್ದಲ್ಲಿ, ತೆರಿಗೆ ನಿರ್ಧರಣಾ ಪ್ರಾಧಿಕಾರವು ಅವನಿಗೆ ಅಹವಾಲನ್ನು ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ಕೊಟ್ಟ ಆನಂತರ, ಒಂದು ಸಾವಿರ ರೂಪಾಯಿಗಳಿಗೆ ಮೀರದ ದಂಡವನ್ನು ವಿಧಿಸಬಹುದು.

[1]**[6. ವಿವರ ಪಟ್ಟಿಕೆಗಳು.-** (1) ಈ ಅಧಿನಿಯಮದ ಮೇರೆಗೆ ನೋಂದಾಯಿತನಾದ ಪ್ರತಿಯೊಬ್ಬ ನಿಯೋಜಕನು, ತಾನು ಸಂದಾಯ ಮಾಡಿದ ಸಂಬಳವನ್ನು ಮತ್ತು ಮಜೂರಿಯನ್ನು ಮತ್ತು ಆ ತಿಂಗಳಿನ ನಿಕಟಪೂರ್ವದಲ್ಲಿ ಅದರ ಸಂಬಂಧದಲ್ಲಿ ತಾನು ಮುರಿದುಕೊಂಡಿದ್ದ ತೆರಿಗೆಯ ಮೊಬಲಗನ್ನು ತೋರಿಸುವ ವಿವರ ಪಟ್ಟಿಕೆಯನ್ನು ನಿಯಮಿಸಲಾದ ನಮೂನೆಯಲ್ಲಿ ತೆರಿಗೆ ನಿರ್ಧರಣಾ ಪ್ರಾಧಿಕಾರಕ್ಕೆ ಆ ತಿಂಗಳು ಮುಗಿದ ಹದಿನೈದು ದಿನಗಳೊಳಗಾಗಿ ಒದಗಿಸತಕ್ಕುದು.

[2][ಮತ್ತು ಪರಂತು, ಆಯುಕ್ತರು ಅಧಿಸೂಚಿಸಬಹುದಾದಂತೆ, ನಿಯೋಜಕರ ನಿರ್ದಿಷ್ಟ ವರ್ಗವು, ನಿಯಮಿಸಲಾದ ನಮೂನೆಯಲ್ಲಿಯ ವಿವರಪಟ್ಟಿಯನ್ನು, ಸದರಿ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ರೀತಿಯಲ್ಲಿ ವಿದ್ಯುನ್ಮಾನ ವಿಧಾನದಲ್ಲಿ ಅಂತರ್ಜಾಲದ ಮೂಲಕ ಸಲ್ಲಿಸತಕ್ಕದ್ದು.][2]

(2) ಯಾರೇ ನಿಯೋಜನಕನು, (1)ನೇ ಉಪ-ಪ್ರಕರಣದ ಮೇರೆಗೆ ಯಾವುದೇ ವಿವರಣ ಪತ್ರವನ್ನು ಸಲ್ಲಿಸುವ ಮುಂಚೆ, ಆತನು ನಿಯಮಿಸಲಾದ ರೀತಿಯಲ್ಲಿ, (6ಎ) ಪ್ರಕರಣದ ಮೇರೆಗೆ ಈಗಾಗಲೇ ಪಾವತಿಸಿರುವ ಯಾವುದೇ ತೆರಿಗೆಯಿಂದ ಕಟಾವಣೆಗೊಳಿಸಲಾದಂತಹ ವಿವರಣಾ ಪತ್ರದ ಆಧಾರದ ಮೇಲೆ ತಾನು ಪಾವತಿಸಬೇಕಾದ ಪೂರ್ಣ ಪ್ರಮಾಣದ ತೆರಿಗೆಯನ್ನು ಮುಂಗಡವಾಗಿ ಪಾವತಿಸತಕ್ಕದ್ದು ಮತ್ತು ವಿವರಣಾ ಪತ್ರದೊಂದಿಗೆ ಅಂತಹ ತೆರಿಗೆ ಪಾವತಿಯ ತೃಪ್ತಿದಾಯಕ ರುಜುವಾತು ನೀಡತಕ್ಕದ್ದು ಮತ್ತು ಅಂತಹ ಪಾವತಿಯ ರುಜುವಾತು ಇಲ್ಲದ ವಿವರಣಾ ಪತ್ರವನ್ನು ಸಲ್ಲಿಸಲಾಗಿದೆ ಎಂದು ಭಾವಿಷತಕ್ಕದ್ದಲ್ಲ ಮತ್ತು ಅಂತಿಮ ಮೌಲ್ಯಮಾಪನ ಮಾಡಿದ ನಂತರ ಹಾಗೇ ಪಾವತಿಸಿದ ತೆರಿಗೆಯ ಮೊತ್ತವನ್ನು ಅಂತಿಮವಾಗಿ ನಿರ್ಣಯಿಸಿದ ತೆರಿಗೆಯನ್ನು ಪಾವತಿಸಲಾಗಿದೆ ಎಂದು ಭಾವಿಸತಕ್ಕದ್ದು.

[2][ಪರಂತು, ಆಯುಕ್ತರು ಅಧಿಸೂಚಿಸಬಹುದಾದಂತೆ, ನಿಯೋಜಕರ ನಿರ್ದಿಷ್ಟ ವರ್ಗವು, (1)ನೇ ಉಪಪ್ರಕರದಡಿಯಲ್ಲಿನ ವಿವರಪಟ್ಟಿಯ ಆಧಾರದ ಮೇಲೆ ಪಾವತಿಸಬೇಕಾದ ತೆರಿಗೆಯನ್ನು, ಸದರಿ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಲಾದ ರೀತಿಯಲ್ಲಿ, ವಿದ್ಯುನ್ಮಾನ ವಿಧಾನದಲ್ಲಿ ಅಂತರ್ಜಾಲದ ಮೂಲಕ ಜಮೆ ಮಾಡತಕ್ಕದ್ದು.] [2]

1. 1995ರ ಅಧಿನಿಯಮ ಸಂಖ್ಯೆ 6ರ ಮೂಲಕ ದಿನಾಂಕ 01.04.1995 ರಿಂದ ಜಾರಿಗೆ ಬರುವಂತೆ 6 ಮತ್ತು 6ಎ ಪ್ರಕರಣವನ್ನು ಪ್ರತಿಯೋಜಿಸಲಾಗಿದೆ.
2. 2010ರ ಅಧಿನಿಯಮ ಸಂಖ್ಯೆ 5ರ ಮೂಲಕ ದಿನಾಂಕ 01.04.2010 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**6ಎ. ಮುಂಗಡವಾಗಿ ತೆರಿಗೆ ಪಾವತಿ.-** (1) ಈ ಅಧಿನಿಯಮದ ಅಡಿಯಲ್ಲಿ ನೋಂದಾಯಿಸಿರುವ ಪ್ರತಿಯೊಬ್ಬ ಉದ್ಯೋಗದಾತನು, ತಾನು ಪಾವತಿಸುವ ವೇತನ ಮತ್ತು ಮಜೂರಿಗಳ ವಿವರವನ್ನು ಮತ್ತು ಒಂದು ತಿಂಗಳ ನಿಕಟಪೂರ್ವ ತಿಂಗಳ ಅವಧಿಯಲ್ಲಿ ತಾನು ಕಟಾವಣೆಗೊಳಿಸಿದ ತೆರಿಗೆ ಮೊತ್ತವನ್ನು ನಿರ್ದಿಷ್ಟ ನಮೂನೆಯಲ್ಲಿನ ವಿವರಣಪಟ್ಟಿಯಲ್ಲಿ ತೋರಿಸಿ, ಆ ತಿಂಗಳು ಮುಗಿದ ಇಪ್ಪತ್ತು ದಿನಗಳ ಒಳಗಾಗಿ ಕರನಿರ್ಧರಣಾ ಪ್ರಾಧಿಕಾರಕ್ಕೆ ಸಲ್ಲಿಸತಕ್ಕದ್ದು.

[3][[1][ಪರಂತುಕ ಮತ್ತು ವಿವರಣೆ XXX][1]][3]

[2][ಮತ್ತು ಪರಂತು, ಆಯುಕ್ತರು ಅಧಿಸೂಚಿಸಬಹುದಾದಂತೆ, ನಿಯೋಜಕರ ನಿರ್ದಿಷ್ಟ ವರ್ಗವು, ನಿಯಮಿಸಲಾದ ನಮೂನೆಯಲ್ಲಿಯ ವಿವರಪಟ್ಟಿಯನ್ನು, ಸದರಿ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಲಾದ ರೀತಿಯಲ್ಲಿ, ವಿದ್ಯುನ್ಮಾನ ವಿಧಾನದಲ್ಲಿ ಅಂತರ್ಜಾಲದ ಮೂಲಕ ಸಲ್ಲಿಸತಕ್ಕದ್ದು.] [2]

1. 1996ರ ಅಧಿನಿಯಮ ಸಂಖ್ಯೆ 5ರ ಮೂಲಕ ದಿನಾಂಕ 01.04.1996 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
2. 2010ರ ಅಧಿನಿಯಮ ಸಂಖ್ಯೆ 5ರ ಮೂಲಕ ದಿನಾಂಕ 01.04.2010 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
3. 2012ರ ಅಧಿನಿಯಮ ಸಂಖ್ಯೆ 18ರ ಮೂಲಕ ದಿನಾಂಕ 01.04.2012 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

(2) ಅಂಥ ಪ್ರತಿಯೊಂದು ವಿವರಣಾ ಪಟ್ಟಿಯು ವಿವರಣಾ ಪಟ್ಟಿಗೆ ಅನುಸಾರವಾಗಿ ಬಾಕಿ ಇರುವ ತೆರಿಗೆಯ ಪೂರ್ಣ ಮೊತ್ತವನ್ನು ಸಂದಾಯ ಮಾಡಿದುದರ ರುಜುವಾತಾಗಿ ಖಜಾನೆಯ ಚಲನನ್ನು ಹೊಂದಿರತಕ್ಕದ್ದು, ಮತ್ತು ಅಂಥ ಸಂದಾಯದ ರುಜುವಾತನ್ನು ಇಲ್ಲದಿರುವ ವಿವರಣಾ ಪಟ್ಟಿಯನ್ನು ಸೂಕ್ತವಾಗಿ ಸಲ್ಲಿಸಲಾಗಿದೆ ಎಂಬುದಾಗಿ ಭಾವಿಸತಕ್ಕದ್ದಲ್ಲ ಮತ್ತು 11 ಮತ್ತು 13ನೇ ಪ್ರಕರಣದ ಉದ್ದೇಶಗಳಿಗಾಗಿ ಸಂದಾಯ ಮಾಡಬೇಕಾದ ಮೊತ್ತವು ಈ ಅಧಿನಿಯಮದ ಅಡಿಯಲ್ಲಿ ಅಂಥ ಉದ್ಯೋಗದಾತನು ಸಂದಾಯ ಮಾಡಬೇಕಾಗಿರುವ ಮೊತ್ತ ಎಂಬುದಾಗಿ ಭಾವಿಸತಕ್ಕದ್ದು.

[1][ಪರಂತು, ಆಯುಕ್ತರು ಅಧಿಸೂಚಿಸಬಹುದಾದಂತೆ, ನಿಯೋಜಕರ ನಿರ್ದಿಷ್ಟ ವರ್ಗವು, (1)ನೇ ಉಪಪ್ರಕರಣದಡಿಯಲ್ಲಿನ ವಿವರಪಟ್ಟಿಯ ಆಧಾರದ ಮೇಲೆ ಪಾವತಿಸಬೇಕಾದ ತೆರಿಗೆಯನ್ನು, ಸದರಿ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಲಾದ ರೀತಿಯಲ್ಲಿ, ವಿದ್ಯುನ್ಮಾನ ವಿಧಾನದಲ್ಲಿ ಅಂತರ್ಜಾಲದ ಮೂಲಕ ಜಮೆ ಮಾಡತಕ್ಕದ್ದು.][1]

1. 2010ರ ಅಧಿನಿಯಮ ಸಂಖ್ಯೆ 5ರ ಮೂಲಕ ದಿನಾಂಕ 01.04.2010 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(3) ಉಪ-ಪ್ರಕರಣ (1)ರ ಮೇರೆಗೆ ಗೊತ್ತುಪಡಿಸಲಾದ ದಿನಾಂಕದೊಳಗೆ ಅಂಥ ವಿವರ ಪಟ್ಟಿಕೆಯನ್ನು ಯಾರೇ ನಿಯೋಜಕನು ಸಲ್ಲಿಸದಿದ್ದಲ್ಲಿ ಅಥವಾ ಹಾಗೆ ಆತನು ಸಲ್ಲಿಸಿದ ವಿವರಪಟ್ಟಿಕೆಯು ತಪ್ಪಿರುವುದಾಗಿ ಅಥವಾ ಅಪೂರ್ಣವಿರುವುದಾಗಿ ಕರನಿರ್ಧರಣೆ ಪ್ರಾಧಿಕಾರಿಗೆ ಕಂಡುಬಂದಲ್ಲಿ, ಕರನಿರ್ಧರಣೆ ಪ್ರಾಧಿಕಾರಿಯು ಆತನ ಅತ್ಯುತ್ತಮ ತೀರ್ಮಾನಕ್ಕೆ ಅನುಸಾರವಾಗಿ, ಆ ತಿಂಗಳ ಮಟ್ಟಿಗೆ [1][ಅಥವಾ ಸಂದರ್ಭಾನುಸಾರವಾಗಿ ಆ ತ್ರೈಮಾಸಿಕದ ಮಟ್ಟಿಗೆ][1] ತಾತ್ಕಾಲಿಕವಾಗಿ ನಿಯೋಜಕನ ಕರನಿರ್ಧರಣೆ ಮಾಡಬಹುದು ಮತ್ತು ಅಂಥ ಕರನಿರ್ಧರಣೆಯ ಕಾರಣಗಳನ್ನು ದಾಖಲಿಸಿ, ಅದರ ಆಧಾರದ ಮೇಲೆ ತೆರಿಗೆ ನೀಡುವಂತೆ ಆಗ್ರಹಿಸಬಹುದು ಮತ್ತು ಸಂಗ್ರಹಿಸಬಹುದು:

1. 1996ರ ಅಧಿನಿಯಮ ಸಂಖ್ಯೆ 5ರ ಮೂಲಕ ದಿನಾಂಕ 01.04.1996 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

ಪರಂತು [1][(3ನೇ)][1] ಉಪಪ್ರಕರಣದ ಮೇರೆಗೆ ಯಾವುದೇ ಕ್ರಮವನ್ನು ಕೈಗೊಳ್ಳುವ ಮೊದಲು ಉದ್ಯೋಗದಾತನಿಗೆ ಆಲಿಸಲ್ಪಡುವ ಅವಕಾಶ ಕೊಡತಕ್ಕದ್ದು.][1]

1. 1996ರ ಅಧಿನಿಯಮ ಸಂಖ್ಯೆ 5ರ ಮೂಲಕ ದಿನಾಂಕ 01.04.1996 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][(4) ಒಬ್ಬ ನಿಯೋಜಕನು ಈ ಅಧಿನಿಯಮದಲ್ಲಿ ಅಗತ್ಯಪಡಿಸಲಾದಂತೆ ನಿಯಮಿಸಲಾದ ನಮೂನೆಯಲ್ಲಿ ವಿವರ ತ:ಖ್ತೆಯನ್ನು ಒದಗಿಸಲು ವಿಫಲನಾದಲ್ಲಿ ಅಥವಾ ಒದಗಿಸಲಾದ ಯಾವುದೇ ವಿವರ ತ:ಖ್ತೆಯ ಮೇಲೆ ಬಾಕಿಯಿರುವ ತೆರಿಗೆಯನ್ನು ಸಂದಾಯ ಮಾಡಲು ವಿಫಲನಾಗಿರುವಲ್ಲಿ, ತೆರಿಗೆ ನಿರ್ಧರಣೆ ಪ್ರಾಧಿಕಾರಿಯು, ಆತನಿಗೆ ತನ್ನ ಅಹವಾಲು ಹೇಳಿಕೊಳ್ಳಲು ಸಮಂಜಸ ಅವಕಾಶವನ್ನು ನೀಡಿದ ತರುವಾಯ, ಇನ್ನೂರ ಐವತ್ತು ರೂಪಾಯಿಗಳ ದಂಡವನ್ನು ವಿಧಿಸತಕ್ಕದ್ದು.][1]

1. 2009ರ ಅಧಿನಿಯಮ ಸಂಖ್ಯೆ 7ರ ಮೂಲಕ ದಿನಾಂಕ 01.04.2009 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**7. ನಿಯೋಜಕನ** [1][**ಅಥವಾ ವ್ಯಕ್ತಿಯ**][1] **ಕರನಿರ್ಧರಣೆ**.- [2][(1) ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ಅಧಿನಿಯಮ, 2009, ಜಾರಿಗೆ ಬರುವುದಕ್ಕೆ ಪೂರ್ವದಲ್ಲಿ ಅಸ್ತಿತ್ವದಲ್ಲಿದ್ದ (2)ನೇ ಉಪಪ್ರಕರಣದಲ್ಲಿ ಏನೇ ಇದ್ದರೂ, ಈ ಮುಂದಿನ ಸಂದರ್ಭಗಳನ್ನು ಹೊರತುಪಡಿಸಿ 2008ರ ಏಪ್ರಿಲ್ 1ನೇ ದಿನಾಂಕದಿಂದ ಪ್ರಾರಂಭವಾದ ಯಾವುದೇ ವರ್ಷದಲ್ಲಿ ಪ್ರತಿಯೊಬ್ಬ ನಿಯೋಜಕನನ್ನು 6ನೇ ಪ್ರಕರಣದಡಿಯಲ್ಲಿ ಆತನು ದಾಖಲು ಮಾಡಿದ ವಿವರ ಪಟ್ಟಿಕೆಯ ಆಧಾರದ ಮೇಲೆ ತೆರಿಗೆ ನಿರ್ಧರಣೆಯನ್ನು ಮಾಡಲಾಗಿದೆಯೆಂದು ಭಾವಿಸತಕ್ಕದ್ದು. ಆಯುಕ್ತರು, ನಿಯೋಜಕನಿಗೆ ಆತನು ಯಾವುದೇ ವರ್ಷಕ್ಕಾಗಿ ದಾಖಲು ಮಾಡಿದ ವಿವರಪಟ್ಟಿಕೆಗೆ ಬೆಂಬಲವಾಗಿ ಲೆಕ್ಕಪತ್ರಗಳನ್ನು ತೆರಿಗೆ ನಿರ್ಧರಣೆ ಪ್ರಾಧಿಕಾರಿಯ ಮುಂದೆ ಹಾಜರುಪಡಿಸಬೇಕೆಂದು ಅಗತ್ಯಪಡಿಸಿ ನೋಟೀಸನ್ನು ನೀಡಿರುವ ಸಂದರ್ಭದಲ್ಲಿ ಅಂಥ ತೆರಿಗೆ ನಿರ್ಧರಣೆ ಪ್ರಾಧಿಕಾರಿಯು ಅಂಥ ವ್ಯಾಪಾರಿಯ ತೆರಿಗೆ ನಿರ್ಧರಣೆಯನು,-

(ಎ) ಆತನು ಸಲ್ಲಿಸಿದ ವಿವರ ಪಟ್ಟಿಕೆಯು ಸರಿಯಾಗಿದೆ ಮತ್ತು ಪರಿಪೂರ್ಣವಾಗಿದೆ ಎಂದು ತನಗೆ ಮನದಟ್ಟಾದರೆ, ವಿವರ ಪಟ್ಟಿಕೆಯ ಆಧಾರದ ಮೇಲೆ ಮಾಡತಕ್ಕದ್ದು;

(ಬಿ) ತನ್ನ ಅತ್ಯುತ್ತಮ ನಿರ್ಣಯದ ಪ್ರಕಾರ, ಸಲ್ಲಿಸಿದ ವಿವರಪಟ್ಟಿಕೆಯು ಸರಿಯಾಗಿಲ್ಲ ಅಥವಾ ಪರಿಪೂರ್ಣವಾಗಿಲ್ಲ ಎಂದು ಕಂಡುಬಂದರೆ, ನಿಯೋಜಕನಿಗೆ ಬರಹದಲ್ಲಿ ಆ ತೆರಿಗೆ ನಿರ್ಧರಣೆಯ ವಿರುದ್ಧ ಕಾರಣವನ್ನು ತೋರಿಸಿಕೊಡಲು ಅವಕಾಶವನ್ನು ನೀಡಿದ ತರುವಾಯ ತೆರಿಗೆ ನಿರ್ಧರಣೆಯನ್ನು ಮಾಡತಕ್ಕದ್ದು.][2]

[2][(2) ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ಅಧಿನಿಯಮ, 2009, ಜಾರಿಗೆ ಬರುವುದಕ್ಕೆ ಪೂರ್ವದಲ್ಲಿ ಅಸ್ತಿತ್ವದಲ್ಲಿದ್ದ ಈ ಪ್ರಕರಣದಲ್ಲಿ ಏನೇ ಇದ್ದರೂ, ಸರ್ಕಾರವು, ಯಾವುದೇ ವರ್ಷಕ್ಕಾಗಿ ಯಾವುದೇ ನಿರ್ದಿಷ್ಟ ವರ್ಗದ ನಿಯೋಜಕರಿಗಾಗಿ ಮಾಡಲಾದ ತೆರಿಗೆ ನಿರ್ಧರಣೆಯನ್ನು ನಿಯೋಜಕನು ಹಾಜರಾಗಬೇಕೆಂದು ಅಥವಾ ನಿಯೋಜಕನ ಲೆಕ್ಕಪತ್ರಗಳನ್ನು ಮತ್ತು ಇತರ ದಾಖಲೆಗಳನ್ನು ಹಾಜರುಪಡಿಸಬೇಕೆಂದು ಅಗತ್ಯಪಡಿಸದೇ (1)ನೇ ಉಪಪ್ರಕರಣದಡಿಯಲ್ಲಿ ಸಲ್ಲಿಸಲಾದ ವಿವರಪಟ್ಟಿಕೆಯ ಆಧಾರದ ಮೇಲೆ ಮಾಡಲಾಗಿದೆಯೆಂದು ಭಾವಿಸಬೇಕೆಂದು, ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳಿಗೆ ಒಳಪಟ್ಟು, ಅಧಿಸೂಚಿಸಬಹುದು.][2]

1. 1994ರ ಅಧಿನಿಯಮ ಸಂಖ್ಯೆ 18ರ ಮೂಲಕ ದಿನಾಂಕ 01.04.1994 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
2. 2009ರ ಅಧಿನಿಯಮ ಸಂಖ್ಯೆ 7ರ ಮೂಲಕ ದಿನಾಂಕ 01.04.2009 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][(3) ನಿಯೋಜಕನು ತನ್ನ ಹೆಸರನ್ನು ನೋಂದಾಯಿಸಲು ತನ್ನನ್ನು ತಾನೇ ತಪ್ಪಿದರೆ ಅಥವಾ ತನ್ನ ಹೆಸರನ್ನು ನೊಂದಾಯಿಸಿದಿದ್ದೂ, ಯಾವುದೇ ವಿವರಪಟ್ಟಿಕೆಯನ್ನು ದಾಖಲು ಮಾಡಲು ತಪ್ಪಿದರೆ, ಅಥವಾ ವ್ಯಕ್ತಿಯು 5ನೇ ಪ್ರಕರಣದ ಮೇರೆಗೆ ದಾಖಲಿಸಲು ವಿಫಲನಾಗಿದ್ದರೆ ತೆರಿಗೆ ನಿರ್ಧರಣಾ ಪ್ರಾಧಿಕಾರವು, ಮನವಿ ಮಾಡಿಕೊಳ್ಳಲು ಅವನಿಗೆ ಯುಕ್ತ ಅವಕಾಶವನ್ನು ಕೊಟ್ಟ ಅನಂತರ ಮತ್ತು ತಾನು ಸೂಕ್ತವೆಂದು ಭಾವಿಸುವಂಥ ವಿಚಾರಣೆಯನ್ನು ನಡೆಸಿದ ಅನಂತರ ಅಥವಾ ಅನ್ಯಥಾ, ಬಾಕಿಯಿರುವ ತೆರಿಗೆಯ ಮೊಬಲಗನ್ನು ತನ್ನ ಅತ್ಯುತ್ತಮ ವಿವೇಚನೆಗನುಸಾರವಾಗಿ ನಿರ್ಧರಿಸಿ ಆದೇಶವನ್ನು ಮಾಡತಕ್ಕದು. ][1]

1. 1994ರ ಅಧಿನಿಯಮ ಸಂಖ್ಯೆ 18ರ ಮೂಲಕ ದಿನಾಂಕ 01.04.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][(3ಎ) ಉಪ ಪ್ರಕರಣ (3)ರ ಮೇರೆಗೆ ಕರನಿರ್ಧರಣೆಯನ್ನು ಮಾಡುವಾಗ, ಕರನಿರ್ಧರಣೆ ಪ್ರಾಧಿಕಾರವು (3)ನೇ ಉಪ ಪ್ರಕರಣದ ಮೇರೆಗೆ ಕರನಿರ್ಧರಣೆ ಮಾಡಲಾದ ತೆರಿಗೆ ಮೊತ್ತಕ್ಕೆ ಸಮನಾದ ದಂಡನೆಯನ್ನು ಕರನಿರ್ಧರಣೆ ಮಾಡಲಾದ ತೆರಿಗೆಯ ಜೊತೆಗೆ ಪಾವತಿಸುವಂತೆಯೂ ಸಹ ಸಂದರ್ಭಾನುಸಾರವಾಗಿ ಉದ್ಯೋಗದಾತನಿಗೆ ಅಥವಾ ವ್ಯಕ್ತಿಗೆ ನಿರ್ದೇಶಿಸಲೂಬಹುದು.][1]

1. 1994ರ ಅಧಿನಿಯಮ ಸಂಖ್ಯೆ 18ರ ಮೂಲಕ ದಿನಾಂಕ 01.04.1994 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(4) ಹಾಗೆ ನಿರ್ಧರಿಸಲಾದ ತೆರಿಗೆಯ ಮೊಬಲಗನ್ನು [1][ಅಥವಾ ಹಾಗೆ ವಿಧಿಸಲಾದ ದಂಡದ ಮೊಬಲಗನ್ನು][1] ತೆರಿಗೆ ನಿರ್ಧರಣಾ ಪ್ರಾಧಿಕಾರದಿಂದ ತಗಾದೆ ನೋಟೀಸ್‌ನ್ನು ಸ್ವೀಕರಿಸಿದ ಹದಿನೈದು ದಿನಗಳೊಳಗಾಗಿ ಸಂದಾಯ ಮಾಡತಕ್ಕದ್ದು.

1. 1994ರ ಅಧಿನಿಯಮ ಸಂಖ್ಯೆ 18ರ ಮೂಲಕ ದಿನಾಂಕ 01.04.1994 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(5) (4)ನೇ ಉಪ-ಪ್ರಕರಣದ ಮೇರೆಗೆ ತಗಾದೆ ನೋಟೀಸು ಜಾರಿಯಾದ ಒಂದು ತಿಂಗಳೊಳಗೆ [1][ನಿಯೋಜಕನು, ಅಥವಾ ವ್ಯಕ್ತಿ][1] ಸಂದರ್ಭಾನುಸಾರ, ತನ್ನ ಹೆಸರನ್ನು ನೋಂದಾಯಿಸದಿರಲು ಅಥವಾ 6ನೇ ಪ್ರಕರಣದ ಮೇರೆಗೆ ವಿವರಪಟ್ಟಿಕೆಯನ್ನು ಸಲ್ಲಿಸದಿರಲು [2][ಅಥವಾ 5ನೇ ಪ್ರಕರಣದ ಮೇರೆಗೆ ತನ್ನ ಹೆಸರನ್ನು ದಾಖಲಿಸದಿರಲು][2] ಸಾಕಷ್ಟು ಕಾರಣದಿಂದಾಗಿ, ಪ್ರತಿಬಂಧಿತನಾಗಿದ್ದನೆಂದು ತೆರಿಗೆ ನಿರ್ಧರಣಾ ಪ್ರಾಧಿಕಾರಕ್ಕೆ ಮನದಟ್ಟು ಮಾಡಿಕೊಟ್ಟರೆ, ತೆರಿಗೆ ನಿರ್ಧರಣಾ ಪ್ರಾಧಿಕಾರವು (3)ನೇ ಉಪಪ್ರಕರಣದ ಮೇರೆಗೆ ಮಾಡಿದ್ದ ತೆರಿಗೆ ನಿರ್ಧರಣೆಯನ್ನು ರದ್ದುಗೊಳಿಸತಕ್ಕದ್ದು ಮತ್ತು ಆ ಸಂದರ್ಭದ ಸನ್ನಿವೇಶಗಳಿಗನುಸಾರವಾಗಿ ಈ ಪ್ರಕರಣದ ಉಪಬಂಧಗಳ ಮೇರೆಗೆ ಹೊಸ ತೆರಿಗೆ ನಿರ್ಧರಣೆಯನ್ನು ಮಾಡಲು ಮುಂದುವರೆಯತಕ್ಕದ್ದು.

1. 1994ರ ಅಧಿನಿಯಮ ಸಂಖ್ಯೆ 18ರ ಮೂಲಕ ದಿನಾಂಕ 01.04.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 1994ರ ಅಧಿನಿಯಮ ಸಂಖ್ಯೆ 18ರ ಮೂಲಕ ದಿನಾಂಕ 01.04.1994 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**[2][[1][7ಎ. xxx]][1]][2]**

1. 2004ರ ಅಧಿನಿಯಮ ಸಂಖ್ಯೆ 26ರ ಮೂಲಕ ದಿನಾಂಕ 01.08.2004 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
2. 2012ರ ಅಧಿನಿಯಮ ಸಂಖ್ಯೆ 18ರ ಮೂಲಕ ದಿನಾಂಕ 01.04.2012 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

**8. ತಪ್ಪನ್ನು ಸರಿಪಡಿಸುವುದು.-** (1) ದಾಖಲೆಯಲ್ಲಿ ಸ್ಪಷ್ಟವಾಗಿ ಕಂಡುಬರುವಂಥ ಯಾವುದೇ ತಪ್ಪನ್ನು ಸರಿಪಡಿಸುವ ದೃಷ್ಟಿಯಿಂದ, ಈ ಅಧಿನಿಯಮದ ಮೇರೆಗಿನ ಯಾವುದೇ ಪ್ರಾಧಿಕಾರವು, ತಾನು ಮಾಡಿದ ಆದೇಶದ ದಿನಾಂಕದಿಂದ ನಾಲ್ಕು ವರ್ಷಗಳೊಳಗಿನ ಅವಧಿಯೊಳಗೆ ಯಾವುದೇ ಕಾಲದಲ್ಲಿ, ಅಂಥ ಆದೇಶವನ್ನು ತಿದ್ದುಪಡಿ ಮಾಡಬಹುದು.

ಪರಂತು, ಸಂದರ್ಭಾನುಸಾರ, ನಿಯೋಜಕನು ಅಥವಾ ವ್ಯಕ್ತಿಯ ಕರನಿರ್ಧರಣೆಯನ್ನು ಹೆಚ್ಚಿಸುವ ಅಥವಾ ಹೊಣೆಯನ್ನು ಅನ್ಯಥಾ ಹೆಚ್ಚಿಸುವ ಆ ತಿದ್ದುಪಡಿಯನ್ನು, ಹಾಗೆ ಮಾಡುವ ತನ್ನ ಉದ್ದೇಶದ ಬಗ್ಗೆ ಸಂಬಂಧಪಟ್ಟ ಪ್ರಾಧಿಕಾರವು ನಿಯೋಜಕನಿಗೆ ಅಥವಾ ವ್ಯಕ್ತಿಗೆ ನೋಟೀಸ್ ನೀಡಿದ ಹೊರತು ಮತ್ತು ಮನವಿಯನ್ನು ಸಲ್ಲಿಸುವ ಅವಕಾಶವನ್ನು ನಿಯೋಜಕನಿಗೆ ಅಥವಾ ವ್ಯಕ್ತಿಗೆ ನೀಡಿದ ಹೊರತು, ಮಾಡತಕ್ಕದ್ದಲ್ಲ.

(2) (1)ನೇ ಉಪ-ಪ್ರಕರಣದ ಮೇರೆಗೆ ಮಾಡಿದ ಆದೇಶವನ್ನು, ಯಾವ ಆದೇಶದಲ್ಲಿರುವ ತಪ್ಪನ್ನು ಸರಿಪಡಿಸಲಾಯಿಯೋ ಆ ಮೂಲ ಆದೇಶವನ್ನು ಕಾನೂನಿನ ಯಾವ ಉಪಬಂಧಗಳ ಮೇರೆಗೆ ಮಾಡಲಾಯಿತೋ ಅದೇ ಉಪಬಂಧದ ಮೇರೆಗೆ ಮಾಡಿದ ಆದೇಶ ಎಂದು ಭಾವಿಸತಕ್ಕದ್ದು.

**9. ತಪ್ಪಿಸಕೊಂಡ ತೆರಿಗೆಯ ನಿರ್ಧರಣೆ.-** (1) ಈ ಅಧಿನಿಯಮದ ಮೇರಗೆ ಸಂದಾಯ ಮಾಡಬೇಕಾದ ಯಾವುದೇ ತೆರಿಗೆಯು ಯಾವುದೇ ಕಾರಣಕ್ಕಾಗಿ ತೆರಿಗೆ ನಿರ್ಧರಣೆಯಿಂದ ತಪ್ಪಿಸಿಕೊಂಡರೆ ಅಥವಾ ತೆರಿಗೆಯನ್ನು ನಿರ್ಧರಿಸಬೇಕಾದ ದರಕ್ಕಿಂತ ಕಡಿಮೆ ದರಕ್ಕೆ ನಿರ್ಧರಿಸಲಾಗಿದ್ದರೆ, ಆ ತೆರಿಗೆಗೆ ಸಂಬಂಧಿಸಿದ ವರ್ಷದ ಕೊನೆಯಿಂದ ನಾಲ್ಕು ವರ್ಷಗಳೊಳಗೆ ಯಾವುದೇ ಕಾಲದಲ್ಲಿ, ಸಂಬಂಧಪಟ್ಟ ನಿಯೋಜಕನಿಗೆ ಅಥವಾ ವ್ಯಕ್ತಿಗೆ ನೋಟೀಸನ್ನು ನೀಡಿದ ಅನಂತರ ಮತ್ತು ತಾನು ಅವಶ್ಯವೆಂದು ಪರ್ಯಾಲೋಚಿಸಬಹುದಾದಂತ ವಿಚಾರಣೆಯನ್ನು ನಡೆಸಿದ ಅನಂತರ ತನ್ನ ಅತ್ಯುತ್ತಮ ವಿವೇಚನೆಗೆ ಅನುಸಾರವಾಗಿ, ಸಂದರ್ಭಾನುಸಾರ ತೆರಿಗೆಯನ್ನು ನಿರ್ಧರಿಸಲು ಅಥವಾ ಪುನರ್ ನಿರ್ಧರಿಸಲು ಮುಂದುವರೆಯಬಹುದು.

ಪರಂತು, ಅಂಥ ತೆರಿಗೆಯು, ಸಂದರ್ಭಾನುಸಾರ, ತೆರಿಗೆ ನಿರ್ಧರಣೆಯಿಂದ ತಪ್ಪಿಸಿಕೊಳ್ಳದಿದ್ದರೆ ಅಥವಾ ಅದು ನಿರ್ಧರಿತವಾಗಬೇಕಾದ ದರಕ್ಕಿಂತ ಕಡಿಮೆ ದರದಲ್ಲಿ ನಿರ್ಧರಿತವಾಗದಿದ್ದರೆ ಯಾವ ದರವನ್ನು ವಿಧಿಸಲಾಗುತ್ತಿತ್ತೋ ಅದೇ ದರದಲ್ಲಿ ತೆರಿಗೆಯನ್ನು ವಿಧಿಸತಕ್ಕದ್ದು.

(2) (1)ನೇ ಉಪ-ಪ್ರಕರಣದ ಮೇರೆಗೆ ತೆರಿಗೆ ನಿರ್ಧರಣೆಯನ್ನು ಮಾಡುವಲ್ಲಿ, ಮಾಹಿತಿಯನ್ನು ಬುದ್ಧಿಪೂರ್ವಕವಾಗಿ ಬಹಿರಂಗಪಡಿಸದಿರುವುದರಿಂದ ಅಥವಾ ತೆರಿಗೆಯನ್ನು ತಪ್ಪಿಸಕೊಳ್ಳಲು ನಿಯೋಜಕನು ಅಥವಾ ವ್ಯಕ್ತಿಯು ಪ್ರಯತ್ನಿಸಿದುದರಿಂದ ತೆರಿಗೆ ನಿರ್ಧರಣೆಯಿಂದ ತಪ್ಪಿಸಿಕೊಳ್ಳಲಾಗಿತ್ತೆಂದು ತೆರಿಗೆ ನಿರ್ಧರಣಾ ಪ್ರಾಧಿಕಾರಕ್ಕೆ ಮನದಟ್ಟಾದರೆ, (1)ನೇ ಉಪ-ಪ್ರಕರಣದ ಮೇರೆಗೆ ನಿರ್ಧರಿಸಲಾದ ತೆರಿಗೆಯ ಜೊತೆಗೆ ಹಾಗೆ ನಿರ್ಧರಿಸಲಾದ ತೆರಿಗೆಯ [1][ಶೇಕಡ ನೂರರಷ್ಟಕ್ಕೆ ಸಮನಾದ][1] ದಂಡವನ್ನು ಸಂದಾಯ ಮಾಡುವಂತೆ ಅಂಥ ನಿಯೋಜಕನಿಗೆ ಅಥವಾ ವ್ಯಕ್ತಿಗೆ ನಿರ್ದೇಶಿಸಬಹುದು:

ಪರಂತು, ಈ ಉಪ-ಪ್ರಕರಣದ ಮೇರೆಗೆ, ಹಾಗೆ ದಂಡವನ್ನು ವಿಧಿಸಿದುದರ ಪ್ರತಿಯಾಗಿ ಸಾಕಷ್ಟು ಕಾರಣವನ್ನು ತೋರಿಸಲು ಬಾಧಿತ ನಿಯೋಜಕನಿಗೆ ಅಥವಾ ವ್ಯಕ್ತಿಗೆ ಯುಕ್ತ ಅವಕಾಶವನ್ನು ನೀಡಿದ ಹೊರತು, ಯಾವ ದಂಡವನ್ನೂ ವಿಧಿಸತಕ್ಕದ್ದಲ್ಲ.

1. 2023ರ ಅಧಿನಿಯಮ ಸಂಖ್ಯೆ. 14 ರ ಮೂಲಕ ದಿನಾಂಕ:1.04.2023 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**10. ದಾಖಲಾದ ವ್ಯಕ್ತಿಗಳು ತೆರಿಗೆಯನ್ನು ಪಾವತಿಸುವುದು [1][ಮತ್ತು ವಿವರಪಟ್ಟಿಕೆಯನ್ನು ಸಲ್ಲಿಸುವುದು][1] [2][ಮತ್ತು ಕೆಲವು ದಾಖಲಾದ ವ್ಯಕ್ತಿಗಳ ಸಂದರ್ಭದಲ್ಲಿ ತೆರಿಗೆಯನ್ನು ಕಡಿತಗೊಳಿಸುವುದು][2].-** [3][(1) ದಾಖಲಾದ ಪ್ರತಿಯೊಬ್ಬ ವ್ಯಕ್ತಿಯು, ಈ ಅಧಿನಿಯಮದ ಮೇರೆಗೆ ತಾನು ಸಂದಾಯ ಮಾಡಬೇಕಾದ ತೆರಿಗೆಯನ್ನು ಸಂದಾಯ ಮಾಡತಕ್ಕದ್ದು

ಮತ್ತು ನಿಯಮಿಸಲಾದ ರೀತಿಯಲ್ಲಿ ಮತ್ತು ಅಂಥ ನಮೂನೆಯಲ್ಲಿ ಕರನಿರ್ಧರಣಾ ಪ್ರಾಧಿಕಾರದ ಮುಂದೆ ತನ್ನ ವಿವರಪಟ್ಟಿಯನ್ನು ಸಲ್ಲಿಸತಕ್ಕದ್ದು.][3]

[4][ಪರಂತು, ನೋಂದಾಯಿಸಬೇಕಾದ ವ್ಯಕ್ತಿಯು, ಈ ಅಧಿನಿಯಮದ ಅಡಿಯಲ್ಲಿ ತೆರಿಗೆ ಪಾವತಿ ಉದ್ದೇಶಕ್ಕಾಗಿ, ನೋಂದಣಿ ಮಾಡಿಸಿಕೊಳ್ಳಲು ವಿಫಲನಾದಾಗ್ಯೂ ಕೂಡಾ, ನೋಂದಾಯಿತನಾಗಿರುವುದಾಗಿ ಭಾವಿಸತಕ್ಕದ್ದು.][4]

[5][ಮತ್ತು ಪರಂತು, ಆಯುಕ್ತರು ಅಧಿಸೂಚಿಸಬಹುದಾದಂತೆ, ಹೆಸರು ದಾಖಲಾದ ವ್ಯಕ್ತಿಗಳ ನಿರ್ದಿಷ್ಟ ವರ್ಗವು, ಪಾವತಿಸಬೇಕಾದ ತೆರಿಗೆಯನ್ನು ವಿದ್ಯುನ್ಮಾನ ವಿಧಾನದಲ್ಲಿ ಅಂತರ್ಜಾಲದ ಮೂಲಕ ಜಮೆ ಮಾಡತಕ್ಕದ್ದು, ಹಾಗೆಯೇ ನಿಯಮಿಸಬಹುದಾದ ನಮೂನೆಯಲ್ಲಿ ವಿವರಪಟ್ಟಿಯನ್ನು, ಸದರಿ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಲಾದ ನಮೂನೆಯಲ್ಲಿ ವಿದ್ಯುನ್ಮಾನ ವಿಧಾನದಲ್ಲಿ ಅಂತರ್ಜಾಲದ ಮೂಲಕ ಸಲ್ಲಿಸತಕ್ಕದ್ದು.][5]

1. 2007ರ ಅಧಿನಿಯಮ ಸಂಖ್ಯೆ 5ರ ಮೂಲಕ ದಿನಾಂಕ 01.04.2007 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
2. 2006ರ ಅಧಿನಿಯಮ ಸಂಖ್ಯೆ 5ರ ಮೂಲಕ ದಿನಾಂಕ 01.04.2006 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
3. 2007ರ ಅಧಿನಿಯಮ ಸಂಖ್ಯೆ 5ರ ಮೂಲಕ ದಿನಾಂಕ 01.04.2007 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
4. 2005ರ ಅಧಿನಿಯಮ ಸಂಖ್ಯೆ 11ರ ಮೂಲಕ ದಿನಾಂಕ 01.04.2005 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
5. 2010ರ ಅಧಿನಿಯಮ ಸಂಖ್ಯೆ 5ರ ಮೂಲಕ ದಿನಾಂಕ 01.04.2010 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(2) ದಾಖಲಾದ ವ್ಯಕ್ತಿಗಳು ತಮ್ಮ ದಾಖಲಾತಿ ಪ್ರಮಾಣ ಪತ್ರಗಳಲ್ಲಿ ನಿರ್ದಿಷ್ಟಪಡಿಸದಂತೆ ಪ್ರತಿ ವರ್ಷ ಬಾಕಿ ಇರುವ ತೆರಿಗೆಯ ಮೊಬಲಗನ್ನು-

| | |
|---|---|
| [1][(ಎ) ಯಾವುದೇ ವರ್ಷದ ಪ್ರಾರಂಭಕ್ಕೆ ಮೊದಲು ನೋಂದಾಯಿಸಿಕೊಂಡಿರುವ ವ್ಯಕ್ತಿಗೆ ಸಂಬಂಧಿಸಿದಂತೆ; | ಆ ವರ್ಷದ 30ನೇ ಏಪ್ರಿಲ್ ಮೊದಲು. |
| (ಬಿ) ಯಾವುದೇ ವರ್ಷದ ಪ್ರಾರಂಭದ ನಂತರ ನೋಂದಾಯಿಸಿಕೊಂಡಿರುವ ವ್ಯಕ್ತಿಗೆ ಸಂಬಂಧಿಸಿದಂತೆ; | ನೋಂದಣಿ ದಿನಾಂಕದಿಂದ ಒಂದು ತಿಂಗಳ ಒಳಗಾಗಿ.][1] |

- ಸಂದಾಯ ಮಾಡತಕ್ಕದ್ದು.

1. 1986 ರ ಅಧಿನಿಯಮ ಸಂಖ್ಯೆ 13ರ ಮೂಲಕ ದಿನಾಂಕ 2.05.1986 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][(3) ಉಪ ಪ್ರಕರಣ (1) ಮತ್ತು (2)ರಲ್ಲಿ ಏನೇ ಒಳಗೊಂಡಿದ್ದಾಗ್ಯೂ,-

(ಎ) ಅನುಸೂಚಿಯ 4ರ ಬಾಬ್ತುವಿನಲ್ಲಿ ನಿರ್ದಿಷ್ಟಪಡಿಸಲಾದಂತೆ ಕಮಿಷನ್ ಅಥವಾ ಇತರ ಸಂಭಾವನೆಯ ರೂಪದಲ್ಲಿ ಯಾವುದೇ ಹೆಸರಿನಿಂದ ಕರೆಯುವಂಥ ಆದಾಯವನ್ನು ಗಳಿಸುತ್ತಿರುವ ಯಾರೇ ಏಜೆಂಟ್ ಅಥವಾ ಇತರ ಯಾರೇ ವ್ಯಕ್ತಿಯು ಈ ಅಧಿನಿಯಮದ ಅಡಿಯಲ್ಲಿ ಪಾವತಿಸಬೇಕಾದ ತೆರಿಗೆಯನ್ನು, ಅಂಥ ಕಮಿಷನ್ ಅಥವಾ ಇತರ ಸಂಭಾವನೆಯನ್ನು ಆತನಿಗೆ ಪಾವತಿಸುವ ಪೂರ್ವದಲ್ಲಿ ವಿಮಾ ಕಂಪನಿ ಅಥವಾ ಬ್ಯಾಂಕ್ ಅಥವಾ ಇತರ ಹಣಕಾಸು ಸಂಸ್ಥೆಯು ತೆರಿಗೆಯನ್ನು ಕಟಾವಣೆಗೊಳಿಸತಕ್ಕದ್ದು ಮತ್ತು ಅಂಥ ವಿಮಾ ಕಂಪನಿ ಅಥವಾ ಬ್ಯಾಂಕ್ ಅಥವಾ ಇತರ ಹಣಕಾಸು ಸಂಸ್ಥೆಯು, ಅಂಥ ವ್ಯಕ್ತಿಗೆ ಕಮಿಷನ್ ಅನ್ನು ಅಥವಾ ಸಂಭಾವನೆಯನ್ನು ಪಾವತಿಸುವಾಗ ತೆರಿಗೆಯನ್ನು ಕಟಾವಣೆಗೊಳಿಸಿರಲಿ ಅಥವಾ ಕಟಾವಣೆಗೊಳಿಸಿಲ್ಲದಿರಲಿ, ಅಂಥ ಎಲ್ಲ ವ್ಯಕ್ತಿಗಳ ಪರವಾಗಿ ತೆರಿಗೆಯನ್ನು ಪಾವತಿಸುವುದಕ್ಕೆ ಹೊಣೆಗಾರರಾಗತಕ್ಕದ್ದು;

(ಬಿ) ಅನುಸೂಚಿ 1ರ ಬಾಬ್ತಿನಲ್ಲಿ ನಿರ್ದಿಷ್ಟಪಡಿಸಲಾದಂತೆ ಯಾರೇ ವೇತನ ಅಥವಾ ಮಜೂರಿದಾರನು ಈ ಅಧಿನಿಯಮದ ಅಡಿಯಲ್ಲಿ ನೋಂದಾಯಿತ ಅಥವಾ ದಾಖಲಾದ ಯಾರೇ ವ್ಯಕ್ತಿಗಾಗಿ ಕಾರ್ಯನಿರ್ವಹಿಸುತ್ತಿದ್ದರೆ, ಆದರೆ, ಆತನ ಉದ್ಯೋಗಿಯಾಗಿಯಲ್ಲದೆ, ಯಾವುದೇ

ಹೆಸರಿನಿಂದ ಕರೆಯುವಂಥ ವ್ಯಕ್ತಿ ಸೇವೆಯನ್ನು ಒದಗಿಸುತ್ತಿದ್ದರೆ, ಈ ಅಧಿನಿಯಮದ ಅಡಿಯಲ್ಲಿ ಅಂಥ ವೇತನ ಅಥವಾ ಮಜೂರಿದಾರನು ಪಾವತಿಸಬೇಕಾದ ತೆರಿಗೆಯನ್ನು, ಈ ಅಧಿನಿಯಮದ ಅಡಿಯಲ್ಲಿ ನೋಂದಾಯಿತ ಅಥವಾ ದಾಖಲಾದ ಅಂಥ ವ್ಯಕ್ತಿಯು ತನಗೆ ಸೇವೆ ನೀಡಿದ ಅಂಥ ವೇತನ ಅಥವಾ ಮಜೂರಿದಾರನಿಗೆ ಯಾವುದೇ ಮೊತ್ತವನ್ನು ಪಾವತಿಸುವ ಪೂರ್ವದಲ್ಲಿ ತೆರಿಗೆಯನ್ನು ಕಟಾವಣೆಗೊಳಿಸತಕ್ಕದ್ದು ಮತ್ತು ಅಂಥ ಸೇವಾದಾತನಿಗೆ ಮೊತ್ತವನ್ನು ಪಾವತಿಸುವಾಗ ಅಂಥ ತೆರಿಗೆ ಕಟಾವಣೆಯನ್ನು ಮಾಡಿರಲಿ ಅಥವಾ ಮಾಡಿಲ್ಲದಿರಲಿ, ಅಂಥ ಎಲ್ಲ ವೇತನ ಅಥವಾ ಮಜೂರಿದಾರರ ಪರವಾಗಿ ತೆರಿಗೆಯನ್ನು ಕಟಾವಣೆಗೊಳಿಸಲು ಹೊಣೆಗಾರನಾಗಿರತಕ್ಕದ್ದು;

(ಸಿ) ಈ ಅಧಿನಿಯಮದ ಅಡಿಯಲ್ಲಿ ನೋಂದಾಯಿತನಾದ ಅಥವಾ ದಾಖಲಾದ ಯಾರೇ ವ್ಯಕ್ತಿಯು, ಒಂದು ವರ್ಷದಲ್ಲಿನ ಒಂದು ತಿಂಗಳಿಗಿಂತ ಹೆಚ್ಚು ಬಾರಿ ಯಾವುದೇ ಸಾರಿಗೆ ವಾಹನವನ್ನು (ಆಟೋ ರಿಕ್ಷಾಗಳನ್ನು ಹೊರತುಪಡಿಸಿ) ಬಾಡಿಗೆಗೆ ಅಥವಾ ಕ್ರಯಕ್ಕೆ ಅಥವಾ ಅಂಥದ್ದೇ ನಿಬಂಧನೆಗಳ ಮೇಲೆ ಪಡೆದುಕೊಂಡಿದ್ದರೆ, ಅಂಥ ಸಾರಿಗೆ ವಾಹನದ ಮಾಲೀಕನು ಪಾವತಿಸಬೇಕಾದ ತೆರಿಗೆಯನ್ನು, ಮಾಲೀಕನಿಗೆ ಬಾಡಿಗೆ ಅಥವಾ ಯಾವುದೇ ಹೆಸರಿನಲ್ಲಿ ಹಾಗೆ ಯಾವುದೇ ಮೊತ್ತವನ್ನು ಪಾವತಿಸುವ ಪೂರ್ವದಲ್ಲಿ ಈ ಅಧಿನಿಯಮದ ಅಡಿಯಲ್ಲಿ ನೋಂದಾಯಿಸಲಾದ ಅಥವಾ ದಾಖಲಿಸಲಾದ ಅಂಥ ವ್ಯಕ್ತಿಯು ತೆರಿಗೆಯನ್ನು ಕಟಾವಣೆಗೊಳಿಸತಕ್ಕದ್ದು ಮತ್ತು ಅಂಥ ಮಾಲೀಕನಿಗೆ ಬಾಡಿಗೆಯನ್ನು ಅಥವಾ ಇತರ ಮೊತ್ತವನ್ನು ಪಾವತಿಸುವಾಗ ಆ ವ್ಯಕ್ತಿಯು ತೆರಿಗೆಯನ್ನು ಕಟಾವಣೆಗೊಳಿಸಿರಲಿ ಅಥವಾ ಇಲ್ಲದಿರಲಿ ಅಂಥ ಎಲ್ಲಾ ಮಾಲೀಕರ ಪರವಾಗಿ ತೆರಿಗೆಯನ್ನು ಪಾವತಿಸಲು ಹೊಣೆಗಾರನಾಗಿರತಕ್ಕದ್ದು;

(ಡಿ) ಅನುಸೂಚಿ 11ರ ಬಾಬ್ತಿನಲ್ಲಿ ನಿರ್ದಿಷ್ಟಪಡಿಸಲಾದಂತೆ ಯಾರೇ ಪರವಾನಗಿ ಪಡೆದ ಓಟದ ಕುದುರೆ ಮಾಲಿಕ, ತರಬೇತಿದಾರ, ಜಾಕಿ ಅಥವಾ ಬುಕ್‌ಮೇಕರನು ಈ ಅಧಿನಿಯಮದ ಅಡಿಯಲ್ಲಿ ಪಾವತಿಸಬೇಕಾದ ತೆರಿಗೆಯನ್ನು, ಪರವಾನಗಿಯನ್ನು ಸದರಿ ವ್ಯಕ್ತಿಗೆ ನೀಡಿರುವಂಥ ಟರ್ಫ್ ಕ್ಲಬ್ ಅಥವಾ ರೇಸ್ ಕ್ಲಬ್ ಅಂಥ ವ್ಯಕ್ತಿಗೆ ಯಾವುದೇ ಮೊತ್ತವನ್ನು ಪಾವತಿಸುವ ಪೂರ್ವದಲ್ಲಿ ತೆರಿಗೆಯನ್ನು ಕಟಾವಣೆಗೊಳಿಸತಕ್ಕದ್ದು; ಮತ್ತು ಅಂಥ ಟರ್ಫ್ ಕ್ಲಬ್ ಅಥವಾ ರೇಸ್ ಕ್ಲಬ್ ಅಂಥ ವ್ಯಕ್ತಿಗೆ ಯಾವುದೇ ಮೊತ್ತವನ್ನು ಪಾವತಿಸುವಾಗ ತೆರಿಗೆಯನ್ನು ಕಟಾವಣೆಗೊಳಿಸಿರಲಿ ಅಥವಾ ಇಲ್ಲದಿರಲಿ ಅಂಥ ಎಲ್ಲಾ ವ್ಯಕ್ತಿಗಳನ ಪರವಾಗಿ ತೆರಿಗೆಯನ್ನು ಪಾವತಿಸಲು ಹೊಣೆಗಾರನಾಗಿರತಕ್ಕದ್ದು;

(ಇ) ಈ ಅನುಸೂಚಿಯ 6ನೇ ಬಾಬ್ತಿನಲ್ಲಿ ನಿರ್ಧಿಷ್ಟಪಡಿಸಲಾದಂತೆ ಯಾರೇ ವೈದ್ಯ ವೃತ್ತಿಗನು ಸಂದಾಯ ಮಾಡಬೇಕಾದ ತೆರಿಗೆಯನ್ನು, ವೇತನದಾರನಾಗಿರುವ ವೃತ್ತಿಯನ್ನು ಹೊರತುಪಡಿಸಿ, ಅಂಥ ವೈದ್ಯ ವೃತ್ತಿಗನು ತನ್ನ ವೃತ್ತಿಯ ಆಧಾರದ ಮೇಲೆ ನಿರ್ವಹಿಸುವಂಥ ನರ್ಸಿಂಗ್ ಹೋಮ್, ಆಸ್ಪತ್ರೆ, ರೋಗಗಳನ್ನು ಲಕ್ಷಣ ಪತ್ತೆಮಾಡುವ ಪರೀಕ್ಷಾ ಪ್ರಯೋಗಾಲಯ ಅಥವಾ ಕ್ಷ-ಕಿರಣ ಕ್ಲಿನಿಕ್ ಗಳನ್ನು ಒಡೆತನ ಹೊಂದಿರುವ ಅಥವಾ ನಿರ್ವಹಿಸುವ ವ್ಯಕ್ತಿಯು ಅಂಥ ವೈದ್ಯ ವೃತ್ತಿಗನಿಗೆ ಯಾವುದೇ ಮೊತ್ತವನ್ನು ಸಂದಾಯ ಮಾಡುವ ಮೊದಲು ತೆರಿಗೆ ಕಟಾವಣೆಗೊಳಿಸತಕ್ಕದ್ದು ಮತ್ತು ಅಂಥ ವೈದ್ಯ ವೃತ್ತಿಗನಿಗೆ ಯಾವುದೇ ಮೊತ್ತವನ್ನು ಸಂದಾಯ ಮಾಡುವಾಗ ತೆರಿಗೆಯನ್ನು ಕಟಾವಣೆಗೊಳಿಸಿರಲಿ ಅಥವಾ ಇಲ್ಲದಿರಲಿ ಅಂಥ ಎಲ್ಲಾ ವೈದ್ಯ ವೃತ್ತಿಗರ ಪರವಾಗಿ ತೆರಿಗೆಯನ್ನು ಸಂದಾಯ ಮಾಡಲು ಹೊಣೆಗಾರನಾಗಿರತಕ್ಕದ್ದು;

ಪರಂತು ಆ ವರ್ಷಕ್ಕೆ ತಾನೇ ನೇರವಾಗಿ ವಿವರಪಟ್ಟಿಯನ್ನು ಸಲ್ಲಿಸಿದ ದಾಖಲೆಯ ಪ್ರತಿಯನ್ನು ಹಾಜರುಪಡಿಸುವಂಥ ಯಾರೇ ನೋಂದಾಯಿತ ವ್ಯಕ್ತಿ ಅಥವಾ ನೋಂದಾಯಿಸಲ್ಪಡಲು ಹೊಣೆಗಾರನಾಗಿರುವ ವ್ಯಕ್ತಿಯಿಂದ ಈ ಉಪ-ಪ್ರಕರಣದ ಅಡಿಯಲ್ಲಿ ಯಾವುದೇ ವರ್ಷಕ್ಕಾಗಿ ಯಾವುದೇ ಕಟಾವಣೆಯನ್ನು ಮಾಡತಕ್ಕದ್ದಲ್ಲ.

(4) (ಎ) (3)ನೇ ಉಪ-ಪ್ರಕರಣದ (ಎ) ಖಂಡದ ಮೇರೆಗಿನ ಯಾವುದೇ ವರ್ಷದಲ್ಲಿ ಸಂದಾಯ ಮಾಡಬೇಕಾದ ಕಮೀಷನ್ ಅಥವಾ ಇತರ ಸಂಭಾವನೆಯು ಮೂವತ್ತಾರು ಸಾವಿರ ರೂಪಾಯಿಗಳನ್ನು ಮೀರುವಂಥ ತಿಂಗಳಿನಲ್ಲಿ ತೆರಿಗೆ ಕಟಾವಣೆಯನ್ನು ಮಾಡತಕ್ಕದ್ದು.

(ಬಿ) ಉಪ-ಪ್ರಕರಣ 3ರ (ಬಿ) ಖಂಡದ ಮೇರೆಗಿನ ಕಟಾವಣೆಯನ್ನು, ಒಬ್ಬ ವ್ಯಕ್ತಿಗೆ ಸಂದಾಯ ಮಾಡಬೇಕಾದ ಮೊಬಲಗು ಮೂರು ಸಾವಿರ ರೂಪಾಯಿಗಳನ್ನು ಮೀರುವಂಥ ಪ್ರತಿ ತಿಂಗಳಿನಲ್ಲಿ ಮಾಡತಕ್ಕದ್ದು.

(ಸಿ) ಉಪ-ಪ್ರಕರಣ (3)ರ (ಸಿ) ಯಿಂದ (ಇ) ವರೆಗಿನ ಖಂಡಗಳ ಅಡಿಯಲ್ಲಿ ಮಾಡುವ ಕಟಾವಣೆಯನ್ನು, ಸದರಿ ವ್ಯಕ್ತಿಗಳಿಗೆ ಆ ವರ್ಷದಲ್ಲಿ ಮೊದಲ ಬಾರಿಗೆ ಯಾವುದೇ ಮೊತ್ತವನ್ನು ಪಾವತಿಸಿದಂಥ ತಿಂಗಳಿನಲ್ಲಿ ಮಾಡತಕ್ಕದ್ದು.

(5) ಉಪ-ಪ್ರಕರಣ (3)ರ ಅಡಿಯಲ್ಲಿ ಕಟಾವಣೆಗೊಳಿಸುವ ವ್ಯಕ್ತಿಯು ಹಿಂದಿನ ತಿಂಗಳ ಅವಧಿಯಲ್ಲಿ ಕಟಾವಣೆಗೊಳಿಸಲಾದ ತೆರಿಗೆಯ ವಿವರಗಳನ್ನು ಒಳಗೊಂಡಿರುವ, ನಿಯಮಿಸಲಾದ ನಮೂನೆಯಲ್ಲಿರುವ ವಿವರಣಪಟ್ಟಿಯನ್ನು ಅಧಿಕಾರವ್ಯಾಪ್ತಿಯ ಕರನಿರ್ಧರಣಾ ಪ್ರಾಧಿಕಾರಕ್ಕೆ ಪ್ರತಿ ತಿಂಗಳು ಕಳುಹಿಸತಕ್ಕದ್ದು ಮತ್ತು ಅಂಥ ಕಡಿತವನ್ನು ಮಾಡಿರುವಂಥ, ಹಿಂದಿನ ತಿಂಗಳು ಮುಕ್ತಾಯಗೊಂಡ ನಂತರದ ಇಪ್ಪತ್ತು ದಿನಗಳೊಳಗಾಗಿ ಹಾಗೆ ಕಟಾವಣೆಗೊಳಿಸಿದ ತೆರಿಗೆಯ ಪೂರ್ಣ ಮೊತ್ತವನ್ನು ಸಂದಾಯ ಮಾಡತಕ್ಕದ್ದು ಮತ್ತು ಈ ಅಧಿನಿಯಮದ ಅಡಿಯಲ್ಲಿ 13ನೇ ಪ್ರಕರಣದ ಉದ್ದೇಶಗಳಿಗಾಗಿ ಹಾಗೆ ಸಂದಾಯ ಮಾಡಬೇಕಾದ ಮೊತ್ತವನ್ನು ಬಾಕಿ ಇರುವ ಮೊತ್ತ ಎಂದು ಭಾವಿಸತಕ್ಕದ್ದು.

[1][ಮತ್ತು ಪರಂತು, ಆಯುಕ್ತರು ಅಧಿಸೂಚಿಸಬಹುದಾದಂತೆ, ಹೆಸರು ದಾಖಲಾದ ವ್ಯಕ್ತಿಗಳ ನಿರ್ದಿಷ್ಟ ವರ್ಗವು, ನಿಯಮಿಸಬಹುದಾದ ನಮೂನೆಯಲ್ಲಿ, ವಿದ್ಯುನ್ಮಾನ ವಿಧಾನದಲ್ಲಿ ಅಂತರ್ಜಾಲದ ಮೂಲಕ ವಿವರಪಟ್ಟಿಯನ್ನು ಸಲ್ಲಿಸತಕ್ಕದ್ದು, ಹಾಗೆಯೇ ವಿವರಪಟ್ಟಿಯ ಆಧಾರದ ಮೇಲೆ ಕಡಿತಗೊಳಿಸಿದ ತೆರಿಗೆಯ ಮೊತ್ತವನ್ನು, ಸದರಿ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಲಾದ ರೀತಿಯಲ್ಲಿ, ವಿದ್ಯುನ್ಮಾನ ವಿಧಾನದಲ್ಲಿ ಅಂತರ್ಜಾಲದ ಮೂಲಕ ಜಮೆ ಮಾಡತಕ್ಕದ್ದು.][1]

1. 2010ರ ಅಧಿನಿಯಮ ಸಂಖ್ಯೆ 5ರ ಮೂಲಕ ದಿನಾಂಕ:01.04.2010 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(6) ಉಪ-ಪ್ರಕರಣ (5)ರ ಅಡಿಯಲ್ಲಿ ನಿರ್ದಿಷ್ಟಪಡಿಸಲಾದ ಅವಧಿಯ ನಂತರ, ಹತ್ತು ದಿನಗಳನ್ನು ಮೀರಿ, ಕಟಾವಣೆಗೊಳಿಸಲಾದ ತೆರಿಗೆಯನ್ನು ಸಂದಾಯ ಮಾಡುವಲ್ಲಿ ಲೋಪವೆಸಗಿದರೆ, ಅಂಥ ವ್ಯಕ್ತಿಯು ಯಾವ ಅವಧಿಯ ತೆರಿಗೆಯು ಸಂದಾಯವಾಗದೇ ಉಳಿದಿದೆಯೋ ಆ ಅವಧಿಯ ಪ್ರತಿ ತಿಂಗಳಿಗೆ ಅಥವಾ ಅದರ ಭಾಗಕ್ಕಾಗಿ ಕೊಡಬೇಕಾಗಿರುವ ತೆರಿಗೆಯ ಮೊಬಲಗಿನ [1][ಶೇಕಡ ಒಂದೂವರೆಯಷ್ಟು][1] ಬಡ್ಡಿಯನ್ನು ಸಂದಾಯ ಮಾಡಲು ಹೊಣೆಗಾರನಾಗಿರತಕ್ಕದ್ದು.

1. 2023ರ ಅಧಿನಿಯಮ ಸಂಖ್ಯೆ 14ರ ಮೂಲಕ ದಿನಾಂಕ: 01.04.2023 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(7) ಉಪ-ಪ್ರಕರಣ (3)ರ ಅಡಿಯಲ್ಲಿ ಕಟಾವಣೆಗೊಳಿಸುವ ವ್ಯಕ್ತಿಯು ನಿಯಮಿಸಬಹುದಾದಂಥ ವಿವರಗಳನ್ನು ಒಳಗೊಂಡಿರುವ ಅಧಿಕಾರ ವ್ಯಾಪ್ತಿಯ ಕರನಿರ್ಧರಣಾ ಪ್ರಾಧಿಕಾರದಿಂದ ಪಡೆಯಲಾದ ಒಂದು ಪ್ರಮಾಣ ಪತ್ರವನ್ನು ಅಂಥ ಕಟಾವಣೆಯನ್ನು ಮಾಡಲಾಗಿದೆಯೋ ಆ ದಾಖಲಾದ ವ್ಯಕ್ತಿ ಅಥವಾ ದಾಖಲಾಗಲು ಹೊಣೆಗಾರನಾದ ವ್ಯಕ್ತಿಗೆ ನೀಡತಕ್ಕದ್ದು.

(8) ಉಪ-ಪ್ರಕರಣ (5)ಕ್ಕೆ ಅನುಸಾರವಾಗಿ ಕಟಾವಣೆಗೊಳಿಸುವ ರೂಪದ ಮೂಲಕ ಮಾಡಲಾದ ಸಂದಾಯವು ದಾಖಲಾದ ವ್ಯಕ್ತಿ ಅಥವಾ ದಾಖಲಾಗಲು ಹೊಣೆಗಾರನಾದ ವ್ಯಕ್ತಿಯಿಂದ ಈ ಅಧಿನಿಯಮದ ಅಡಿಯಲ್ಲಿ ಬಾಕಿಯಿರುವ ತೆರಿಗೆಯನ್ನು ವಸೂಲು ಮಾಡುವ ರೀತಿಗೆ ಬಾಧಕವಾಗತಕ್ಕದ್ದಲ್ಲ ಮತ್ತು ಆತನು ಸಂದಾಯ ಮಾಡಬೇಕಾದ ತೆರಿಗೆಯನ್ನು (5)ನೇ ಉಪ-ಪ್ರಕರಣದ ಮೇರೆಗೆ ಈಗಾಗಲೇ ಕಟಾವಣೆಗೊಳಿಸಲಾಗಿದೆ ಮತ್ತು ರವಾನಿಸಲಾಗಿದೆ ಎಂಬುದನ್ನು ರುಜುವಾತುಪಡಿಸುವ ಭಾರವು ಅಂಥ ವ್ಯಕ್ತಿಯ ಮೇಲಿರತಕ್ಕದ್ದು.][1]

1. 2007ರ ಅಧಿನಿಯಮವು ಸಂಖ್ಯೆ 5ರ ಮೂಲಕ ದಿನಾಂಕ: 01.04.2017 ರಿಂದ ಜಾರಿಗೆ ಬರುವಂತೆ (3) ರಿಂದ (8) ರ ವರೆಗಿನ ಉಪ-ಪ್ರಕರಣಗಳನ್ನು ಪ್ರತಿಯೋಜಿಸಲಾಗಿದೆ.

**11. ತೆರಿಗೆಯನ್ನು ಕಟಾವಣೆ ಮಾಡಲು ಅಥವಾ ಸಂದಾಯ ಮಾಡಲು ತಪ್ಪಿದುದರ ಪರಿಣಾಮಗಳು.-** (1) ನಿಯೋಜಕನು, (ಸರ್ಕಾರದ ಅಧಿಕಾರಿಯಾಗಿರದ) ವೇತನ ಅಥವಾ ಮಜೂರಿಯ ಸಂದಾಯದ ಕಾಲಕ್ಕೆ ತೆರಿಗೆಯನ್ನು ಕಟಾವಣೆ ಮಾಡಿಕೊಳ್ಳದಿದ್ದರೆ ಅಥವಾ ಮುರಿದುಕೊಂಡ ಆನಂತರ ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಅಗತ್ಯಪಡಿಸಿದಂತೆ ತೆರಿಗೆಯನ್ನು ಸಂದಾಯ ಮಾಡಲು ತಪ್ಪಿದರೆ, ಅವನು ಗುರಿಯಾಗಬಹುದಾದ ಇತರ ಯಾವುದೇ ಪರಿಣಾಮಗಳಿಗೆ ಮತ್ತು ಹೊಣೆಗಳಿಗೆ ಬಾಧಕವಾಗದಂತೆ, ಆ ತೆರಿಗೆಯ ಸಂಬಂಧದಲ್ಲಿ, ಅವನನ್ನು ತೆರಿಗೆ ಪಾವತಿಸಲು ತಪ್ಪಿದವನೆಂದು ಭಾವಿಸತಕ್ಕದು.

(2) (1)ನೇ ಉಪಪ್ರಕರಣದ ಉಪಬಂಧಗಳಿಗೆ ಬಾದಕವಾಗದಂತೆ (1)ನೇ ಉಪ ಪ್ರಕರಣದಲ್ಲಿ ಉಲ್ಲೇಖಿತವಾದ ನಿಯೋಜಕನು ವೇತನದ ಅಥವಾ ಮಜೂರಿಯ ಸಂದಾಯದ ಸಮಯದಲ್ಲಿ ತೆರಿಗೆಯನ್ನು ಕಟಾವಣೆ ಮಾಡಿಕೊಳ್ಳದಿದ್ದರೆ, ಅಥವಾ ಕಟಾವಣೆ ಮಾಡಿಕೊಂಡ ಅನಂತರ ಈ ಅಧಿನಿಯಮದ ಮೂಲಕ ಅಥವಾ ಮೇರಗೆ ಅಗತ್ಯಪಡಿಸಲಾದಂತೆ ತೆರಿಗೆಯನ್ನು ಸಂದಾಯ ಮಾಡಲು ತಪ್ಪಿದರೆ, ಯಾವ ಅವಧಿಯ ತೆರಿಗೆಯು ಸಂದಾಯವಾಗದೆ ಉಳಿದಿದೆಯೋ ಆ ಅವಧಿಯ ಪ್ರತಿ ತಿಂಗಳಿಗೆ ಅಥವಾ ಅದರ ಭಾಗಕ್ಕೆ ಕೊಡಬೇಕಾಗಿರುವ ತೆರಿಗೆಯ ಮೊಬಲಗಿನ ಮೇಲೆ [2][[1][ಶೇಕಡಾ ಒಂದೂವರೆಯಷ್ಟು][1]][2] ಸರಳ ಬಡ್ಡಿಯನ್ನು ಸಂದಾಯ ಮಾಡಲು ಅವನು ಹೊಣೆಗಾರನಾಗಿರತಕ್ಕದು.

1. 2005ರ ಅಧಿನಿಯಮ ಸಂಖ್ಯೆ 11ರ ಮೂಲಕ ದಿನಾಂಕ: 01.04.2005 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 2023ರ ಅಧಿನಿಯಮ ಸಂಖ್ಯೆ 14ರ ಮೂಲಕ ದಿನಾಂಕ: 01.04.2023 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(3) ದಾಖಲಾದ ವ್ಯಕ್ತಿಯು [1][ಅಥವಾ ದಾಖಲಾಗಲು ಹೊಣೆಗಾರನಾದ ವ್ಯಕ್ತಿಯು][1] ಅಥವಾ ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಅಗತ್ಯಪಡಿಸಿದಂತೆ ತೆರಿಗೆಯನ್ನು ಸಂದಾಯ ಮಾಡಲು ತಪ್ಪಿದರೆ, (2)ನೇ ಉಪಪ್ರಕರಣದಲ್ಲಿ ನಮೂದಿಸಲಾಗಿರುವ ದರದಲ್ಲಿ ಮತ್ತು ರೀತಿಯಲ್ಲಿ ಸರಳಬಡ್ಡಿಯನ್ನು ಸಂದಾಯ ಮಾಡಲು ಅವನು ಹೊಣೆಗಾರನಾಗಿರತಕ್ಕದು.

1. 2005ರ ಅಧಿನಿಯಮ ಸಂಖ್ಯೆ 11ರ ಮೂಲಕ ದಿನಾಂಕ: 01.04.2005 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][(4) ಉಪ ಪ್ರಕರಣ (2) ಮತ್ತು (3) ರಲ್ಲಿ ಏನೇ ಇದ್ದರೂ,-

(i) ತಡವಾಗಿ ಸಂದಾಯ ಮಾಡಿದ ತೆರಿಗೆಗೆ ಸಂಬಂಧಿಸಿದಂತೆ 1987 ರ ಮಾರ್ಚ್ 31 ರ ವರೆಗೆ ಸಂದಾಯ ಮಾಡಬೇಕಾದ ಬಡ್ಡಿಯ ಬಾಕಿಯನ್ನು ಸಂಗ್ರಹಿಸತಕ್ಕದ್ದಲ್ಲ.

(ii) 1987ರ 31ನೇ ಮಾರ್ಚ್ 06 ರಂದು ಇದ್ದಂತೆ, ಬಾಕಿ ಕೊಡಬೇಕಾದ ತೆರಿಗೆಗೆ ಸಂಬಂಧಿಸಿದಂತೆ, ಸಂದಾಯವಾಗಬೇಕಾದ ಯಾವುದೇ ಬಡ್ಡಿಯನ್ನು ಸಂಗ್ರಹಿಸತಕ್ಕದ್ದಲ್ಲ, ಪರಂತು , ಅಂಥ ತೆರಿಗೆಯು 1989 ರ 30 ನೇ ಜೂನ್ ರಂದು ಅಥವಾ ಅದಕ್ಕೂ ಮುಂಚೆ ಪೂರ್ಣವಾಗಿ ಸಂದಾಯವಾಗಿರಬೇಕು. ][1]

1. 1989ರ ಅಧಿನಿಯಮ ಸಂಖ್ಯೆ 15ರ ಮೂಲಕ ದಿನಾಂಕ: 01.04.1989 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**12. ತೆರಿಗೆಯನ್ನು ಸಂದಾಯ ಮಾಡದಿರುವುದಕ್ಕೆ ದಂಡ.-** ದಾಖಲಾಗಿರುವ ವ್ಯಕ್ತಿಯು ಅಥವಾ ನೋಂದಾಯಿತನಾಗಿರುವ ನಿಯೋಜಕನು, ತಗಾದೆ ನೋಟೀಸಿನಲ್ಲಿ ನಿರ್ದಿಷ್ಟಪಡಿಸಲಾದ ಅಗತ್ಯ ಕಾಲದೊಳಗೆ ಅಥವಾ ನಿರ್ದಿಷ್ಟಪಡಿಸಿದ ದಿನಾಂಕದೊಳಗೆ ಯಾವುದೇ ತೆರಿಗೆ ಮೊಬಲಗನ್ನು ಸಂದಾಯ ಮಾಡಲು [1][XXX][1] ತೆರಿಗೆ ನಿರ್ಧರಣ ಪ್ರಾಧಿಕಾರವು, ಮನವಿಯನ್ನು ಸಲ್ಲಿಸಲು ಅವನಿಗೆ ಯುಕ್ತ ಅವಕಾಶವನ್ನು ಕೊಟ್ಟ ಅನಂತರ ಕೊಡಬೇಕಾಗಿರು ತೆರಿಗೆ ಮೊಬಲಗಿನ ಮೇಲೆ [2][ಶೇಕಡಾ ಹತ್ತರಷ್ಟಕ್ಕೆ ಸಮನಾದ][2] ದಂಡವನ್ನು ಅವನಿಗೆ ವಿಧಿಸತಕ್ಕದು. ಈ ದಂಡವು 11ನೇ ಪ್ರಕರಣದ (2)ನೇ ಅಥವಾ (3)ನೇ ಉಪಪ್ರಕರಣದ ಮೇರೆಗೆ ಸಂದಾಯ ಮಾಡಬೇಕಾದ ಬಡ್ಡಿಯ ಜೊತೆಗೆ ಇರತಕ್ಕದು.

1. 2023ರ ಅಧಿನಿಯಮ 14ರ ಮೂಲಕ 01.04.2023 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.
2. 2023ರ ಅಧಿನಿಯಮ 14ರ ಮೂಲಕ 01.04.2023 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][**13. ತೆರಿಗೆ ಮತ್ತು ಇತರ ಮೊಬಲಗುಗಳ ವಸೂಲಿ ಮತ್ತು ತೆರಿಗೆ ವಸೂಲಿಗಾಗಿ ಕಾಲಪರಿಮಿತಿಯ ಅವಧಿ:** (1) ಸಂಗ್ರಹಣೆಯ ಇತರ ಯಾವುದೇ ವಿಧಾನಕ್ಕೆ ಭಾದಕವಾಗದಂತೆ, ನಿಯೋಜಕ ಅಥವಾ ಇತರ ಯಾರೇ ವ್ಯಕ್ತಿಯಿಂದ ಈ ಅಧಿನಿಯಮದ ಮೇರೆಗೆ, ಬಾಕಿಯಿರುವ ಅಥವಾ ನಿರ್ಧರಿಸಿದ ಯಾವುದೇ ತೆರಿಗೆ ಅಥವಾ ಬರಬೇಕಾದ ಬಾಕಿ ಇತರ ಯಾವುದೇ ಮೊಬಲಗನ್ನು,-

(ಎ) ಭೂಕಂದಾಯದ ಬಾಕಿಯಿದ್ದರೆ ಹೇಗೋ ಹಾಗೆ; ಅಥವಾ

(ಬಿ) ನಿಯಮಿಸಲಾದ ರೀತಿಯಲ್ಲಿ ನಿಯಮಿಸಲಾದ ಪ್ರಾಧಿಕಾರ ಅಥವಾ ನಿಯಮಿಸಲಾದ ಅಧಿಕಾರಿಯ ಮೂಲಕ ಅಂಥ ನಿಯೋಜಕ ಅಥವಾ ಇತರ ಯಾರೇ ವ್ಯಕ್ತಿಯ ಯಾವುದೇ ಸ್ವತ್ತನ್ನು ಜಪ್ತಿಮಾಡುವುದು ಮತ್ತು ಮಾರಾಟ ಮಾಡುವುದರ ಮೂಲಕ ವಸೂಲು ಮಾಡತಕ್ಕದ್ದು ಅಥವಾ ಜಪ್ತಿ ಮಾಡದೇ ಮಾರಾಟ ಮಾಡುವ ಮೂಲಕ ಮತ್ತು ಅಂಥ ಮಾರಾಟದ ಸಂಬಂಧದಲ್ಲಿ ನೀಡಲಾದ ಯಾವುದೇ ನಿಯಮಿಸಲಾದ ಪ್ರಮಾಣ ಪತ್ರವನ್ನು ಸಿವಿಲ್ ನ್ಯಾಯಾಲಯದ ಡಿಕ್ರಿ ಎಂದು ಭಾವಿಸತಕ್ಕದ್ದು ಮತ್ತು ಅಂಥ ನ್ಯಾಯಾಲಯದ ಡಿಕ್ರಿ ಎಂಬಂತೆ ಅದೇ ರೀತಿಯಲ್ಲಿ ಜಾರಿಗೊಳಿಸತಕ್ಕದ್ದು; ಅಥವಾ

(ಸಿ) ಯಾರೇ ಮ್ಯಾಜಿಸ್ಟ್ರೇಟರಿಗೆ ಅರ್ಜಿ ಸಲ್ಲಿಸಿದ ಮೇಲೆ, ನೇರವಾಗಿ ಅವರೇ ವಿಧಿಸಿದ ಜುಲ್ಮಾನೆಯಾಗಿದ್ದರೆ ಹೇಗೋ ಹಾಗೆ, ಅಂಥ ಮ್ಯಾಜಿಸ್ಟ್ರೇಟ್ ರವರ ಮೂಲಕ ವಸೂಲು ಮಾಡತಕ್ಕದ್ದು;

(2) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಇದ್ದರೂ, ಸಂಬಂಧಪಟ್ಟ ವರ್ಷದ ಕೊನೆಯಿಂದ ಅಥವಾ ಸಂಬಂಧಪಟ್ಟ ಕರನಿರ್ಧರಣೆಯ ದಿನಾಂಕದಿಂದ ಐದು ವರ್ಷಗಳು ಮುಕ್ತಾಯಗೊಂಡ ನಂತರ ಈ ಅಧಿನಿಯಮದ ಅಡಿಯಲ್ಲಿ ಯಾವುದೇ ಮೊಬಲಗನ್ನು ವಸೂಲು ಮಾಡುವುದಕ್ಕಾಗಿ ಯಾವುದೇ ವ್ಯವಹರಣೆಗಳನ್ನು ಪ್ರಾರಂಭಿಸತಕ್ಕದ್ದಲ್ಲ:

ಪರಂತು ಪರಿಷ್ಕರಣೆಗಾಗಿ ಯಾವುದೇ ಅಪೀಲು ಅಥವಾ ಅರ್ಜಿಯನ್ನು ಸಲ್ಲಿಸಿದಾಗ, ಬಾಕಿ ಕೊಡಬೇಕಾದ ಮೊಬಲಗನ್ನು ಅಂತಿಮವಾಗಿ ನಿರ್ಧರಿಸಿದ ದಿನಾಂಕದಿಂದ ಕಾಲ ಪರಿಮಿತಿಯ ಅವಧಿಯು ಪ್ರಾರಂಭವಾಗತಕ್ಕದ್ದು.

(3) ಉಪ-ಪ್ರಕರಣ (2)ರ ಅಡಿಯಲ್ಲಿ ನಿರ್ದಿಷ್ಟಪಡಿಸಲಾದ ಕಾಲಪರಿಮಿತಿಯ ಅವಧಿಯು (1)ನೇ ಉಪ-ಪ್ರಕರಣದ ಯಾವುದೇ ಖಂಡದ ಅಡಿಯಲ್ಲಿ ಪ್ರಾರಂಭಿಸಲಾದ ವಸೂಲಿ ವ್ಯವಹರಣೆಗಳು ನಡೆಯುತ್ತಿರುವಾಗ ಅಥವಾ 20ನೇ ಪ್ರಕರಣದ ಅಡಿಯಲ್ಲಿ, ಇತರ ಯಾವುದೇ ಹೊಸ ವ್ಯವಹರಣೆಗಳನ್ನು ಪ್ರಾರಂಭಿಸಿದಾಗ ಅಥವಾ ನಿಯೋಜಕನು ತೆರಿಗೆಯ ರೂಪದಲ್ಲಿ ಅಥವಾ ತೆರಿಗೆಯ ರೂಪದಲ್ಲಿ ಮಾಡಲಾಗಿದೆಯೆಂದು ತಾತ್ಪರ್ಯವಾಗುವ ಯಾವುದೇ ಮೊಬಲಗನ್ನು ಕಟಾವಣೆಗೊಳಿಸಿರುವಂಥ ಯಾವುದೇ ಪ್ರಕರಣಕ್ಕೆ ಅನ್ವಯವಾಗತಕ್ಕದ್ದಲ್ಲ.][1]

1. 2006ರ ಅಧಿನಿಯಮವು ಸಂಖ್ಯೆ 5ರ ಮೂಲಕ ದಿನಾಂಕ: 01.04.2006 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**14. ಅಧಿನಿಯಮವನ್ನು ಕಾರ್ಯಗತಗೊಳಿಸುವ ಪ್ರಾಧಿಕಾರಿಗಳು.-** ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ, ರಾಜ್ಯ ಸರ್ಕಾರವು-

(i) ಇಡೀ ಕರ್ನಾಟಕ ರಾಜ್ಯಕ್ಕೆ ವೃತ್ತಿ ತೆರಿಗೆಯ ಕಮಿಷನರನಾಗಿ ಒಬ್ಬ ಅಧಿಕಾರಿಯನ್ನು;

(ii) ರಾಜ್ಯ ಸರ್ಕಾರವು ಅವಶ್ಯವೆಂದು ಆಲೋಚಿಸಬಹುದಾದಂಥ, ವೃತ್ತಿ ತೆರಿಗೆಯ [1][ಹೆಚ್ಚುವರಿ ಕಮಿಷನರು][1]ಗಳಾಗಿ ಒಬ್ಬ ಅಥವಾ ಹೆಚ್ಚು ಅಧಿಕಾರಿಗಳನ್ನು;

1. 1993ರ ಅಧಿನಿಯಮ ಸಂಖ್ಯೆ 5ರ ಮೂಲಕ ದಿನಾಂಕ: 09.11.1992 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(iii) ರಾಜ್ಯ ಸರ್ಕಾರವು ಅವಶ್ಯವೆಂದು ಆಲೋಚಿಸಬಹುದಾದಷ್ಟು ಸಂಖ್ಯೆಯಲ್ಲಿ ವೃತ್ತಿ ತೆರಿಗೆಯ [1][ಜಂಟಿ ಕಮೀಷನರ್][1] [2][ವೃತ್ತಿ ತೆರಿಗೆಯ ಡೆಪ್ಯೂಟಿ ಕಮೀಷನರ್][2] [1][ಸಹಾಯಕ ವೃತ್ತಿ ತೆರಿಗೆಯ ಕಮೀಷನರ್][1] ಮತ್ತು [1][ವೃತ್ತಿ ತೆರಿಗೆಯ ಅಧಿಕಾರಿಗಳು][1]

ಮತ್ತು ಇತರ [3][ವೃತ್ತಿ ತೆರಿಗೆಯ ಅಧಿಕಾರಿಗಳು, ಡೆಪ್ಯೂಟಿ ಕಮೀಷನರ್][3] ಮತ್ತು ವ್ಯಕ್ತಿಗಳನ್ನು (ಅಂಥ ಪದನಾಮಗಳೊಂದಿಗೆ) ನೇಮಿಸಬಹುದು.

1. 1993ರ ಅಧಿನಿಯಮ ಸಂಖ್ಯೆ 5ರ ಮೂಲಕ ದಿನಾಂಕ: 09.11.1992 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 1985ರ ಅಧಿನಿಯಮ ಸಂಖ್ಯೆ 29ರ ಮೂಲಕ ದಿನಾಂಕ: 01.08.1985 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ ಮತ್ತು 1993ರ ಅಧಿನಿಯಮ ಸಂಖ್ಯೆ 5ರ ಮೂಲಕ ದಿನಾಂಕ: 09.11.1992 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
3. 2004ರ ಅಧಿನಿಯಮ ಸಂಖ್ಯೆ 26ರ ಮೂಲಕ ದಿನಾಂಕ: 01.08.2004 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) (i) ಈ ಅಧಿನಿಯಮವನ್ನು ಕಾರ್ಯಗತಗೊಳಿಸಲು ನಿಯೋಜಿತರಾದ ಎಲ್ಲಾ ಅಧಿಕಾರಿಗಳು ಮತ್ತು ವ್ಯಕ್ತಿಗಳು ರಾಜ್ಯ ಸರ್ಕಾರದ ಮತ್ತು ಕಮಿಷನರ್‌ನ ಸಾಮಾನ್ಯ ಮೇಲ್ವಿಚಾರಣೆಗೆ ಮತ್ತು ನಿಯಂತ್ರಣಕ್ಕೆ ಒಳಪಟ್ಟಿರತಕ್ಕದು.

(ii) ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ತಮಗೆ ಪ್ರದತ್ತವಾದ ತಮ್ಮ ಪ್ರಕಾರ್ಯಗಳನ್ನು ರಾಜ್ಯ ಸರ್ಕಾರವು ನಿರ್ದೇಶಿಸಬಹುದಾದಂಥ ಪ್ರದೇಶಗಳಲ್ಲಿ [1][ಜಂಟಿ ಕಮಿಷನರರು][1] ನೆರವೇರಿಸತಕ್ಕದು ಮತ್ತು ತಮ್ಮ ಅಧಿಕಾರಗಳನ್ನು ಚಲಾಯಿಸತಕ್ಕದು;

1. 1993ರ ಅಧಿನಿಯಮ ಸಂಖ್ಯೆ 5ರ ಮೂಲಕ ದಿನಾಂಕ: 09.11.1992 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(iii) [1][ವೃತ್ತಿ ತೆರಿಗೆ][1] [2][ಅಧಿಕಾರಿಗಳು ಸಹಾಯಕ ವೃತ್ತಿ ತೆರಿಗೆ ಕಮೀಷನರ್ ಮತ್ತು [1][ವೃತ್ತಿ ತೆರಿಗೆಯ ಡೆಪ್ಯೂಟಿ][2] ಕಮೀಷನರ್‌ಗಳು][1] ಕಮೀಷನರ್ ನಿರ್ದೇಶಿಸಬಹುದಾದಂಥ ಪ್ರದೇಶದೊಳಗೆ ಅಂಥ ಎಲ್ಲಾ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು ಮತ್ತು ಅಂತ ಅಧಿಕಾರಗಳನ್ನು ಚಲಾಯಿಸತಕ್ಕದ್ದು.

1. 1993ರ ಅಧಿನಿಯಮವು ಸಂಖ್ಯೆ 5ರ ಮೂಲಕ ದಿನಾಂಕ: 09.11.1992 ರಿಂದ ಜಾರಿಗೆಬರುವಂತೆ ಪ್ರತಿಯೋಜಿಸಲಾಗಿದೆ.
2. 2004ರ ಅಧಿನಿಯಮ ಸಂಖ್ಯೆ 26ರ ಮೂಲಕ ದಿನಾಂಕ: 01.08.2004 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(3) ಈ ಅಧಿನಿಯಮದ ಮೇರಗೆ ನೇಮಿತರಾದ ಎಲ್ಲ ಅಧಿಕಾರಿಗಳು ಕಮಿಷನರಿಗೆ ಅಧೀನರಾಗಿರತಕ್ಕದ್ದು.

[1][**14ಎ. ಅಧೀನ ಪ್ರಾಧಿಕಾರಿಗಳಿಗೆ ಸೂಚನೆ.-** (1) ರಾಜ್ಯ ಸರ್ಕಾರ ಮತ್ತು ಕಮೀಷನರ್ ರವರು ಕಾಲಕಾಲಕ್ಕೆ, ಈ ಅಧಿನಿಯಮದ ನಿರ್ವಹಣೆಗಾಗಿ ಸೂಕ್ತವೆಂದು ಭಾವಿಸಬಹುದಾದಂತೆ, ಈ ಅಧಿನಿಯಮವನ್ನು ಕಾರ್ಯಗತಗೊಳಿಸಲು ನಿಯೋಜನೆಗೊಂಡ ಎಲ್ಲಾ ಅಧಿಕಾರಿಗಳು ಮತ್ತು ವ್ಯಕ್ತಿಗಳಿಗೆ ಅಂಥ ಆದೇಶಗಳು, ಸೂಚನೆಗಳು ಮತ್ತು ನಿರ್ದೇಶನಗಳನ್ನು ನೀಡುವುದು ಮತ್ತು ಅಂಥ ಎಲ್ಲಾ ಅಧಿಕಾರಗಳು ಮತ್ತು ವೃತ್ತಿಗಳು ರಾಜ್ಯ ಸರ್ಕಾರ ಮತ್ತು ಕಮೀಷನರ್‌ಗಳ ಅಂಥ ಆದೇಶಗಳು ಸೂಚನೆಗಳು ಮತ್ತು ನಿರ್ದೇಶನಗಳನ್ನು ಪಾಲಿಸತಕ್ಕದ್ದು ಮತ್ತು ಅನುಸರಿಸತಕ್ಕದ್ದು:

ಪರಂತು, ಅಪೀಲು ವಿಚಾರಣಾ ಪ್ರಕಾರ್ಯಗಳನ್ನು ಚಲಾಯಿಸುವಾಗ ಯಾವುದೇ ಅಪೀಲು ವಿಚಾರಣಾ ಪ್ರಾಧಿಕಾರದ ವಿವೇಚನೆಯಲ್ಲಿ ಹಸ್ತಕ್ಷೇಪ ಮಾಡುವ ಉದ್ದೇಶದಿಂದ ಅಂಥ ಯಾವುದೇ ಆದೇಶಗಳು, ಸೂಚನೆಗಳು ಅಥವಾ ನಿರ್ದೇಶನಗಳನ್ನು ನೀಡತಕ್ಕದ್ದಲ್ಲ.

(2) ಹಿಂದೆ ಹೇಳಿದ ಅಧಿಕಾರಗಳ ಸಾಮಾನ್ಯ ಅನ್ವಯಕ್ಕೆ ಭಾದಕವಾಗದಂತೆ, ಕಮೀಷನರ್, ಸ್ವಯಂ ಪ್ರೇರಣೆಯಿಂದ ಅಥವಾ ಈ ಅಧಿನಿಯಮದ ಅಡಿಯಲ್ಲಿ ದಾಖಲಾತಿ ಪ್ರಮಾಣ ಪತ್ರವನ್ನು ಪಡೆದಿರುವಂಥ ವ್ಯಕ್ತಿ ಅಥವಾ ನೋಂದಣಿ ಪ್ರಮಾಣ ಪತ್ರ ಪಡೆದಿರುವಂಥ ನಿಯೋಜಕನು ಸಲ್ಲಿಸಿದ ಅರ್ಜಿಯ ಆಧಾರದ ಮೇಲೆ ತೆರಿಗೆ ನಿರ್ಧರಣೆಗಳು ಮತ್ತು ಕಂದಾಯ ವಸೂಲಿಯ ಕೆಲಸದಲ್ಲಿ ಏಕರೂಪತೆಯನ್ನು ನಿರ್ವಹಿಸುವ ಉದ್ದೇಶಕ್ಕಾಗಿ ಹಾಗೆ ಮಾಡುವುದು ಅವಶ್ಯಕ ಅಥವಾ ವಿಹಿತವೆಂದು ಆತನನ್ನು ಪರಿಗಣಿಸಿದರೆ, ಈ ಅಧಿನಿಯಮದ ಅಡಿಯಲ್ಲಿ ಸಂದಾಯ ಮಾಡಬೇಕಾದ ತೆರಿಗೆ ದರವನ್ನು ಸ್ಪಷ್ಟಪಡಿಸಬಹುದು ಮತ್ತು ಅ ಈ ಅಧಿನಿಯಮವನ್ನೇ ಕಾರ್ಯಗತಗೊಳಿಸಲು

ನಿಯೋಜನೆಗೊಂಡ ಎಲ್ಲಾ ಅಧಿಕಾರಿಗಳು ಮತ್ತು ವ್ಯಕ್ತಿಗಳು ಅಂಥ ಸ್ಪಷ್ಟೀಕರಣವನ್ನು ಪಾಲಿಸತಕ್ಕದ್ದು ಮತ್ತು ಅನುಸರಿಸತಕ್ಕದ್ದು:

ಪರಂತು ನಿಯಮಿಸಬಹುದಾದಂಥ ರೀತಿಯಲ್ಲಿ ಸಂದಾಯ ಮಾಡಿದ ಅಂಥ ಫೀಜನ್ನು ಸಂದಾಯ ಮಾಡಿದ ಬಗೆಗಿನ ರುಜುವಾತನ್ನು ಅದರ ಜೊತೆಗೆ ಲಗತ್ತಿಸಿದದ ಹೊರತು ಅಂಥ ಯಾವುದೇ ಅರ್ಜಿಯನ್ನು ಪುರಸ್ಕರಿಸತಕ್ಕದ್ದಲ್ಲ.

(3) ಈ ಅಧಿನಿಯಮವನ್ನು ಕಾರ್ಯಗತಗೊಳಿಸಲು ನಿಯೋಜನೆಗೊಂಡ ಯಾವುದೇ ಅಧಿಕಾರಿ ಮತ್ತು ವ್ಯಕ್ತಿಯು, ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವಂಥ ಅಧಿಕಾರ ವ್ಯಾಪ್ತಿಯೊಳಗೆ ಜಂಟಿ ಕಮೀಷನರ್‌ನು ಆತನ ಮಾರ್ಗದರ್ಶನಕ್ಕಾಗಿ ಆತನಿಗೆ ನೀಡಬಹುದಾದಂಥ ಆಡಳಿತಾತ್ಮಕ ಸೂಚಕನೆಗಳನ್ನು ಪಾಲಿಸತಕ್ಕದ್ದು ಮತ್ತು ಅನುಸರಿಸತಕ್ಕದ್ದು.][1]

1. 1996ರ ಅಧಿನಿಯಮ ಸಂಖ್ಯೆ 5ರ ಮೂಲಕ ದಿನಾಂಕ: 01.04.1996 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**15. ವಸೂಲಿ ಏಜೆಂಟರ ನೇಮಕಾತಿ.-** (1) ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ, ರಾಜ್ಯ ಸರ್ಕಾರವು, ತನ್ನ ವಿವೇಚನಾನುಸಾರ, ನಿಯಮಿಸಬಹುದಾದಂಥ ವ್ಯಕ್ತಿಗಳಿಂದ ಅಥವಾ ವ್ಯಕ್ತಿಗಳ ವರ್ಗದಿಂದ, ಈ ಅಧಿನಿಯಮದ ಮೇರೆಗೆ ತೆರಿಗೆಯನ್ನು ವಸೂಲು ಮಾಡಲು ಜವಾಬ್ದಾರರಾದ ತನ್ನ ಏಜೆಂಟರನ್ನಾಗಿ (ಇದರಲ್ಲಿ ಇನ್ನು ಮುಂದೆ ವಸೂಲಿ ಏಜೆಂಟನೆಂದು ಕರೆಯಲಾಗುವ) ಯಾವುದೇ ಸರ್ಕಾರಿ ಇಲಾಖೆಯನ್ನು ಅಥವಾ ಅಧಿಕಾರಿಯನ್ನು ಅಥವಾ ನಗರ ಪಾಲಿಕೆ, ಪೌರಸಭೆಯನ್ನು ಅಥವಾ ತಾಲ್ಲೂಕು ಮಂಡಳಿಯನ್ನು ನೇಮಕ ಮಾಡಬಹುದು; ಮತ್ತು ತದನಂತರ ಈ ಅಧಿನಿಯಮದ ಮೇರಗೆ ನಿಯಮಿಸಬಹುದಾದಂತ ರೀತಿಯಲ್ಲಿ ನಿಯಮಿಸಬಹುದಾದಂಥ ಪ್ರಕಾರ್ಯಗಳನ್ನು ಕಾರ್ಯಗತಗೊಳಿಸುವುದು ಮತ್ತು ವಿಧಿಸಲಾದ ಮತ್ತು ವಸೂಲು ಮಾಡಲಾದ ತೆರಿಗೆಯ ಬಗ್ಗೆ ಸಂಪೂರ್ಣವಾದ ಮತ್ತು ಪೂರ್ತಿಯಾದ ಲೆಕ್ಕವನ್ನು ಕಮಿಷನರಿಗೆ, ಆ ಅಧಿಕಾರಿಯು ಅಗತ್ಯಪಡಿಸಬಹುದಾದಂಥ ರೀತಿಯಲ್ಲಿ ಮತ್ತು ಕಾಲದಲ್ಲಿ ಒದಗಿಸುವುದು ಅಂಥ ವಸೂಲಿ ಏಜೆಂಟನ ಕರ್ತವ್ಯವಾಗಿರತಕ್ಕದು.

(2) ವಸೂಲಿ ಏಜೆಂಟನಿಂದ ಈ ಬಗ್ಗೆ ಅಧಿಕೃತವಾದ ಯಾವುನೇ ಅಧಿಕಾರಿಯು ತೆರಿಗೆಯನ್ನು ವಿಧಿಸುವ ಮತ್ತು ವಸೂಲಿ ಮಾಡುವ ಉದ್ದೇಶಗಳಿಗೆ, ತೆರಿಗೆ ನಿರ್ಧರಣಾ ಪ್ರಾಧಿಕಾರಿಯ ಎಲ್ಲಾ ಅಧಿಕಾರಗಳನ್ನು ಮತ್ತು ನಿಯಮಿಸಬಹುದಾದಂಥ ಇತರ ಅಧಿಕಾರಗಳನ್ನು ಹೊಂದಿರತಕ್ಕದು.

(3) (1)ನೇ ಉಪಪ್ರಕರಣದ ಮೇರೆಗೆ ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸಲು ಏಜೆಂಟನಾಗಿ ನೇಮಿತವಾದ ಪೌರನಿಗಮಕ್ಕೆ, ಪೌರಸಭಾ ಪರಿಷತ್ತಿಗೆ ಅಥವಾ ತಾಲ್ಲೂಕು ಮಂಡಲಿಗೆ, ಸಂಬಂಧಪಟ್ಟ ಸ್ಥಳೀಯ ಪ್ರಾಧಿಕಾರದೊಡನೆ ಸಮಾಲೋಚನೆ ನಡೆಸಿ ರಾಜ್ಯ ಸರ್ಕಾರವು ನಿಯಮಿಸಬಹುದಾದಂಥ ವಸೂಲಿ ವೆಚ್ಚಗಳನ್ನು ಸಂದಾಯ ಮಾಡತಕ್ಕದು.

(4) ಅಧಿನಿಯಮದ - ಉದ್ದೇಶಗಳಿಗಾಗಿ, ವಸೂಲಿ ಏಜೆಂಟನು ಇಟ್ಟುಕೊಂಡು ಬಂದ ಅಥವಾ ಇಟ್ಟುಕೊಂಡು ಬರಲು ಅಗತ್ಯಪಡಿಸಲಾದ ಪುಸ್ತಕಗಳನ್ನು, ರಿಜಿಸ್ಟರುಗಳನ್ನು, ಲೆಕ್ಕಪತ್ರಗಳನ್ನು ಅಥವಾ ದಸ್ತಾವೇಜುಗಳನ್ನು ಕಮಿಷನರು ಅಥವಾ ಅವನಿಂದ ಕ್ರಮಬದ್ಧವಾಗಿ ಅಧಿಕೃತನಾದ ಅಧಿಕಾರಿಯು ನೋಡುವುದು ಮತ್ತು ಅವುಗಳನ್ನು ಹಾಜರುಪಡಿಸಲು ಹಾಗೂ ಪರೀಕ್ಷಿಸಲು ಅಗತ್ಯಪಡಿಸುವುದು ಕಾನೂನು ಬದ್ಧವಾಗಿರತಕ್ಕದು ಮತ್ತು ವಸೂಲಿ ಏಜೆಂಟನು, ಹಾಗೆ ಮಾಡಲು ಕೋರಿದಾಗಲೆಲ್ಲ, ಕಮಿಷನರಿಗೆ ಅಥವಾ ಅಧಿಕೃತ ಅಧಿಕಾರಿಗೆ ಪುಸ್ತಕಗಳನ್ನು, ರಿಜಿಸ್ಟರುಗಳನ್ನು, ಲೆಕ್ಕಪತ್ರಗಳನ್ನು ಅಥವಾ ದಸ್ತಾವೇಜುಗಳನ್ನು ಪರಿಶೀಲನೆಗಾಗಿ ಹಾಜರುಪಡಿಸತಕ್ಕದು.

**16. ಅಪೀಲುಗಳು.-** (1) ಸರ್ಕಾರಿ ಅಧಿಕಾರಿಯಲ್ಲದ ಯಾವನೇ ನಿಯೋಜಕ ಅಥವಾ ತೆರಿಗೆ ನಿರ್ಧರಣಾ ಪ್ರಾಧಿಕಾರಿಯ ಆದೇಶದಿಂದ ಬಾಧಿತನಾದ ಯಾವನೇ ವ್ಯಕ್ತಿಯು, ಸಂಬಂಧಪಟ್ಟ ಪ್ರದೇಶದ [1][ಜಂಟಿ ಕಮಿಷನರ][1]ನಿಗೆ ಅಪೀಲನ್ನು ಸಲ್ಲಿಸಬಹುದು:

[2][ಪರಂತುಕ XXX][2]

1. 1993ರ ಅಧಿನಿಯಮ ಸಂಖ್ಯೆ 5ರ ಮೂಲಕ ದಿನಾಂಕ: 01.11.1992 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 2013ರ ಅಧಿನಿಯಮ ಸಂಖ್ಯೆ 27ರ ಮೂಲಕ ದಿನಾಂಕ: 01.04.2013 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

(2) ತಗಾದೆ ನೋಟೀಸು ಅಥವಾ ಯಾವ ಆದೇಶದ ವಿರುದ್ಧವಾಗಿ ಅಪೀಲನ್ನು ಮಾಡಲು ಉದ್ದೇಶಿಸಲಾಗಿದೆಯೋ ಆ ಆದೇಶವು ತಲುಪಿದ ಅರವತ್ತು ದಿನಗಳೊಳಗಾಗಿ ಅಪೀಲನ್ನು ಮಾಡತಕ್ಕದು:

ಪರಂತು, ಅಪೀಲು ಪ್ರಾಧಿಕಾರವು, ತೋರಿಸಿದ ಸಾಕಷ್ಟು ಕಾರಣಕ್ಕಾಗಿ, ಮೇಲೆ ಹೇಳಿದ ಅರವತ್ತು ದಿನಗಳ ಅವಧಿಯ ನಂತರ, ಸಲ್ಲಿಸಲಾದ ಅಪೀಲನ್ನು ಅಂಗೀಕರಿಸಬಹುದು.

(3) ಅಪೀಲಿನಲ್ಲಿ ವಿವಾದಿತವಾಗಿರದ ತೆರಿಗೆಯ ಅಥವಾ ದಂಡ ಅಥವಾ ಬಡ್ಡಿಯ ಮೊಬಲಗನ್ನು ಸಂಪೂರ್ಣವಾಗಿ ಸಂದಾಯ ಮಾಡಿದ ಹೊರತು, ಯಾವ ಅಪೀಲನ್ನು ಪುರಸ್ಕರಿಸತಕ್ಕದಲ್ಲ.

(4) ಅಪೀಲು ನಿಯಮಿಸಲಾದ ನಮೂನೆಯಲ್ಲಿರತಕ್ಕದು ಮತ್ತು ನಿಯಮಿಸಲಾದ ರೀತಿಯಲ್ಲಿ ಅದನ್ನು ಸತ್ಯಾಪನೆ ಮಾಡತಕ್ಕದು.

(5) ಅಪೀಲನ್ನು ವಿಲೆ ಮಾಡುವಲ್ಲಿ ಅಪೀಲು ಪ್ರಾಧಿಕಾರವು, ಅಹವಾಲನ್ನು ಹೇಳಿಕೊಳ್ಳಲು ಅಪೀಲುದಾರನಿಗೆ ಯುಕ್ತ ಅವಕಾಶ ಕೊಟ್ಟ ಅನಂತರ,-

(ಎ) ತೆರಿಗೆ ನಿರ್ಧರಣೆಯ ಅಥವಾ ದಂಡದ ಆದೇಶದ ಸಂದರ್ಭದಲ್ಲಿ,-

(i) ತೆರಿಗೆ ನಿರ್ಧರಣೆಯನ್ನು ಅಥವಾ ದಂಡವನ್ನು ಅಥವಾ ಇವೆರಡನ್ನು ಸ್ಥಿರೀಕರಿಸಬಹುದು, ಕಡಿಮೆ ಮಾಡಬಹುದು, ಹೆಚ್ಚಿಸಬಹುದು, ಅಥವಾ ರದ್ದುಗೊಳಿಸಬಹುದು.

(ii) ತೆರಿಗೆ ನಿರ್ಧರಣೆಯನ್ನು ತಳ್ಳಿಹಾಕಬಹುದು ಮತ್ತು ನಿರ್ದೇಶಿಸಬಹುದಾದಂಥ ಮತ್ತಷ್ಟು ವಿಚಾರಣೆಯನ್ನು ನಡೆಸಿದ ಅನಂತರ, ಹೊಸ ನಿರ್ಧರಣೆಯನ್ನು ಮಾಡುವಂತೆ ನಿರ್ಧರಣಾ ಪ್ರಾಧಿಕಾರಕ್ಕೆ ನಿರ್ದೇಶಿಸಬಹುದು; ಅಥವಾ

(iii) ತಾನು ಸೂಕ್ತವೆಂದು ಆಲೋಚಿಸಬಹದಾದಂಥ ಇತರ ಆದೇಶಗಳನ್ನು ಮಾಡಬಹುದು;

(ಬಿ) ಇತರ ಯಾವುದೇ ಆದೇಶದ ಸಂದರ್ಭದಲ್ಲಿ ಅಂಥ ಆದೇಶವನ್ನು ಸ್ಥಿರೀಕರಿಸಬಹುದು, ರದ್ದುಗೊಳಿಸಬಹುದು ಅಥವಾ ವ್ಯತ್ಯಾಸಗೊಳಿಸಬಹುದು.

(6) ಈ ಪ್ರಕರಣದ ಮೇರಗೆ ಅಪೀಲಿನಲ್ಲಿ ಮಾಡಿದ ಪ್ರತಿಯೊಂದು ಆದೇಶವು [1][8, 17, 18 ಮತ್ತು 18ಎ][1] ಪ್ರಕರಣಗಳ ಉಪಬಂಧಗಳಿಗೊಳಪಟ್ಟು ಅಂತಿಮವಾದುದಾಗಿರತಕ್ಕದು.

1. 1985ರ ಅಧಿನಿಯಮ ಸಂಖ್ಯೆ 1ರ ಮೂಲಕ ದಿನಾಂಕ: 09.01.1985 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**17. ಅಪೀಲು ನ್ಯಾಯಾಧೀಕರಣಕ್ಕೆ ಅಪೀಲು.-** (1) 16ನೇ ಪ್ರಕರಣದ ಮೇರೆಗೆ [1][ಜಂಟಿ ಕಮಿಷನರನು][1] ಮಾಡಿದ ಆದೇಶವನ್ನು ಆಕ್ಷೇಪಿಸುವ ಯಾವನೇ ನಿಯೋಜಕನು ಅಥವಾ ಯಾವನೇ ವ್ಯಕ್ತಿಯು, ತನಗೆ ಆ ಆದೇಶವನ್ನು ತಿಳಿಸಿದ ದಿನಾಂಕದಿಂದ ಅರವತ್ತು ದಿನಗಳೊಳಗೆ ನ್ಯಾಯಾಧೀಕರಣಕ್ಕೆ ಅಪೀಲು ಸಲ್ಲಿಸಬಹುದು.

1. 1993ರ ಅಧಿನಿಯಮ ಸಂಖ್ಯೆ 5ರ ಮೂಲಕ ದಿನಾಂಕ: 9.11.1992 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) ಕರ್ನಾಟಕ ಅಪೀಲು ನ್ಯಾಯಾಧೀಕರಣ ಅಧಿನಿಯಮ 1976ರ (ಕರ್ನಾಟಕ ಅಧಿನಿಯಮ 1976ರ 10) ಉಪಬಂಧಗಳು (1)ನೇ ಉಪಪ್ರಕರಣದ ಮೇರೆಗೆ ನ್ಯಾಯಾಧಿಕರಣಕ್ಕೆ ಸಲ್ಲಿಸಲಾದ ಎಲ್ಲ ಅಪೀಲುಗಳಿಗೆ ಅನ್ವಯವಾಗತಕ್ಕದು.

**18. ಕಮೀಷನರ್, [1][ಹೆಚ್ಚುವರಿ ಕಮೀಷನರ್, ಜಂಟಿ ಕಮೀಷನರ್ ಮತ್ತು ಡೆಪ್ಯೂಟಿ ಕಮೀಷನರ್][1] ರಿಂದ ಪುನರೀಕ್ಷಣೆ.-** [2][(1) ಈ ಅಧಿನಿಯಮದ ಮೇರೆಗಿನ ಯಾವುದೇ ವ್ಯವಹರಣೆಯ ದಾಖಲೆಯನ್ನು ಸ್ವಯಂ ಪ್ರೇರಣೆಯಿಂದ ಡೆಪ್ಯೂಟಿ ಕಮೀಷನರ್ ತರಿಸಿಕೊಳ್ಳಬಹುದು ಮತ್ತು ಪರೀಕ್ಷಿಸಬಹುದು ಮತ್ತು ವೃತ್ತಿ ತೆರಿಗೆ ಅಧಿಕಾರಿಯ ದರ್ಜೆಯಿಂದ ಮೇಲಲ್ಲದ ಯಾರೇ ಅಧಿಕಾರಿಯ, ಅದರಲ್ಲಿ ಮಾಡಿದ ಯಾವುದೇ ಆದೇಶವು ರಾಜಸ್ವದ ಹಿತಾಸಕ್ತಿಗಳಿಗೆ ಬಾಧಕವಾಗುವಷ್ಟರ ಮಟ್ಟಿಗೆ ತಪ್ಪಾಗಿದೆಯೆಂದು ಪರಿಗಣಿಸಿದರೆ, ಆತನು ಅಗತ್ಯವಾದರೆ, ತಾನು ಸೂಕ್ತವೆಂದು ಭಾವಿಸಬಹುದಾಂಥ ಅವಧಿಗಾಗಿ ಅಂಥ ಆದೇಶದ ಜಾರಿಯನ್ನು ತಡೆಹಿಡಿಯಬಹುದು ಮತ್ತು ತೆರಿದಾರನಿಗೆ ಅಹವಾಲನ್ನು ಹೇಳಿಕೊಳ್ಳುವ ಅವಕಾಶವನ್ನು ಕೊಟ್ಟ ನಂತರ ಮತ್ತು ಆತನು ಸೂಕ್ತವೆಂದು ಭಾವಿಸುವಂಥ ವಿಚಾರಣೆಯನ್ನು ನಡೆಸಿ ಅಥವಾ ನಡೆಸುವಂತೆ ಮಾಡಿದ ನಂತರ ಕರನಿರ್ಧರಣೆಯನ್ನು ಹೆಚ್ಚಿಸುವುದು ಅಥವಾ ಮಾರ್ಪಾಟುಗೊಳಿಸುವುದು ಅಥವಾ ಕರನಿರ್ಧರಣೆಯನ್ನು ರದ್ದುಗೊಳಿಸುವುದು ಅಥವಾ ಹೊಸ ಕರನಿರ್ಧರಣೆಯನ್ನು ನಿರ್ದೇಶಿಸುವ ಆದೇಶವನ್ನು ಒಳಗೊಂಡು ಆ ಪ್ರಕರಣ ಸನ್ನಿವೇಶಗಳಲ್ಲಿ ಸಮರ್ಥಿಸುವಂತೆ ಅದರ ಮೇಲೆ ಅಂಥ ಆದೇಶವನ್ನು ಮಾಡಬಹುದು.

1. 1993ರ ಅಧಿನಿಯಮ ಸಂಖ್ಯೆ 11ರ ಮೂಲಕ ದಿನಾಂಕ: 01.04.1993 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
2. 1993ರ ಅಧಿನಿಯಮ ಸಂಖ್ಯೆ 11ರ ಮೂಲಕ ದಿನಾಂಕ: 01.04.1993 ರಿಂದ ಜಾರಿಗೆ ಬರುವಂತೆ ಉಪಪ್ರಕರಣ (1) ರಿಂದ (6)ರ ರವರೆಗೆ ಪ್ರತಿಯೋಜಿಸಲಾಗಿದೆ.

(2) ಈ ಅಧಿನಿಯಮದ ಮೇರೆಗಿನ ಯಾವುದೇ ವ್ಯವಹರಣೆಯ ದಾಖಲೆಯನ್ನು ಸ್ವಯಂ ಪ್ರೇರಣೆಯಿಂದ ಜಂಟಿ ಕಮೀಷನರ್ ತರಿಸಿಕೊಳ್ಳಬಹುದು ಮತ್ತು ಪರೀಕ್ಷಿಸಬಹುದು ಮತ್ತು ವೃತ್ತಿ ತೆರಿಗೆ ಅಧಿಕಾರಿಯ ದರ್ಜೆಯಿಂದ ಮೇಲಲ್ಲದ ಯಾರೇ ಅಧಿಕಾರಿಯ, ಅದರಲ್ಲಿ ಮಾಡಿದ ಯಾವುದೇ ಆದೇಶವು ರಾಜಸ್ವದ ಹಿತಾಸಕ್ತಿಗಳಿಗೆ ಬಾಧಕವಾಗುವಷ್ಟರ ಮಟ್ಟಿಗೆ ತಪ್ಪಾಗಿದೆಯೆಂದು ಪರಿಗಣಿಸಿದರೆ, ಆತನು ಅಗತ್ಯವಾದರೆ, ತಾನು ಸೂಕ್ತವೆಂದು ಭಾವಿಸಬಹುದಾಂಥ ಅವಧಿಗಾಗಿ ಅಂಥ ಆದೇಶದ ಜಾರಿಯನ್ನು ತಡೆಹಿಡಿಯಬಹುದು ಮತ್ತು ತೆರಿದಾರನಿಗೆ ಅಹವಾಲನ್ನು ಹೇಳಿಕೊಳ್ಳುವ ಅವಕಾಶವನ್ನು ಕೊಟ್ಟ ನಂತರ ಮತ್ತು ಆತನು ಸೂಕ್ತವೆಂದು ಭಾವಿಸುವಂಥ ವಿಚಾರಣೆಯನ್ನು ನಡೆಸಿ ಅಥವಾ ನಡೆಸುವಂತೆ ಮಾಡಿದ ನಂತರ ಕರನಿರ್ಧರಣೆಯನ್ನು ಹೆಚ್ಚಿಸುವುದು ಅಥವಾ ಮಾರ್ಪಾಟುಗೊಳಿಸುವುದು ಅಥವಾ ಕರನಿರ್ಧರಣೆಯನ್ನು ರದ್ದುಗೊಳಿಸುವುದು ಅಥವಾ ಹೊಸ ಕರನಿರ್ಧರಣೆಯನ್ನು ನಿರ್ದೇಶಿಸುವ ಆದೇಶವನ್ನು ಒಳಗೊಂಡು ಆ ಪ್ರಕರಣ ಸನ್ನಿವೇಶಗಳಲ್ಲಿ ಸಮರ್ಥಿಸುವಂತೆ ಅದರ ಮೇಲೆ ಅಂಥ ಆದೇಶವನ್ನು ಮಾಡಬಹುದು.

(3) ಈ ಅಧಿನಿಯಮದ ಮೇರೆಗಿನ ಯಾವುದೇ ವ್ಯವಹರಣೆಯ ದಾಖಲೆಯನ್ನು ಸ್ವಯಂ ಪ್ರೇರಣೆಯಿಂದ ಹೆಚ್ಚುವರಿ ಕಮೀಷನರ್ ತರಿಸಿಕೊಳ್ಳಬಹುದು ಮತ್ತು ಪರೀಕ್ಷಿಸಬಹುದು ಮತ್ತು ವೃತ್ತಿ ತೆರಿಗೆ ಅಧಿಕಾರಿಯ ದರ್ಜೆಯಿಂದ ಮೇಲಲ್ಲದ ಯಾರೇ ಅಧಿಕಾರಿಯ, ಅದರಲ್ಲಿ ಮಾಡಿದ ಯಾವುದೇ ಆದೇಶವು ರಾಜಸ್ವದ ಹಿತಾಸಕ್ತಿಗಳಿಗೆ ಬಾಧಕವಾಗುವಷ್ಟರ ಮಟ್ಟಿಗೆ ತಪ್ಪಾಗಿದೆಯೆಂದು ಪರಿಗಣಿಸಿದರೆ, ಆತನು ಅಗತ್ಯವಾದರೆ, ತಾನು ಸೂಕ್ತವೆಂದು ಭಾವಿಸಬಹುದಾಂಥ ಅವಧಿಗಾಗಿ ಅಂಥ ಆದೇಶದ ಜಾರಿಯನ್ನು ತಡೆಹಿಡಿಯಬಹುದು ಮತ್ತು ತೆರಿದಾರನಿಗೆ ಅಹವಾಲನ್ನು ಹೇಳಿಕೊಳ್ಳುವ ಅವಕಾಶವನ್ನು ಕೊಟ್ಟ ನಂತರ ಮತ್ತು ಆತನು ಸೂಕ್ತವೆಂದು ಭಾವಿಸುವಂಥ ವಿಚಾರಣೆಯನ್ನು ನಡೆಸಿ ಅಥವಾ ನಡೆಸುವಂತೆ ಮಾಡಿದ ನಂತರ ಕರನಿರ್ಧರಣೆಯನ್ನು ಹೆಚ್ಚಿಸುವುದು ಅಥವಾ ಮಾರ್ಪಾಟುಗೊಳಿಸುವುದು ಅಥವಾ ಕರನಿರ್ಧರಣೆಯನ್ನು ರದ್ದುಗೊಳಿಸುವುದು ಅಥವಾ ಹೊಸ ಕರನಿರ್ಧರಣೆಯನ್ನು ನಿರ್ದೇಶಿಸುವ ಆದೇಶವನ್ನು ಒಳಗೊಂಡು ಆ ಪ್ರಕರಣ ಸನ್ನಿವೇಶಗಳಲ್ಲಿ ಸಮರ್ಥಿಸುವಂತೆ ಅದರ ಮೇಲೆ ಅಂಥ ಆದೇಶವನ್ನು ಮಾಡಬಹುದು.

(4) ಈ ಅಧಿನಿಯಮದ ಮೇರೆಗಿನ ಯಾವುದೇ ವ್ಯವಹರಣೆಯ ದಾಖಲೆಯನ್ನು ಸ್ವಯಂ ಪ್ರೇರಣೆಯಿಂದ ಕಮೀಷನರ್ ತರಿಸಿಕೊಳ್ಳಬಹುದು ಮತ್ತು ಪರೀಕ್ಷಿಸಬಹುದು ಮತ್ತು ವೃತ್ತಿ ತೆರಿಗೆ

ಅಧಿಕಾರಿಯ ದರ್ಜೆಯಿಂದ ಮೇಲಲ್ಲದ ಯಾರೇ ಅಧಿಕಾರಿಯ, ಅದರಲ್ಲಿ ಮಾಡಿದ ಯಾವುದೇ ಆದೇಶವು ರಾಜಸ್ವದ ಹಿತಾಸಕ್ತಿಗಳಿಗೆ ಬಾಧಕವಾಗುವಷ್ಟರ ಮಟ್ಟಿಗೆ ತಪ್ಪಾಗಿದೆಯೆಂದು ಪರಿಗಣಿಸಿದರೆ, ಆತನು ಅಗತ್ಯವಾದರೆ, ತಾನು ಸೂಕ್ತವೆಂದು ಭಾವಿಸಬಹುದಾಂಥ ಅವಧಿಗಾಗಿ ಅಂಥ ಆದೇಶದ ಜಾರಿಯನ್ನು ತಡೆಹಿಡಿಯಬಹುದು ಮತ್ತು ತೆರಿದಾರನಿಗೆ ಅಹವಾಲನ್ನು ಹೇಳಿಕೊಳ್ಳುವ ಅವಕಾಶವನ್ನು ಕೊಟ್ಟ ನಂತರ ಮತ್ತು ಆತನು ಸೂಕ್ತವೆಂದು ಭಾವಿಸುವಂಥ ವಿಚಾರಣೆಯನ್ನು ನಡೆಸಿ ಅಥವಾ ನಡೆಸುವಂತೆ ಮಾಡಿದ ನಂತರ ಕರನಿರ್ಧರಣೆಯನ್ನು ಹೆಚ್ಚಿಸುವುದು ಅಥವಾ ಮಾರ್ಪಾಟುಗೊಳಿಸುವುದು ಅಥವಾ ಕರನಿರ್ಧರಣೆಯನ್ನು ರದ್ದುಗೊಳಿಸುವುದು ಅಥವಾ ಹೊಸ ಕರನಿರ್ಧರಣೆಯನ್ನು ನಿರ್ದೇಶಿಸುವ ಆದೇಶವನ್ನು ಒಳಗೊಂಡು ಆ ಪ್ರಕರಣ ಸನ್ನಿವೇಶಗಳಲ್ಲಿ ಸಮರ್ಥಿಸುವಂತೆ ಅದರ ಮೇಲೆ ಅಂಥ ಆದೇಶವನ್ನು ಮಾಡಬಹುದು.

(5) (1), (2), (3) ಮತ್ತು (4)ನೇ ಉಪ-ಪ್ರಕರಣಗಳ ಅಡಿಯಲ್ಲಿನ ಅಧಿಕಾರವನ್ನು, ಪರಿಷ್ಕರಿಸಬೇಕೆಂದು ಕೋರಲಾದ ಆದೇಶವನ್ನು ಹೊರಡಿಸಿದ ದಿನಾಂಕದಿಂದ ನಾಲ್ಕು ವರ್ಷಗಳ ಅವಧಿಯೊಳಗೆ ಮಾತ್ರ ಚಲಾಯಿಸತಕ್ಕದ್ದು.

**ವಿವರಣೆ.-** ಈ ಉಪ ಪ್ರಕರಣದ ಉದ್ದೇಶಕ್ಕಾಗಿ ಕಾಲಪರಿಮಿತಿ ಅವಧಿಯನ್ನು ಲೆಕ್ಕ ಹಾಕುವಾಗ ಯಾವ ಅವಧಿಯಲ್ಲಿ ಈ ಪ್ರಕರಣದ ಅಡಿಯಲ್ಲಿ ಯಾವುದೇ ವ್ಯವಹರಣೆಯನ್ನು ಯಾವುದೇ ನ್ಯಾಯಾಲಯದ ಆದೇಶ ಅಥವಾ ನಿರ್ಬಂಧಕಾಜ್ಞೆಯ ಮೂಲಕ ತಡೆಹಿಡಿಲಾಗಿದೆಯೋ ಆ ಯಾವುದೇ ಅವಧಿಯನ್ನು ಬಿಟ್ಟುಬಿಡತಕ್ಕದ್ದು.

(6) ಯಾವುದೇ ಆದೇಶವನ್ನು,-

(i) (4)ನೇ ಉಪ ಪ್ರಕರಣದ ಮೇರೆಗೆ ಕಮೀಷನರನು ಮಾಡಿದರೆ ಅದು 8ನೇ ಮತ್ತು 18ನೇ ಎ ಪ್ರಕರಣಗಳಿಗೆ ಒಳಪಟ್ಟು ಅಂತಿಮವಾಗಿರತಕ್ಕದ್ದು ;

(ii) (3)ನೇ ಉಪ ಪ್ರಕರಣದ ಮೇರೆಗೆ ಹೆಚ್ಚುವರಿ ಕಮೀಷನರನು ಮಾಡಿದರೆ, ಅದು 8ನೇ ಪ್ರಕರಣ, ಈ ಪ್ರಕರಣದ (4) ನೇ ಉಪ ಪ್ರಕರಣ ಮತ್ತು 18ನೇ ಎ ಪ್ರಕರಣಕ್ಕೆ ಒಳಪಟ್ಟು, ಅಂತಿಮವಾಗಿರತಕ್ಕದ್ದು.

(iii) (2)ನೇ ಉಪ ಪ್ರಕರಣದ ಮೇರೆಗೆ ಜಂಟಿ ಕಮೀಷನರನು ಮಾಡಿದರೆ ಅದು 8ನೇ ಪ್ರಕರಣ, 17ನೇ ಪ್ರಕರಣ, ಈ ಪ್ರಕರಣದ (3) ಮತ್ತು (4)ನೇ ಉಪ ಪ್ರಕರಣಗಳು ಮತ್ತು 18ನೇ-ಎ ಪ್ರಕರಣಕ್ಕೆ ಒಳಪಟ್ಟು ಅಂತಿಮವಾಗಿರತಕ್ಕದ್ದು. ಮತ್ತು

(iv) (1)ನೇ ಉಪ ಪ್ರಕರಣದ ಮೇರೆಗೆ ಡೆಪ್ಯೂಟಿ ಕಮೀಷನರನು ಮಾಡಿದರೆ, ಅದು 8ನೇ ಪ್ರಕರಣ, 17ನೇ ಪ್ರಕರಣ, ಈ ಪ್ರಕರಣದ (3) ಮತ್ತು (4)ನೇ ಉಪ ಪ್ರಕರಣಗಳು ಮತ್ತು 18ನೇ-ಎ ಪ್ರಕರಣಕ್ಕೆ ಒಳಪಟ್ಟು ಅಂತಿಮವಾಗಿರತಕ್ಕದ್ದು.

[1][(7)][1] ಯಾರೇ ನಿಯೋಜನಕನು ಸರ್ಕಾರದ ಅಧಿಕಾರಿಯಾಗದ, ಅಥವಾ [2][(3) ಮತ್ತು (4)ನೇ ಉಪ ಪ್ರಕರಣಗಳ][2] ಮೇರೆಗೆ ಮಾಡಿದ ಆದೇಶವನ್ನು ಆಕ್ಷೇಪಿಸುವ ಯಾರೇ ವ್ಯಕ್ತಿಯು ಆದೇಶವನ್ನು ಅವನಿಗೆ ತಿಳಿಸಿದ ದಿನಾಂಕದಿಂದ ಅರವತ್ತು ದಿನದೊಳಗೆ ಉಚ್ಚ ನ್ಯಾಯಾಲಯಕ್ಕೆ ಅಪೀಲು ಮಾಡಬಹುದು:

1. 1993ರ ಅಧಿನಿಯಮ ಸಂಖ್ಯೆ 11ರ ಮೂಲಕ ದಿನಾಂಕ: 01.04.1993 ರಿಂದ ಜಾರಿಗೆ ಬರುವಂತೆ ಮರು ಸಂಖ್ಯೆ ನೀಡಲಾಗಿದೆ.
2. 1993ರ ಅಧಿನಿಯಮ ಸಂಖ್ಯೆ 11ರ ಮೂಲಕ ದಿನಾಂಕ: 01.04.1993 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ

ಪರಂತು ಉಚ್ಚ ನ್ಯಾಯಾಲಯವು, ತೆರಿಗೆದಾರನಿಗೆ ಸಕಾಲದೊಳಗೆ ಅಪೀಲು ದಾಖಲು ಮಾಡದಿರಲು ಸಾಕಷ್ಟು ಕಾರಣವಿದ್ದಿತೆಂದು ತನಗೆ ಮನದಟ್ಟಾದರೆ, ಮೇಲೆ ಹೇಳಿದ ಅವರತ್ತು ದಿನಗಳ ಅವಧಿಯ ತರುವಾಯ, ದಾಖಲು ಮಾಡಿದ ಅಪೀಲನ್ನು ಅಂಗೀಕರಿಸಬಹುದು.

[1][(8)][1] ಅಪೀಲು ಗೊತ್ತುಪಡಿಸಿದ ನಮೂನೆಯಲ್ಲಿರತಕ್ಕದು, ಗೊತ್ತುಪಡಿಸಿದ ರೀತಿಯಲ್ಲಿ ಪರಿಶೀಲಿಸತಕ್ಕದ್ದು ಮತ್ತು ಅದರ ಜೊತೆಗೆ ಒಂದು ನೂರು ರೂಪಾಯಿಗಳ ಫೀಜು ಇರತಕ್ಕದು.

1. 1993ರ ಅಧಿನಿಯಮ ಸಂಖ್ಯೆ 11ರ ಮೂಲಕ ದಿನಾಂಕ:01.4.1993 ರಿಂದ ಜಾರಿಗೆ ಬರುವಂತೆ ಮರು ಸಂಖ್ಯೆ ನೀಡಲಾಗಿದೆ

[1][(9)][1] ಉಚ್ಚ ನ್ಯಾಯಾಲಯವು, ಅಪೀಲಿನ ಎರಡೂ ಪಕ್ಷಕಾರರಿಗೆ ಅಹವಾಲನ್ನು ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ಕೊಟ್ಟು ತಾನು ಸೂಕ್ತವೆಂದು ಭಾವಿಸುವಂಥ ಆದೇಶವನ್ನು ಅದರಲ್ಲಿ ಮಾಡಬಹುದು. 1993ರ ಅಧಿನಿಯಮ ಸಂಖ್ಯೆ 11ರ ಮೂಲಕ ದಿನಾಂಕ: 01.4.1993 ರಿಂದ ಜಾರಿಗೆ ಬರುವಂತೆ, ಪುನಃ ಸಂಖ್ಯೆ ಕೊಡಲಾಗಿದೆ.

1. 1993ರ ಅಧಿನಿಯಮ ಸಂಖ್ಯೆ 11ರ ಮೂಲಕ ದಿನಾಂಕ: 01.4.1993 ರಿಂದ ಜಾರಿಗೆ ಬರುವಂತೆ ಮರು ಸಂಖ್ಯೆ ನೀಡಲಾಗಿದೆ.

[1][**18ಎ. ಕೆಲವು ಮೊಕದ್ದಮೆಗಳಲ್ಲಿ ಉಚ್ಚ ನ್ಯಾಯಾಲಯದಿಂದ ಪುನರೀಕ್ಷಣೆ.-** (1) ಈ ಅಧಿನಿಯಮದ 17ನೇ ಪ್ರಕರಣದ ಮೇರೆಗೆ ಆದೇಶವನ್ನು ಅವನಿಗೆ ತಿಳಿಸಿದ ದಿನಾಂಕದಿಂದ [2][ಒಂದು ನೂರ ಎಂಬತ್ತು ದಿನದೊಳಗೆ][2], ಅಪೀಲುದಾರನ ಅಥವಾ ಪ್ರತಿವಾದಿಯು, ಅಪೀಲು ವಿಚಾರಣಾ ನ್ಯಾಯಾಧೀಕರಣವು ಕಾನೂನಿನ ಯಾವುದೇ ಪ್ರಶ್ನೆಯನ್ನು ತೀರ್ಮಾನಿಸುವುದರಲ್ಲಾಗಲಿ ಅಥವಾ ತಪ್ಪಾಗಿ ತೀರ್ಮಾನಿಸಿರುವುದರಲ್ಲಾಗಲಿ ವಿಫಲವಾಗಿದೆ ಎಂಬ ಕಾರಣದ ಆಧಾರದ ಮೇಲೆ ಆದೇಶದ ವಿರುದ್ಧ ಉಚ್ಚ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಬಹುದು:

ಪರಂತು ಉಚ್ಚ ನ್ಯಾಯಾಲಯವು ಆ ಅವಧಿಯೊಳಗೆ ಅರ್ಜಿಯನ್ನು ಅರ್ಜಿದಾರನಿಗೆ ದಾಖಲು ಮಾಡದಿರುವುದಕ್ಕಾಗಿ ಸಾಕಷ್ಟು ಕಾರಣವಿದ್ದಿತೆಂದು ತನಗೆ ಮನದಟ್ಟಾದರೆ, ಮೇಲೆ ಹೇಳಿದ, [2][ಒಂದು ನೂರ ಎಂಬತ್ತು ದಿನಗಳ][2] ಅವಧಿಯ ತರುವಾಯ ದಾಖಲು ಮಾಡಿದ ಅರ್ಜಿಯನ್ನು ಸ್ವೀಕರಿಸಬಹುದು.

(2) ಅರ್ಜಿಯು ನಿಯಮಿಸಲಾದ ನಮೂನೆಯಲ್ಲಿರತಕ್ಕದ್ದು ಮತ್ತು ಅದನ್ನು ರಾಜ್ಯ ಸರ್ಕಾರವನ್ನು ಹೊರತುಪಡಿಸಿ, ಯಾರೇ ವ್ಯಕ್ತಿಯು ದಾಖಲು ಮಾಡಿದಾಗ, ಅದರ ಜೊತೆಗೆ ಐವತ್ತು ರೂಪಾಯಿಗಳ ಫೀಜು ಇರತಕ್ಕದ್ದು.

(3) ಉಚ್ಚ ನ್ಯಾಯಾಲಯವು, ಅರ್ಜಿಯನ್ನು ಅನುಸರಿಸಿ ಹಸ್ತಕ್ಷೇಪ ಮಾಡುವುದಕ್ಕೆ ಯಾವುದೇ ಸಾಕಷ್ಟು ಆಧಾರವಿಲ್ಲ ಎಂದು ಪರಿಗಣಿಸಿದರೆ, ಅದು ಕ್ಷಿಪ್ರವಾಗಿ ಅರ್ಜಿಯನ್ನು ವಜಾಗೊಳಿಸಬಹುದು.

ಪರಂತು, ಅರ್ಜಿದಾರನಿಗೆ, ಅದರ ಸಮರ್ಥನೆಯಲ್ಲಿ, ಅಹವಾಲನ್ನು ಹೇಳಿಕೊಳ್ಳಲು ಸೂಕ್ತ ಅವಕಾಶವನ್ನು ನೀಡದ ಹೊರತು, ಯಾವುದೇ ಅರ್ಜಿಯನ್ನು ವಜಾಮಾಡತಕ್ಕದ್ದಲ್ಲ.

(4)(ಎ) ಉಚ್ಚ ನ್ಯಾಯಾಲಯವು, ಅರ್ಜಿಯನ್ನು ಕ್ಷಿಪ್ರವಾಗಿ ವಜಾಗೊಳಿಸದಿದ್ದರೆ, ಅದು, ಅರ್ಜಿಯ ಎರಡೂ ಪಕ್ಷಕಾರರಿಗೆ ಅಹವಾಲನ್ನು ಹೇಳಿಕೊಳ್ಳಲು ಸೂಕ್ತ ಅವಕಾಶವನ್ನು ನೀಡಿದ ತರುವಾಯ ಎತ್ತಲಾದ ಕಾನೂನು ಪ್ರಶ್ನೆ ಅಥವಾ ಪ್ರಶ್ನೆಗಳನ್ನು ನಿರ್ಧರಿಸತಕ್ಕದ್ದಲ್ಲ ಮತ್ತು ಯಾವ ಆದೇಶದ ವಿರುದ್ಧ ಅರ್ಜಿಯನ್ನು ದಾಖಲು ಮಾಡಲಾಗಿದೆಯೋ ಆ ಆದೇಶವನ್ನು ವಿಪರ್ಯಾಸಗೊಳಿಸುವುದಾಗಲಿ, ದೃಢೀಕರಿಸುವುದಾಗಲಿ ಅಥವಾ ತಿದ್ದುಪಡಿ ಮಾಡುವುದಾಗಲಿ ಮಾಡತಕ್ಕದ್ದು ಅಥವಾ ಎತ್ತಲಾದ ಕಾನೂನು ಪ್ರಶ್ನೆ ಅಥವಾ ಪ್ರಶ್ನೆಗಳ ಮೇಲೆ ಉಚ್ಚ ನ್ಯಾಯಾಲಯದ ಅಭಿಪ್ರಾಯದೊಂದಿಗೆ ಅಪೀಲು ವಿಚಾರಣಾ ನ್ಯಾಯಧಿಕರಣಕ್ಕೆ ವಿಷಯವನ್ನು ರವಾನಿಸತಕ್ಕದ್ದು ಅಥವಾ ಉಚ್ಚ ನ್ಯಾಯಾಲಯವು ಸೂಕ್ತವೆಂದೂ ಭಾವಿಸಬಹುದಾದಂಥ, ವಿಷಯಗಳಿಗೆ ಸಂಬಂಧಿಸದಂತೆ, ಇತರ ಅಂಥ ಆದೇಶವನ್ನು ಮಾಡತಕ್ಕದ್ದು.

(ಬಿ) ಉಚ್ಚ ನ್ಯಾಯಾಲಯವು, ಎತ್ತಲಾದ ಕಾನೂನು ಪ್ರಶ್ನೆಗಳ ಕುರಿತ ಮೇಲೆ ತನ್ನ ಅಭಿಪ್ರಾಯದಲ್ಲಿ (ಎ) ಖಂಡದ ಮೇರೆಗೆ ಅಪೀಲು ವಿಚಾರಣಾ ನ್ಯಾಯಾಧೀಕರಣಕ್ಕೆ ವಿಷಯವನ್ನು ರವಾನಿಸಿದಲ್ಲಿ ಅನಂತರ ಅಂಥ ಅಭಿಪ್ರಾಯಕ್ಕೆ ಅನುಗುಣವಾಗಿ, ಅದು ಮಾಡಿದ ಆದೇಶವನ್ನು ತಿದ್ದುಪಡಿ ಮಾಡತಕ್ಕದ್ದು.

(5) (4)ನೇ ಉಪ-ಪ್ರಕರಣದ ಮೇರೆಗೆ ಆದೇಶವನ್ನು ಮಾಡುವ ಮುಂಚೆ, ಉಚ್ಚ ನ್ಯಾಯಾಲಯವು, ಹಾಗೆ ಅಪೀಲು ವಿಚಾರಣಾ ನ್ಯಾಯಾಧೀಕರಣಕ್ಕೆ ಅರ್ಜಿಯನ್ನು ರವಾನಿಸುವುದು ಅವಶ್ಯಕವೆಂದು ಪರಿಗಣಿಸಿದರೆ, ಅದು ಹಾಗೆ ಮಾಡಬಹುದು ಮತ್ತು ಯಾವುದೇ ನಿರ್ದಿಷ್ಟ ಪ್ರಶ್ನೆ ಅಥವಾ ಸಮಸ್ಯೆಯ ಬಗ್ಗೆ ತನ್ನ ನಿರ್ಣಯದೊಂದಿಗೆ ಅರ್ಜಿಯನ್ನು ಹಿಂದಿರುಗಿಸಲು ಅದಕ್ಕೆ ನಿರ್ದೇಶಿಸಬಹುದು.

(6) (1)ನೇ ಉಪ-ಪ್ರಕರಣದ ಮೇರೆಗೆ ಅರ್ಜಿಯನ್ನು ದಾಖಲಿಸಿದರೂ ಸಹ, ತೆರಿಗೆಯನ್ನು ಪ್ರಕರಣದಲ್ಲಿ ಮಾಡಲಾದ ಕರ ನಿರ್ಧರಣೆಗೆ ಅನುಸಾರವಾಗಿ ಸಂದಾಯಮಾಡತಕ್ಕದ್ದು:

ಪರಂತು, ಅರ್ಜಿಯ ಪರಿಣಾಮವಾಗಿ, ಅಂಥ ಕರನಿರ್ಧರಣೆಯಲ್ಲಿ ಯಾವುದೇ ಬದಲಾವಣೆಯು ಅಗತ್ಯವಾದರೆ, ಉಚ್ಚ ನ್ಯಾಯಾಲಯವು ಕರನಿರ್ಧರಣೆಯನ್ನು ತಿದ್ದುಪಡಿ ಮಾಡಲು ಕರನಿರ್ಧರಣಾ ಪ್ರಾಧಿಕಾರವನ್ನು ಅಧಿಕೃತಗೊಳಿಸಬಹುದು ಮತ್ತು ಕರನಿರ್ಧರಣಾ ಪ್ರಾಧಿಕಾರವು ತದನುಸಾರವಾಗಿ ಕರನಿರ್ಧರಣೆಯನ್ನು ತಿದ್ದುಪಡಿ ಮಾಡತಕ್ಕದ್ದುಮತ್ತು ಅನಂತರ ತೆರಿಗೆದಾರನು ಹೆಚ್ಚಾಗಿ ಸಂದಾಯ ಮಾಡಿದ ಮೊಬಲಗನ್ನು ಬಡ್ಡಿ ಇಲ್ಲದೆ ಆತನಿಗೆ ಮರುಪಾವತಿಸತಕ್ಕದ್ದು ಅಥವಾ ಸಂದರ್ಭಾನುಸಾರ ಆತನಿಂದ ಬಾಕಿ ಬರಬೇಕಾದ ತೆರಿಗೆಯ ಹೆಚ್ಚುವರಿ ಮೊಬಲಗನ್ನು ಈ ಅಧಿನಿಯಮದ ಉಪಬಂಧಗಳಿಗೆ ಅನುಸಾರವಾಗಿ ವಸೂಲು ಮಾಡತಕ್ಕದ್ದು.

(7) (ಎ) ಉಚ್ಚ ನ್ಯಾಯಲಯವು, ಅರ್ಜಿಯ ಇಬ್ಬರು ಪಕ್ಷಕಾರರಲ್ಲಿ ಒಬ್ಬರ ಅರ್ಜಿಯ ಮೇರೆಗೆ, ಅದು ಆದೇಶವನ್ನು ಮಾಡುವಾಗ, ಅದರ ಮುಂದಿರುವಂಥ ಸಂಗತಿಗಳ ಆಧಾರದ ಮೇಲೆ, (4)ನೇ ಉಪ-ಪ್ರಕರಣದ ಮೇರೆಗೆ ಅದು ಮಾಡಿದ ಯಾವುದೇ ಆದೇಶವನ್ನು ಪರಿಶೀಲಿಸಬಹುದು.

(ಬಿ) ಪುನರವಲೋಕನ ಮಾಡಬೇಕೆಂದು ಕೋರಲಾದ ಆದೇಶವನ್ನು ತಿಳಿಸಿದ ದಿನಾಂಕದಿಂದ ತೊಂಬತ್ತು ದಿನದೊಳಗೆ ಪುನರವಲೋಕನಕ್ಕಾಗಿ ಅರ್ಜಿಯನ್ನು ಸಲ್ಲಿಸತಕ್ಕದ್ದು ಮತ್ತು ಅದು ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ರೀತಿಯಲ್ಲಿರತಕ್ಕದ್ದು ಮತ್ತು ರಾಜ್ಯ ಸರ್ಕಾರವನ್ನು ಹೊರತುಪಡಿಸಿ, ಅದನ್ನು ಯಾರೇ ವ್ಯಕ್ತಿಯು ದಾಖಲು ಮಾಡಿದ್ದಲ್ಲಿ, ಅದರ ಜೊತೆಗೆ ಐವತ್ತು ರೂಪಾಯಿಗಳ ಫೀಜು ಇರತಕ್ಕದ್ದು.

(8) ದಾಖಲೆಯಿಂದಲೇ ಸ್ಪಷ್ಟವಾಗುವ ಯಾವುದೇ ತಪ್ಪನ್ನು ಸರಿಪಡಿಸುವ ದೃಷ್ಟಿಯಿಂದ, ಉಚ್ಚ ನ್ಯಾಯಲಯವು ಮಾಡಿದ ಆದೇಶದ ದಿನಾಂಕದಿಂದ ಐದು ವರ್ಷಗಳೊಳಗೆ ಯಾವುದೇ ಕಾಲದಲ್ಲಿ, ಅಂಥ ಆದೇಶವನ್ನು ತಾನು ತಿದ್ದುಪಡಿ ಮಾಡಬಹುದು:

ಪರಂತು, ಬಾಧಿತರಾದ ಪಕ್ಷಕಾರರಿಗೆ ಅಹವಾಲನ್ನು ಹೇಳಿಕೊಳ್ಳಲು ಸೂಕ್ತ ಅವಕಾಶ ನೀಡದೆ ಈ ಉಪ-ಪ್ರಕರಣದ ಮೇರೆಗೆ ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ.

(9) ಈ ಪ್ರಕರಣದ ಮೇರೆಗೆ ದಾಖಲಿಸಲಾದ ಪ್ರತಿಯೊಂದು ಅರ್ಜಿಗೆ ಸಂಬಂಧಿಸಿದಂತೆ, ವೆಚ್ಚಗಳನ್ನು ಉಚ್ಚ ನ್ಯಾಯಲಯದ ವಿವೇಚಾನಾನುಸಾರ ಇರತಕ್ಕದ್ದು.][1]

1. 1985ರ ಅಧಿನಿಯಮ ಸಂಖ್ಯೆ 1ರ ಮೂಲಕ ದಿನಾಂಕ: 09.01.1985 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
2. 2012ರ ಅಧಿನಿಯಮ ಸಂಖ್ಯೆ 18ರ ಮೂಲಕ ದಿನಾಂಕ: 01.04.2012 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**19. ಲೆಕ್ಕಪತ್ರಗಳು.-** (1) ನಿಯೋಜಕನು ತನ್ನ ವಾಡಿಕೆಯ ವ್ಯವಹಾರದಲ್ಲಿ ಇಟ್ಟುಕೊಂಡ ಬಂದ ಲೆಕ್ಕದ ಪುಸ್ತಕಗಳು ಮತ್ತು ಇತರ ದಸ್ತಾವೇಜುಗಳು ಈ ಅಧಿನಿಯಮದ ಮೇರೆಗೆ ನಿಯೋಜಕನು ದಾಖಲು ಮಾಡಿದ ವಿವರ ಪಟ್ಟಿಕೆಗಳ ಸತ್ಯಾಪನೆಗಾಗಿ ಸಾಕಷ್ಟಾಗಿರುವುದಿಲ್ಲವೆಂದು ತೆರಿಗೆ ನಿರ್ಧರಣಾ ಪ್ರಾಧಿಕಾರಕ್ಕೆ ಮನದಟ್ಟಾದರೆ, ಲೆಕ್ಕದ ಪುಸ್ತಕಗಳನ್ನು ಅಥವಾ ಇತರ ದಸ್ತಾವೇಜುಗಳನ್ನು ತಾನು ಲಿಖಿತವಾಗಿ ನಿರ್ದೇಶಿಸಬಹುದಾದಂಥ ರೀತಿಯಲ್ಲಿ ಇಟ್ಟುಕೊಂಡು ಬರಲು ನಿಯೋಜಕನಿಗೆ ತಾನು ನಿರ್ದೇಶಿಸುವುದು ಕಾನೂನು ಬದ್ಧವಾಗಿರತಕ್ಕದು ಮತ್ತು ಆ

ತರುವಾಯು ನಿಯೋಜಕನು ಅದರಲ್ಲಿ ನಿರ್ದಿಷ್ಟಪಡಿಸಿದ ಕಾಲದೊಳಗೆ ಅದಕ್ಕನುಸಾರವಾಗಿ ಅಂಥ ಲೆಕ್ಕ ಪತ್ರಗಳ ಪುಸ್ತಕಗಳನ್ನು ಅಥವಾ ಇತರ ದಾಸ್ತಾವೇಜುಗಳನ್ನು ಇಟ್ಟುಕೊಂಡು ಬರತಕ್ಕದು.

[1][(1ಎ) (1)ನೇ ಉಪ- ಪ್ರಕರಣದ ಅಡಿಯಲ್ಲಿ ನಿಯೋಜಕನು ಇಟ್ಟುಕೊಂಡು ಬಂದಿರುವ ಲೆಕ್ಕದ ಪುಸ್ತಕಗಳು ಮತ್ತು ಇತರ ದಸ್ತಾವೇಜುಗಳನ್ನು ಅವುಗಳನ್ನು ಸಂಬಂಧಪಟ್ಟಿರುವಂತೆ ವರ್ಷವು ಮುಕ್ತಾಯಗೊಳ್ಳುವ ದಿನಾಂಕದಿಂದ ಐದು ವರ್ಷಗಳ ಅವಧಿಯವರೆಗೆ ಸಂರಕ್ಷಿಸತಕ್ಕದ್ದು.

1. 1992ರ ಅಧಿನಿಯಮ ಸಂಖ್ಯೆ 5ರ ಮೂಲಕ ದಿನಾಂಕ: 01.04.1992 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(2) (1)ನೇ ಉಪಪ್ರಕರಣದ ಮೇರಗೆ ನಿರ್ದೇಶಿಸಲಾದಂತೆ ನಿಯೋಜಕನು ಲೆಕ್ಕ ಪತ್ರಗಳ ಪುಸ್ತಕಗಳನ್ನು ಮತ್ತು ದಸ್ತಾವೇಜುಗಳನ್ನು ಇಟ್ಟುಕೊಂಡು ಬರಲು [1][ಅಥವಾ (1ಎ) ಉಪ-ಪ್ರಕರಣದ ಮೇರೆಗೆ ನಿರ್ದಿಷ್ಟಪಡಿಸಿದಂತೆ ಲೆಕ್ಕಗಳ ಪುಸ್ತಕಗಳು ಮತ್ತು ಇತರ ದಸ್ತಾವೇಜುಗಳನ್ನು ಸಂರಕ್ಷಿಸಿಡಲು][1] ಉದ್ದೇಶಪೂರ್ವಕವಾಗಿ ತಪ್ಪಿದರೆ, ತೆರಿಗೆ ನಿರ್ಧರಣಾ ಪ್ರಾಧಿಕಾರವು, ಅವನಿಗೆ ಮನವಿ ಮಾಡಿಕೊಳ್ಳಲು ಅವಕಾಶವನ್ನು ಕೊಟ್ಟು, ವಿಳಂಬದ ಪ್ರತಿ ದಿನಕ್ಕೆ ಐದು ರೂಪಾಯಿಗಳಿಗೆ ಮೀರದ ದಂಡವನ್ನು ವಿಧಿಸಬಹುದು.

1. 1992ರ ಅಧಿನಿಯಮ ಸಂಖ್ಯೆ 5ರ ಮೂಲಕ ದಿನಾಂಕ: 01.04.1992 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**20. ವಸೂಲಿಯ ವಿಶೇಷ ಬಗೆ.-** (1) ಯಾವುದೇ ಕಾನೂನಿನಲ್ಲಿ ಅಥವಾ ಕರಾರಿನಲ್ಲಿ ತದ್ವಿರುದ್ಧವಾಗಿ ಏನೇ ಇದ್ದರೂ, ತೆರಿಗೆ ನಿರ್ಧರಣಾ ಪ್ರಾಧಿಕಾರವು ಯಾವುದೇ ಕಾಲದಲ್ಲಿ ಅಥವಾ ಕಾಲಕಾಲಕ್ಕೆ ಲಿಖಿತ ನೋಟಿಸಿನ ಮೂಲಕ – ಇದರ ಪ್ರತಿಯನ್ನು ತೆರಿಗೆ ನಿರ್ಧರಣಾ ಪ್ರಾಧಿಕಾರಕ್ಕೆ ಕೊನೆಯದಾಗಿ ತಿಳಿದಿರುವ ತೆರಿಗೆ ಕೊಡುವವನ ವಿಳಾಸಕ್ಕೆ ಕಳುಹಿಸಿಕೊಡತಕ್ಕದು-

(ಎ) ಈ ಅಧಿನಿಯಮದ ಮೇರಗೆ ಯಾರಿಗೆ ತಗಾದೆ ನೋಟೀಸನ್ನು ಜಾರಿ ಮಾಡಲಾಗಿದೆಯೋ ಅಂಥ ತೆರಿಗೆ ಕೊಡುವವನಿಗೆ ಯಾವುದೇ ಮೊಬಲಗನ್ನು ಅಥವಾ ಹಣವನ್ನು ಯಾರು ಕೊಡಬೇಕಾಗಿದೆಯೋ ಅಥವಾ ಕೊಡಬೇಕಾಗಿ ಬರಬಹುದಾಗಿದೆಯೋ ಅಂಥ ಯಾವನೇ ವ್ಯಕ್ತಿಯನ್ನು; ಅಥವಾ

(ಬಿ) ಅಂಥ ತೆರಿಗೆ ಕೊಡುವವನಿಗೆ ಅಥವಾ ಅವನಿಗೋಸ್ಕರವಾಗಿ ಹಣವನ್ನು ಹೊಂದಿರುವ ಅಥವಾ ತದನಂತರ ಹೊಂದಬಹುದಾದ ಯಾವನೇ ವ್ಯಕ್ತಿಯನ್ನು;

- ಆ ಹಣವನ್ನು ಕೊಡಬೇಕಾಗುವಾಗ, ಅಥವಾ ಹೊಂದಿರುವಾಗ ಆ ಕೂಡಲೇ ಅಥವಾ ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ಸಮಯಕ್ಕೆ ಅಥವಾ ಸಮಯದೊಳಗೆ, (ಮೇಲೆ ಹೇಳಿದಂತೆ ಹಣದ ಕೊಡಬೇಕಾಗಿರುವುದಕ್ಕಿಂತ ಮುಂಚೆ ಅಥವ ಹೊಂದಿರುವುದಕ್ಕೆ ಮುಂಚೆ ಅಲ್ಲ) ಈ ಅಧಿನಿಯಮದ ಮೇರಗೆ ತೆರಿಗೆಯ ಬಾಕಿಯ ದಂಡ ಅಥವಾ ಬಡ್ಡಿಯ ಸಂಬಂಧದಲ್ಲಿ, ತೆರಿಗೆ ಕೊಡುವವನು ಕೊಡಬೇಕಾದ ಮೊಬಲಗನ್ನು ಸಂದಾಯ ಮಾಡಲು ಸಾಕಾಗುಷ್ಟು ಹಣವನ್ನು ಅಥವಾ ಅದು ಆ ಮೊಬಲಗಿಗೆ ಸಮವಾಗಿದ್ದಾಗ ಅಥವಾ ಅದಕ್ಕಿಂತ ಕಡಿಮೆಯಾಗಿದ್ದಾಗ ಪೂರ್ತಿ ಹಣವನ್ನು ತೆರಿಗೆ ನಿರ್ಧರಣಾ ಪ್ರಾಧಿಕಾರಕ್ಕೆ ಸಂದಾಯ ಮಾಡಲು ಅಗತ್ಯಪಡಿಸಬಹುದು.

**ವಿವರಣೆ.-** ಈ ಪ್ರಕರಣದ ಉದ್ದೇಶಕ್ಕಾಗಿ ತೆರಿಗೆ ಕೊಡುವವನಿಗೆ ಯಾವನೇ ವ್ಯಕ್ತಿಯಿಂದ ಬರಬೇಕಾದ ಹಣದ ಮೊಬಲಗನ್ನು ಅಥವಾ ತೆರಿಗೆ ಕೊಡುವವನಿಗಾಗಿ ಅಥವಾ ಅವನಿಗೋಸ್ಕರವಾಗಿ ಯಾವನೇ ವ್ಯಕ್ತಿಯು ಹೊಂದಿರುವ ಹಣವು ಕಾನೂನುಬದ್ಧವಾಗಿ ಅಸ್ತಿತ್ವದಲ್ಲಿರುವ ಅಥವಾ ಅಂಥ ತೆರಿಗೆ ಕೊಡುವವನಿಂದ ಅಂಥ ವ್ಯಕ್ತಿಗೆ ಸಂದಾಯವಾಗಬೇಕಾಗಬಹುದಂಥ ಕ್ಲೇಮುಗಳನ್ನು (ಯಾವುದಾದರೂ ಇದ್ದರೆ) ಕಳೆದ ನಂತರ ಲೆಕ್ಕ ಹಾಕತಕ್ಕದು.

(2) ತೆರಿಗೆ ನಿರ್ಧರಣಾ ಪ್ರಾಧಿಕಾರವು ಯಾವುದೇ ಕಾಲದಲ್ಲಿ ಅಥವಾ ಕಾಲಕಾಲಕ್ಕೆ ಅಂಥ ಯಾವುದೇ ನೋಟೀಸನ್ನು ತಿದ್ದುಪಡಿ ಮಾಡಬಹುದು ಅಥವಾ ರದ್ದುಗೊಳಿಸಬಹುದು ಅಥವಾ

ನೋಟಿಸಿಗನುಗುಣವಾಗಿ ಯಾವುದೇ ಹಣವನ್ನು ಸಂದಾಯ ಮಾಡುವ ಕಾಲವನ್ನು ವಿಸ್ತರಿಸಬಹುದು.

(3) ಈ ಪ್ರಕರಣದ ಮೇರೆಗಿನ ನೋಟೀಸನ್ನು ಪಾಲಿಸಿ, ಹಣ ಸಂದಾಯ ಮಾಡುವ ಯಾವನೇ ವ್ಯಕ್ತಿಯು, ತೆರಿಗೆ ಕೊಡುವವನ ಅಧಿಕಾರದ ಮೇರೆಗೆ ಸಂದಾಯವನ್ನು ಮಾಡಿರುವುದಾಗಿ ಭಾವಿಸತಕ್ಕದ್ದು, ಮತ್ತು ತೆರಿಗೆ ನಿರ್ಧರಣಾ ಪ್ರಾಧಿಕಾರವು ಕೊಟ್ಟ ರಸೀದಿಯು, ಆ ರಸೀದಿಯಲ್ಲಿ ಉಲ್ಲೇಖಿಸಲಾಗಿರುವ ಮೊಬಲಗಿನಷ್ಟರ ಮಟ್ಟಿಗೆ ಅಂಥ ವ್ಯಕ್ತಿಯ ಹೊಣೆಯ ಸರಿಯಾದ ಮತ್ತು ಸಮರ್ಪಕವಾದ ತೀರಿಕೆಯೆನಿಸತಕ್ಕದು.

(4) ಈ ಪ್ರಕರಣದಲ್ಲಿ ಉಲ್ಲೇಖಿಸಲಾಗಿರುವ ನೋಟೀಸು ತಲುಪಿದನಂತರ ತೆರಿಗೆ ಕೊಡುವವನಿಗೆ ಕೊಡಬೇಕಾಗಿರುವ ಯಾವುದೇ ಹೊಣೆಯನ್ನು ತೀರಿಸುವ ಯಾವನೇ ವ್ಯಕ್ತಿಯು ತೀರಿಕೆಯಾದ ಹೊಣೆಯಷ್ಟರ ಮಟ್ಟಿಗೆ ತೆರಿಗೆಯ, ದಂಡದ ಅಥವಾ ಬಡ್ಡಿಯ ಬಗ್ಗೆ ತೆರಿಗೆ ಕೊಡುವವನಿಗಿರುವ ಹೊಣೆಯಷ್ಟರಮಟ್ಟಿಗೆ, ಇವುಗಳಲ್ಲಿ ಯಾವುದು ಕಡಿಮೆಯೋ ಅಷ್ಟರಮಟ್ಟಿಗೆ, ತೆರಿಗೆ ನಿರ್ಧರಣಾ ಪ್ರಾಧಿಕಾರಕ್ಕೆ ವೈಯಕ್ತಿವಾಗಿ ಹೊಣೆಗಾರಾಗಿರತಕ್ಕದು.

(5) ಈ ಪ್ರಕರಣದ ಮೇರೆಗಿನ ನೋಟೀಸನ್ನು ಯಾರಿಗೆ ಕಳುಹಿಸಲಾಗಿದೆಯೋ ಆ ವ್ಯಕ್ತಿಯು, ತಗಾದೆ ಮಾಡಲಾದ ಮೊಬಲಗನ್ನು ಅಥವಾ ಅದರ ಯಾವುದೇ ಭಾಗವನ್ನು ತೆರಿಗೆ ಕೊಡುವವನಿಗೆ ಕೊಡಬೇಕಾಗುದಿಲ್ಲವೆಂದು ಅಥವಾ ತೆರಿಗೆ ಕೊಡುವವನಿಗಾಗಿ ಅಥವಾ ಅವನಿಗೋಸ್ಕರವಾಗಿ ಯಾವುದೇ ಹಣವನ್ನು ತಾನು ಹೊಂದಿಲ್ಲವೆಂದು ತೆರಿಗೆ ನಿರ್ಧರಣಾ ಪ್ರಾಧಿಕಾರಕ್ಕೆ ಮನದಟ್ಟಾಗುವಂತೆ ರುಜುವಾತು ಪಡಿಸಿದಲ್ಲಿ ಆಗ ಈ ಪ್ರಕರಣದಲ್ಲಿರುವುದು ಯಾವುದೂ ಅಂಥ ಮೊಬಲಗನ್ನು ಅಥವಾ ಅದರ ಭಾಗವನ್ನು ತೆರಿಗೆ ನಿರ್ಧರಣಾ ಪ್ರಾಧಿಕಾರಕ್ಕೆ ಸಂದಾಯ ಮಾಡಲು ಅಂಥ ವ್ಯಕ್ತಿಯನ್ನು ಅಗತ್ಯಪಡಿಸುವುದೆಂದು ಭಾವಿಸತಕ್ಕದಲ್ಲ.

(6) ಒಬ್ಬ ವ್ಯಕ್ತಿಯು, ತೆರಿಗೆ ನಿರ್ಧರಣಾ ಪ್ರಾಧಿಕಾರಕ್ಕೆ ಸಂದಾಯ ಮಾಡಲು ಅಗತ್ಯಪಡಿಸಲಾದ ಅಥವಾ ಈ ಪ್ರಕರಣದ ಮೇರೆಗೆ ತೆರಿಗೆ ನಿರ್ಧರಣಾ ಪ್ರಾಧಿಕಾರಕ್ಕೆ ಯಾವ ಮೊಬಲಗಿಗಾಗಿ ವೈಯಕ್ತಿಕವಾಗಿ ಹೊಣೆಗಾರನಾಗಿರವನೋ ಆ ಯಾವುದೇ ಮೊಬಲಗು ಅದು ಸಂದಾಯವಾಗದೇ ಉಳಿದಿದ್ದರೆ, ಭೂಕಂದಾಯದ ಬಾಕಿಯಂತೆ ವಸೂಲೀಯವಾಗಿರತಕ್ಕದು.

**21. ಲೆಕ್ಕಪತ್ರಗಳನ್ನು ಮತ್ತು ದಸ್ತಾವೇಜುಗಳನ್ನು ಹಾಜರುಪಡಿಸುವುದು ಮತ್ತು ಪರಿಶೀಲಿಸುವುದು ಹಾಗೂ ಆವರಣಗಳನ್ನು ಶೋಧಿಸುವುದು.-** ಈ ಅಧಿನಿಯಮದ ಮೇರೆಗಿನ ಯಾವುದೇ ಪ್ರಾಧಿಕಾರ [1][ಅಥವಾ ಆಯುಕ್ತರಿಂದ ಸಾಮಾನ್ಯವಾಗಿ ಅಥವಾ ನಿರ್ದಿಷ್ಟವಾಗಿ ಅಧಿಕೃತನಾದ ಯಾವೊಬ್ಬ ಅಧಿಕಾರಿಯು][1], ಈ ಅಧಿನಿಯಮದ ಮೇರಗೆ ತೆರಿಗೆಗೆ ಬದ್ಧವಾಗಿರುವ ಯಾವುದೇ ವೃತ್ತಿಯನ್ನು, ಕಸಬನ್ನು, ಆಜೀವಿಕೆಯನ್ನು ಮತ್ತು ಉದ್ಯೋಗವನ್ನು ಯಾವ ಆವರಣಗಳಲ್ಲಿ ನಡೆಸಲಾಗುತ್ತಿದೆಯೋ ಅಥವಾ ನಡೆಸಲಾಗುತ್ತಿದೆ ಎಂದು ಶಂಕಿಸಲಾಗಿದೆಯೋ ಆ ಯಾವುದೇ ಆವರಣಗಳನ್ನು ಪರಿಶೀಲಿಸಬಹುದು ಹಾಗೂ ಶೋಧಿಸಬಹುದು ಮತ್ತು ಅವುಗಳಿಗೆ ಸಂಬಂಧಿಸಿದ ಪುಸ್ತಕಗಳನ್ನು, ರಿಜಿಸ್ಟರುಗಳನ್ನು, ಲೆಕ್ಕಪತ್ರಗಳನ್ನು ಅಥವಾ ದಸ್ತಾವೇಜುಗಳನ್ನು ಹಾಜರುಪಡಿಸಲು ಹಾಗೂ ಪರೀಕ್ಷಿಸಲು ಅಗತ್ಯಪಡಿಸಬಹುದು ಮತ್ತು ಅವಶ್ಯವಾಗಬಹದಾದಂಥ ಪುಸ್ತಕಗಳನ್ನು, ರಿಜಿಸ್ಟರುಗಳನ್ನು, ಲೆಕ್ಕಪತ್ರಗಳನ್ನು ಅಥವಾ ದಸ್ತಾವೇಜುಗಳನ್ನು ಅಭಿಗ್ರಹಿಸಿಕೊಳ್ಳಬಹುದು:

ಪರಂತು, ಸದರಿ ಪ್ರಾಧಿಕಾರವು ಸದರಿ ಆವರಣದಿಂದ ಯಾವುದೇ ಪುಸ್ತಕವನ್ನು, ರಿಜಿಸ್ಟರನ್ನು, ಲೆಕ್ಕಪತ್ರವನ್ನು ಅಥವಾ ದಸ್ತಾವೇಜನ್ನು ಸ್ಥಳಾಂತರಿಸಿದರೆ, ತಾನು ಹಾಗೆ ಸ್ಥಳಾಂತರಿಸಿದ ಪುಸ್ತಕವನ್ನು, ರಿಜಿಸ್ಟರನು ಲೆಕ್ಕಪತ್ರವನ್ನು ಅಥವಾ ದಸ್ತಾವೇಜನ್ನು ವಿವರಿಸುವ ರಸೀದಿಯನ್ನು ಆ ಸ್ಥಳದ ಆಡಳಿತವನ್ನು ಹೊಂದಿರುವ ವ್ಯಕ್ತಿಗೆ ಕೊಡತಕ್ಕದು ಮತ್ತು ಅದರ ಪರೀಕ್ಷೆಯ ಉದ್ದೇಶಗಳಿಗಾಗಿ ಅಥವಾ ಪ್ರಾಸಿಕ್ಯೂಷನ್ನಿಗಾಗಿ ಅವಶ್ಯವಾಗಬಹುದಾದಷ್ಟು ಕಾಲದವರೆಗೆ ಮಾತ್ರ ಅದನ್ನು ಇಟ್ಟುಕೊಳ್ಳತಕ್ಕದು.

1. 2009ರ ಅಧಿನಿಯಮ ಸಂಖ್ಯೆ 7ರ ಮೂಲಕ ದಿನಾಂಕ: 01.04.2009 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**22. ಮರುಪಾವತಿಗಳು.-** ಈ ಅಧಿನಿಯಮದ ಮೇರೆಗೆ ಕೊಡಬೇಕಾಗಿರುವ ಮೊಬಲಗಿಗಿಂತ ಹೆಚ್ಚಾಗಿ ಯಾವುದೇ ತೆರಿಗೆಯನ್ನು ಅಥವಾ ದಂಡವನ್ನು ಅಥವಾ ಬಡ್ಡಿಯನ್ನು ಅಥವಾ ಫೀಜನ್ನು ಸಂದಾಯ ಮಾಡಿದ ಯಾವನೇ ವ್ಯಕ್ತಿಯು, ಅಂಥ ಮೊಬಲಗಿನ ಮರುಪಾವತಿಗಾಗಿ ಅಥವಾ ಮುಂದಿನ ತೆರಿಗೆಯ ಬಗ್ಗೆ ಹೊಂದಾಣಿಕೆಗಾಗಿ ತೆರಿಗೆ ನಿರ್ಧರಣಾ ಪ್ರಾಧಿಕಾರಕ್ಕೆ ಅರ್ಜಿಯನ್ನು ಸಲ್ಲಿಸಬಹುದು ಮತ್ತು ಹೆಚ್ಚಾಗಿ ಸಂದಾಯ ಮಾಡಲಾಗಿರುವ ಹಣವನ್ನು ತದನುಸಾರವಾಗಿ ಮರುಪಾವತಿ ಮಾಡತಕ್ಕದು ಅಥವಾ ಹೊಂದಾಣಿಕೆ ಮಾಡತಕ್ಕದು.

**23. ಅಪರಾಧಗಳು ಮತ್ತು ದಂಡಗಳು.-** ಈ ಅಧಿನಿಯಮದ ಉಪಬಂಧಗಳನ್ನು ಅಥವಾ ಅದರ ಮೇರೆಗೆ ರಚಿತವಾದ ನಿಯಮಗಳನ್ನು ಪಾಲಿಸಲು ಸಾಕಷ್ಟು ಕಾರಣವಿಲ್ಲದೆ ತಪ್ಪಿದ ಯಾವನೇ ವ್ಯಕ್ತಿಯು ಅಥವಾ ನಿಯೋಜಕನು ಅಪರಾಧ ನಿರ್ಣಯವಾದ ಮೇಲೆ ಐದು ಸಾವಿರ ರೂಪಾಯಿಗಳವರೆಗಿನ ಜುಲ್ಮಾನೆಯಿಂದ ಮತ್ತು ಅಪರಾಧವು ಮುಂದುವರಿಯುತ್ತಿರುವಂಥದಾಗಿದ್ದರೆ, ಹಾಗೆ ಮುಂದುವರಿಯುತ್ತಿರುವ ಪ್ರತಿಯೊಂದು ದಿವಸಕ್ಕೆ ಐವತ್ತು ರೂಪಾಯಿಗಳವರೆಗೆ ಜುಲ್ಮಾನೆಯಿಂದ ದಂಡಿತನಾಗತಕ್ಕದು.

**24. ಕಂಪನಿಗಳಿಂದ ಅಪರಾಧ.-** (1) ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಕಂಪೆನಿಯು ಮಾಡಿರುವಲ್ಲಿ, ಅಪರಾಧವು ನಡೆದ ಕಾಲದಲ್ಲಿ ಕಂಪನಿಯ ಆಡಳಿತವನ್ನು ಹೊಂದಿದ್ದ ಅಥವಾ ಕಂಪನಿಯ ವ್ಯವಹಾರಗಳನ್ನು ನಡೆಸುವುದಕ್ಕೆ ಕಂಪನಿಗೆ ಜವಾಬ್ದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು ಹಾಗೂ ಕಂಪನಿಯನ್ನು ಆ ಅಪರಾಧದ ತಪ್ಪಿತಸ್ಥನೆಂದು ಭಾವಿಸತಕ್ಕದು ಮತ್ತು ತದನುಸಾರವಾಗಿ ವ್ಯವಹರಣೆಗೆ ಮತ್ತು ದಂಡನೆಗೆ ಗುರಿಯಾಗತಕ್ಕದು:

ಪರಂತು, ಅಪರಾಧವು ತನ್ನ ತಿಳುವಳಿಕೆಗೆ ಬಾರದೆ ನಡೆಯಿತೆಂದು ಅಥವಾ ಅಂಥ ಅಪರಾಧವನ್ನು ತಡೆಗಟ್ಟಲು ತಾನು ಯಥೋಚಿತವಾದ ಎಲ್ಲ ಜಾಗರೂಕತೆಯನ್ನು ವಹಿಸಿದ್ದೆನೆಂದು ಅಂಥ ವ್ಯಕ್ತಿಯು ರುಜುವಾತುಪಡಿಸಿದರೆ, ಅವರನ್ನು ಈ ಉಪಪ್ರಕರಣದಲ್ಲಿರುವುದಾವುದೂ ಯಾವುದೇ ದಂಡನೆಗೆ ಗುರಿಪಡಿಸತಕ್ಕುದಲ್ಲ.

(2) ಉಪಪ್ರಕರಣ (1)ರಲ್ಲಿ ಏನೇ ಇದ್ದರೂ, ಈ ಅಧಿನಿಯಮದ ಮೇರೆಗಿನ ಯಾವುದೇ ಅಪರಾಧವನ್ನು ಕಂಪನಿಯು ಮಾಡಿರುವಲ್ಲಿ ಮತ್ತು ಈ ಅಪರಾಧವು ಕಂಪೆನಿಯ ಯಾವುದೇ ನಿರ್ದೇಶಕನ, ವ್ಯವಸ್ಥಾಪಕನ, ಕಾರ್ಯದರ್ಶಿಯ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ನಡೆಯಿತೆಂದು ರುಜುವಾತಾದಲ್ಲಿ ಅಥವಾ ನಿರ್ಲಕ್ಷತೆಯ ಕಾರಣದಿಂದ ನಡೆಯಿತೆಂದು ಹೇಳಬಹುದಾದಲ್ಲಿ ಅಂಥ ನಿರ್ದೇಶಕನನ್ನು, ವ್ಯವಸ್ಥಾಪಕನನ್ನು, ಕಾರ್ಯದರ್ಶಿಯನ್ನು ಅಥವಾ ಇತರ ಅಧಿಕಾರಿಯನ್ನು ಸಹ ಆ ಅಪರಾಧ ತಪ್ಪಿತಸ್ಥನೆಂದು ಭಾವಿಸತಕ್ಕದು ಮತ್ತು ತದನುಸಾರವಾಗಿ ಅವನು ವ್ಯವಹರಣೆಗೆ ಗುರಿಯಾಗತಕ್ಕದು ಮತ್ತು ದಂಡಿತನಾಗತಕ್ಕದು.

**ವಿವರಣೆ.-** ಈ ಪ್ರಕರಣದ ಉದ್ದೇಶಗಳಿಗಾಗಿ,-

(ಎ) "ಕಂಪನಿ'' ಎಂದರೆ, ಯಾವುದೇ ನಿಗಮತ ನಿಕಾಯ ಮತ್ತು ಫರ್ಮನ್ನು ಅಥವಾ ವ್ಯಕ್ತಿಗಳ ಇತರ ಸಂಘವನ್ನು ಇದು ಒಳಗೊಳ್ಳುತ್ತದೆ; ಮತ್ತು

(ಬಿ) ಫರ್ಮಿನ ಸಂಬಂಧದಲ್ಲಿ "ನಿರ್ದೇಶಕ'' ಎಂದರೆ, ಫರ್ಮಿನ ಪಾಲುಗಾರ.

**25. ವ್ಯವಹರಣೆಗಳನ್ನು ವರ್ಗಾಯಿಸುವ ಅಧಿಕಾರ.-** ಕಮಿಷನರು, ಈ ಅಧಿನಿಯಮದ ಯಾವುದೇ ಉಪಬಂಧದ ಮೇರೆಗಿನ ಯಾವುದೇ ವ್ಯವಹರಣೆಗಳನ್ನು ಅಥವಾ ಯಾವುದೇ ವರ್ಗದ ವ್ಯವಹರಣೆಗಳನ್ನು ಯಾವುದೇ ಅಧಿಕಾರಿಯಿಂದ, ಹಿಂದಿನ ಅಧಿಕಾರಿಯ ಸ್ಥಾನಮಾನಕ್ಕೆ ಕಡಿಮೆಯಿಲ್ಲದ ಇತರ ಯಾವನೇ ಅಧಿಕಾರಿಗೆ, ಲಿಖಿತ ಆದೇಶದ ಮೂಲಕ ವರ್ಗಾಯಿಸಬಹುದು.

**ವಿವರಣೆ.-** ಈ ಪ್ರಕರಣದಲ್ಲಿ, ಅದರ ಮೇರೆಗೆ ಹೊರಡಿಸಿದ ಯಾವುದೇ ಆದೇಶದಲ್ಲಿ ಯಾವ ಹೆಸರನ್ನು ನಿರ್ದಿಷ್ಟಪಡಿಸಲಾಗಿದೆಯೋ ಆ ತೆರಿಗೆ ಕೊಡುವವನಿಗೆ ಸಂಬಂಧಿಸಿ "ವ್ಯವಹರಣೆಗಳು''

ಎಂದರೆ, ಯಾವುದೇ ವರ್ಷಕ್ಕೆ ಸಂಬಂಧಿಸಿದ ಅಂಥ ಆದೇಶದ ದಿನಾಂಕದಂದು ಇತ್ಯರ್ಥದಲ್ಲಿರಬಹುದಾದ ಅಥವಾ ಅಂಥ ದಿನಾಂಕದಂದು ಅಥವಾ ಅದಕ್ಕೆ ಮುಂದೆ ಮುಕ್ತಾಯವಾಗಿರಬಹುದಾದ, ಈ ಅಧಿನಿಯಮದ ಮೇರೆಗಿನ ಎಲ್ಲ ವ್ಯವಹರಣೆಗಳು ಮತ್ತು ಅಂಥ ತೆರಿಗೆ ಕೊಡುವವನಿಗೆ ಸಂಬಂಧಿಸಿ ಯಾವುದೇ ವರ್ಷದ ಬಗ್ಗೆ ಅಂಥ ಆದೇಶದ ದಿನಾಂಕದ ಅನಂತರ ಪ್ರಾರಂಭವಾಗಬಹುದಾದ, ಈ ಅಧಿನಿಯಮದ ಮೇರೆಗಿನ ಎಲ್ಲ ವ್ಯವಹರಣೆಗಳನ್ನು ಸಹ ಒಳಗೊಳ್ಳುತ್ತವೆ.

**26. ಅಪರಾಧಗಳ ರಾಜಿ.-** (1) ನಿಯಮಿಸಬಹುದಾದಂಥ ಷರತ್ತುಗಳಿಗೊಳಪಟ್ಟು ತೆರಿಗೆ ನಿರ್ಧರಣಾ ಪ್ರಾಧಿಕಾರವು [1][ಅಥವಾ 21ನೇ ಪ್ರಕರಣದಡಿಯಲ್ಲಿ ಅಧಿಕೃತನಾದ ಅಧಿಕಾರಿಯು][1] ಪ್ರಾಸಿಕ್ಯೂಷನ್ನನ್ನು ಹೂಡುವ ಮುಂಚೆಯಾಗಲಿ ಅಥವಾ ಅನಂತರವಾಗಲಿ, ಅಪರಾಧಕ್ಕಾಗಿ ಆರೋಪಿತನಾದ ಯಾವನೇ ವ್ಯಕ್ತಿಗೆ, ತೆರಿಗೆ ನಿರ್ಧರಣಾ ಪ್ರಾಧಿಕಾರವು ನಿರ್ಧರಿಸಬಹುದಾದಂತೆ, ಆ ಅಪರಾಧಕ್ಕೆ ಸಂಬಂಧಿಸಿದ ತೆರಿಗೆಯ ಮೊಬಲಗಿನ ಎರಡರಷ್ಟನ್ನು ಸಂದಾಯ ಮಾಡಿದ ಮೇಲೆ ಆ ಅಪರಾಧದ ಬಗ್ಗೆ ರಾಜಿ ಮಾಡಿಕೊಳ್ಳಲು ಅನುಮತಿಯನ್ನು ಕೊಡಬಹುದು.

1. 2009ರ ಅಧಿನಿಯಮ ಸಂಖ್ಯೆ 7ರ ಮೂಲಕ ದಿನಾಂಕ: 01.04.2009 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(2) (1)ನೇ ಉಪಪ್ರಕರಣದ ಮೇರಗೆ ತೆರಿಗೆ ನಿರ್ಧರಣಾ ಪ್ರಾಧಿಕಾರವು ನಿರ್ಧರಿಸಬಹುದಾದಂಥ ಮೊಬಲಗನ್ನು ಸಂದಾಯ ಮಾಡಿದ ಮೇಲೆ, ಅದೇ ಅಪರಾಧದ ಬಗ್ಗೆ ಆ ವ್ಯಕ್ತಿಯ ವಿರುದ್ಧ ಯಾವ ಹೆಚ್ಚಿನ ವ್ಯವಹರಣೆಗಳನ್ನು ನಡೆಸತಕ್ಕುದಲ್ಲ.

**27. ಹಾಜರಾತಿ, ಇತ್ಯಾದಿಗಳನ್ನು ಒತ್ತಾಯಪಡಿಸುವ ಅಧಿಕಾರ.-** ಈ ಅಧಿನಿಯಮದ ಮೇರೆಗಿನ ಎಲ್ಲ ಪ್ರಾಧಿಕಾರಗಳು, ಈ ಅಧಿನಿಯಮದ ಉದ್ದೇಶಗಳಿಗಾಗಿ ಯಾವನೇ ವ್ಯಕ್ತಿಯ ಹಾಜರಾತಿಯನ್ನು ಒತ್ತಾಪಡಿಸುವುದಕ್ಕೆ ಮತ್ತು ಅವನನ್ನು ಪ್ರಮಾಣದ ಮೇಲೆ ಅಥವಾ ಪ್ರತಿಜ್ಞಾ ವಚನದ ಮೇಲೆ ಪರೀಕ್ಷಿಸುವುದಕ್ಕೆ ಅಥವಾ ಯಾವುದೇ ದಸ್ತಾವೇಜನ್ನು ಹಾಜರುಪಡಿಸಲು ಒತ್ತಾಯಿಸುವುದಕ್ಕೆ ಸಂಬಂಧಿಸಿದ ದಾವೆಯನ್ನು ಅಧಿವಿಚಾರಣೆ ಮಾಡುವಾಗ ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರ ಮೇರೆಗೆ ನ್ಯಾಯಾಲಯದಲ್ಲಿ ನಿಹಿತವಾಗಿರುವಂಥದೇ ಅಧಿಕಾರಗಳನ್ನು ಹೊಂದಿರತಕ್ಕದು.

**28. ದಾವೆ ಇತ್ಯಾದಿಗಳಿಗೆ ಪ್ರತಿಷೇಧ.-** (1) ಈ ಅಧಿನಿಯಮದ ಮೇರೆಗೆ ಮಾಡಿದ ಯಾವುದೇ ತೆರಿಗೆ ನಿರ್ಧರಣೆಯನ್ನು ಅಥವಾ ಆದೇಶವನ್ನು ತಳ್ಳಿಹಾಕಲು ಅಥವಾ ಮಾರ್ಪಾಡಿಸಲು ಯಾವುದೇ ಸಿವಿಲ್ ನ್ಯಾಯಾಲಯದಲ್ಲಿ ಯಾವ ದಾವೆಯನ್ನು ಹೂಡಲು ಅವಕಾಶವಿರತಕ್ಕುದಲ್ಲ.

(2) ಈ ಅಧಿನಿಯಮದ ಮೇರೆಗೆ ಅಥವಾ ಅದರ ಮೇರೆಗೆ ರಚಿತವಾದ ನಿಯಮಗಳ ಮೇರೆಗೆ ಸದ್ಭಾವನೆಯಿಂದ ಮಾಡಿದ ಅಥವಾ ಉದ್ದೇಶಿಸಿದ ಯಾವುದೇ ಕಾರ್ಯದ ಬಗ್ಗೆ ಈ ಅಧಿನಿಯಮದ ಮೇರೆಗೆ ಯಾವುದೇ ಪ್ರಾಧಿಕಾರದ ಅಥವಾ ಯಾವನೇ ನಿಯೋಜಿತನ ವಿರುದ್ಧ ಯಾವ ದಾವೆಯನ್ನು, ಪ್ರಾಸಿಕ್ಯೂಷನನ್ನು ಅಥವಾ ಇತರ ಕಾನೂನು ವ್ಯವಹರಣೆಗಳನ್ನು ಹೂಡಲು ಅವಕಾಶವಿರತಕ್ಕದಲ್ಲ.

[1][**28ಎ. ವ್ಯವಹರಣೆಗಳಲ್ಲಿ ಯಾವುದೇ ಪ್ರಾಧಿಕಾರದ ಮುಂದೆ ಹಾಜರಾಗುವುದು.-** ಈ ಅಧಿನಿಯಮದ ಅಡಿಯಲ್ಲಿ ಯಾವುದೇ ವ್ಯವಹರಣೆಗಳಿಗೆ ಸಂಬಂಧಿಸಿದಂತೆ ಉಚ್ಚ ನ್ಯಾಯಲಯವನ್ನು ಹೊರತುಪಡಿಸಿ, ಯಾವುದೇ ಪ್ರಾಧಿಕಾರದ ಮುಂದೆ ಹಾಜರಾಗಲು ಹಕ್ಕುಳ್ಳ ಯಾರೇ ವ್ಯಕ್ತಿಯು,-

(ಎ) ಒಬ್ಬ ನ್ಯಾಯವಾದಿಯ ಮೂಲಕ; ಅಥವಾ

(ಬಿ) ಒಬ್ಬ ಚಾರ್ಟರ್ಡ್ ಅಕೌಂಟೆಂಟ್ ಮೂಲಕ; ಅಥವಾ

(ಸಿ) ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮ, 1957 (1957ರ ಕರ್ನಾಟಕ ಆಧಿನಿಯಮ ಸಂಖ್ಯೆ 25)ರ ಅಡಿಯಲ್ಲಿ ಹಾಗೆ ದಾಖಲಾದ ಒಬ್ಬ ಮಾರಾಟ ತೆರಿಗೆ ವೃತ್ತಿಗನ ಮೂಲಕ ಅಂಥ ಪ್ರಾಧಿಕಾರದ ಮುಂದೆ ನಿವೇದಿಸಿಕೊಳ್ಳಬಹುದು.][1]

1. 1985ರ ಅಧಿನಿಯಮ ಸಂಖ್ಯೆ 1ರ ಮೂಲಕ ದಿನಾಂಕ: 09.01.1985 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**29. ವಿನಾಯಿತಿಗೆ ಅಧಿಕಾರ.-** [1][(1)][1] ರಾಜ್ಯ ಸರ್ಕಾರವು, ಅಧಿಸೂಚನೆ ಮೂಲಕ, ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ನಿರ್ಬಂಧಗಳಿಗೆ ಮತ್ತು ಷರತ್ತುಗಳಿಗೊಳಪಟ್ಟು ನಿರ್ದಿಷ್ಟಪಡಿಸಿದ ಯಾವುದೇ ವರ್ಗದ ವ್ಯಕ್ತಿಗಳು ಸಂದಾಯ ಮಾಡಬೇಕಾದ ತೆರಿಗೆಯ ದರದಲ್ಲಿ ವಿನಾಯಿತಿ ಕೊಡಬಹುದು ಅಥವಾ ಕಡಿಮೆ ಮಾಡಬಹುದು.

1. 1994ರ ಅಧಿನಿಯಮ ಸಂಖ್ಯೆ 18ರ ಮೂಲಕ ದಿನಾಂಕ: 01.04.1994 ರಿಂದ ಜಾರಿಗೆ ಬರುವಂತೆ ಮರು ಸಂಖ್ಯೆ ಕೊಡಲಾಗಿದೆ.

[1][(2) ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ, (1)ನೇ ಉಪ ಪ್ರಕರಣದ ಮೇರೆಗೆ ನೀಡಲಾದ/ ಹೊರಡಿಸಿಲಾದ ಅಧಿಸೂಚನೆಯನ್ನು ರದ್ದುಗೊಳಿಸಬಹುದು ಅಥವಾ ವ್ಯತ್ಯಸ್ಥಗೊಳಿಸಬಹುದು.

(3) ಉಪಪ್ರಕರಣ (1)ರ ಮೇರೆಗೆ ಹೊರಡಿಸಲಾದ ಯಾವುದೇ ಅಧಿಸೂಚನೆಯನ್ನು ನಿರ್ದಿಷ್ಟಪಡಿಸಿದ ಯಾವುದೇ ವರ್ಗದ ವ್ಯಕ್ತಿಗಳಿಗೆ ಸಂಬಂಧಿಸಿದಂತೆ ಅಂಥ ಅಧಿಸೂಚನೆಗೆ ಅನುಸಾರವಾಗಿ, ಸಂದಾಯ ಮಾಡಬೇಕಾದ ತೆರಿಗೆಯನ್ನು ಈ ಅಧಿನಿಯಮದ ತಿದ್ದುಪಡಿ ಮೂಲಕ ಮಾರ್ಪಾಡುಗೊಳಿಸಿದರೂ ಸಹ, (2)ನೇ ಉಪ ಪ್ರಕರಣದ ಮೇರೆಗೆ ಅದು ರದ್ದಾಗುವವರೆಗೂ ಸಿಂಧುವಾಗಿರತಕ್ಕದ್ದು.][1]

1. 1994ರ ಅಧಿನಿಯಮ ಸಂಖ್ಯೆ 18ರ ಮೂಲಕ ದಿನಾಂಕ: 01.04.1994 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**30. ಸ್ಥಳೀಯ ಪ್ರಾಧಿಕಾರಗಳು ವೃತ್ತಿ ತೆರಿಗೆಯನ್ನು ವಿಧಿಸತಕ್ಕದ್ದಲ್ಲ.-** (1) ಸ್ಥಳೀಯ ಪ್ರಾಧಿಕಾರದ ರಚನೆಯನ್ನು ಅಥವಾ ಸ್ಥಾಪನೆಯನ್ನು ನಿಯಂತ್ರಿಸುವ ಯಾವುದೇ ಅಧಿನಿಯಮದಲ್ಲಿ ಏನೇ ಇದ್ದರೂ, ಈ ಅಧಿನಿಯಮದ ಪ್ರಾರಂಭದಂದು ಮತ್ತು ಅನಂತರ, ವೃತ್ತಿಗಳ, ಕಸಬುಗಳ, ಆಜೀವಿಕೆಗಳ ಮತ್ತು ಉದ್ಯೋಗಗಳ ಮೇಲೆ ಯಾವುದೇ ಸ್ಥಳೀಯ ಪ್ರಾಧಿಕಾರವು ಯಾವುದೇ ತೆರಿಗೆಯನ್ನು ವಿಧಿಸತಕ್ಕುದಲ್ಲ.

(2) ಅಂಥ ತೆರಿಗೆಯನ್ನು ವಿಧಿಸಲು ಸ್ಥಳೀಯ ಪ್ರಾಧಿಕಾರವನ್ನು ಅಧಿಕೃತಗೊಳಿಸುವ ಅಂಥ ಅಧಿನಿಯಮದಲ್ಲಿನ ಉಪಬಂಧಗಳು ನಿರಸಿತವಾಗತಕ್ಕದು.

**ವಿವರಣೆ.**- ಈ ಪ್ರಕರಣದ ಉದ್ದೇಶಗಳಿಗಾಗಿ ``ಸ್ಥಳೀಯ ಪ್ರಾಧಿಕಾರ'' ಎಂದರೆ, ರಾಜ್ಯದಲ್ಲಿ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೂಲಕ ಅಥವಾ ಮೇರೆಗೆ ಸ್ಥಾಪಿತವಾದ ಪೌರಸಭಾ ನಿಗಮ, ಪುರಸಭೆ ಅಥವಾ [1][ಗ್ರಾಮ ಪಂಚಾಯತ್][1].

1. 1982ರ ಅಧಿನಿಯಮ ಸಂಖ್ಯೆ 26ರ ಮೂಲಕ ದಿನಾಂಕ: 27.07.1982 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**31. ಕೆಲವು ಸಂದರ್ಭಗಳಲ್ಲಿ ಉಪಕರಣಗಳನ್ನು ವಿಧಿಸತಕ್ಕುದಲ್ಲ.-** ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಇದ್ದರೂ, ವೃತ್ತಿಗಳ, ಕಸಬುಗಳ, ಆಜೀವಿಕೆಗಳ ಮತ್ತು ಉದ್ಯೋಗಗಳ ತೆರಿಗೆಯ ಮೇಲೆ ಯಾವ ಉಪಕರವನ್ನೂ ವಿಧಿಸತಕ್ಕುದಲ್ಲ ಮತ್ತು ಹಾಗೆ ವಿಧಿಸುವುದನ್ನು ಮತ್ತು ವಸೂಲು ಮಾಡುವುದನ್ನು ಅಧಿಕೃತಗೊಳಿಸುವಂಥ ಕಾನೂನಿನ ಉಪಬಂಧಗಳು, ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಂದು ಮತ್ತು ದಿನಾಂಕದಿಂದ ನಿರಸಿತವಾಗತಕ್ಕದು.

**32. ರಾಜಸ್ವದ ನಷ್ಟಕ್ಕಾಗಿ ಸ್ಥಳೀಯ ಪ್ರಾಧಿಕಾರಗಳಿಗೆ ಅನುದಾನಗಳು.-** ಈ ಅಧಿನಿಯಮದ ಮೇರೆಗೆ ವಸೂಲು ಮಾಡಿದ ತೆರಿಗೆ ಮತ್ತು ದಂಡ ಮತ್ತು ಬಡ್ಡಿ ಮತ್ತು ಫೀಜುಗಳಿಂದ

ಬಂದ ಉತ್ಪತ್ತಿಯಿಂದ ವೃತ್ತಿಗಳ, ಕಸಬುಗಳ, ಆಜೀವಿಕೆಗಳ ಮತ್ತು ಉದ್ಯೋಗಗಳ ಮೇಲೆ ಈ ಅಧಿನಿಯಮವು ಪ್ರಾರಂಭವಾದ ನಿಕಟಪೂರ್ವದಲ್ಲಿ ತೆರಿಗೆಯನ್ನು ವಿಧಿಸುತ್ತಿದಂಥ ಪ್ರಾಧಿಕಾರಗಳಿಗೆ, ಈ ಅಧಿನಿಯಮದ ಪ್ರಾರಂಭದ ನಿಕಟಪೂರ್ವದ ಮೂರು ವರ್ಷಗಳ ಅವಧಿಯ ಯಾವುದೇ ವರ್ಷದಲ್ಲಿ ಅವು ಮಾಡಿದ್ದ ಅತಿ ಹೆಚ್ಚಿನ ವಸೂಲಿಯ ಆಧಾರದ ಮೇಲೆ, ಈ ಬಗ್ಗೆ ರಾಜ್ಯ ಸರ್ಕಾರವು ನಿರ್ಧರಿಸಬಹುದಾದಂಥ ಮೊಬಲಗುಗಳನ್ನು ವಾರ್ಷಿಕವಾಗಿ ಸಂದಾಯ ಮಾಡತಕ್ಕದು.

**33. ನಿಯಮಗಳ ರಚನಾಧಿಕಾರ.-** (1) ರಾಜ್ಯ ಸರ್ಕಾರವು, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚಿಸುವ ಮೂಲಕ ಮತ್ತು ಪೂರ್ವಪ್ರಕಟಣೆಯ ಅನಂತರ, ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು:

ಪರಂತು, ಶೀಘ್ರ ಕ್ರಮ ಕೈಗೊಳ್ಳುವುದನ್ನು ಅವಶ್ಯಗೊಳಿಸುವ ವಿದ್ಯಮಾನಗಳು ಉಂಟಾಗಿವೆ ಎಂದು ರಾಜ್ಯಸರ್ಕಾರಕ್ಕೆ ಮನದಟ್ಟಾದರೆ, ಈ ಅಧಿನಿಯಮದ ಮೇರೆಗೆ ರಚಿಸಬೇಕಾದ ಯಾವುದೇ ನಿಯಮಗಳ ಪೂರ್ವಪ್ರಕಟಣೆಯನ್ನು ಬಿಟ್ಟುಬಿಡಬಹುದು.

(2) ಹಿಂದೆ ಹೇಳಿದ ಅಧಿಕಾರದ ಸಾಮಾನ್ಯನ್ವಯಕ್ಕೆ ಭಾದಕಬಾರದಂತೆ ಈ ಅಧಿನಿಯಮದ ಮೇರೆಗೆ ಸಲ್ಲಿಸಬೇಕಾದ ಯಾವುದೇ ಅರ್ಜಿಗಳಿಗೆ ಸಂಬಂಧಿಸಿ ಸಂದಾಯ ಮಾಡಬೇಕಾದ ಫೀಜುಗಳ ಬಗ್ಗೆ, ಸರಬರಾಜು ಮಾಡಬೇಕಾದ ನಮೂನೆಗಳ ಬಗ್ಗೆ, ಕೊಡಬೇಕಾದ ಪ್ರಮಾಣಪತ್ರಗಳ ಬಗ್ಗೆ ಮತ್ತು ಸಲ್ಲಿಸಬೇಕಾದ ಅಪೀಲುಗಳ ಮತ್ತು ಪುನರೀಕ್ಷಣಾ ಅರ್ಜಿಗಳ ಬಗ್ಗೆ ಅಂಥ ನಿಯಮಗಳನ್ನು ಉಪಬಂಧಿಸಬಹುದು.

(3) ಈ ಅಧಿನಿಯಮದ ಮೇರೆಗೆ ರಚಿತವಾದ ಪ್ರತಿಯೊಂದು ನಿಯಮವನ್ನು ಅದು ರಚಿತವಾದ ಅನಂತರ ಆದಷ್ಟುಬೇಗನೆ ರಾಜ್ಯವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದು ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಇರಿಸತಕ್ಕದು ಮತ್ತು ಅದನ್ನು ಇರಿಸಲಾದ ಅಧಿವೇಶವನು ಅಥವಾ ಅದರ ನಿಕಟ ತರುವಾಯದ ಅಧಿವೇಶನಗಳು ಮುಗಿಯುವ ಮುಂಚೆ ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಲು ಎರಡೂ ಸದನಗಳು ಒಪ್ಪಿದರೆ, ಅಥವಾ ಆ ನಿಯಮಗಳನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಅಂಥ ತೀರ್ಮಾನವನ್ನು ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚಿತಕ್ಕದು ಮತ್ತು ಆ ನಿಯಮವು ಆ ಅಧಿಸೂಚನೆಯು ಪ್ರಕಟವಾದ ದಿನಾಂಕದಿಂದ, ಸಂದರ್ಭಾನುಸಾರ, ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದು ಅಥವಾ ಪರಿಣಾಮಕಾರಿಯಾಗತಕ್ಕುದಲ್ಲ; ಆದರೆ ಅಂಥ ಯಾವುದೇ ಮಾರ್ಪಾಟು ಅಥವಾ ಶೂನ್ಯತೆಯು ಆ ನಿಯಮದ ಮೇರೆಗೆ ಹಿಂದೆ ಮಾಡಿದ ಅಥವಾ ಮಾಡದೆ ಬಿಟ್ಟ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವಾಗದಂತೆ ಇರತಕ್ಕದು.

**34. ತೊಂದರೆಗಳನ್ನು ನಿವಾರಿಸುವ ಅಧಿಕಾರ.-** ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವಲ್ಲಿ ಯಾವುದೇ ತೊಂದರೆಯು ಉದ್ಭವಿಸಿದರೆ ರಾಜ್ಯ ಸರ್ಕಾರವು, ಆ ತೊಂದರೆಯನ್ನು ನಿವಾರಿಸುವುದಕ್ಕೆ ಅವಶ್ಯಕವೆಂದು ಅಥವಾ ವಿಹಿತವೆಂದು ತನಗೆ ಕಂಡುಬಂದ, ಈ ಅಧಿನಿಯಮಕ್ಕೆ ಅಸಂಗತವಾಗಿರದಂಥ ಉಪಬಂಧಗಳನ್ನು, ಅಧಿಸೂಚನೆಯ ಮೂಲಕ ಮಾಡಬಹುದು.

## [7][ [1][ಅನುಸೂಚಿ

[ಪ್ರಕರಣ 3(2)ನ್ನು ನೋಡಿ)]

## ವೃತ್ತಿಗಳ, ಕಸಬುಗಳ, ಆಜೀವಿಕೆಗಳ ಮತ್ತು ಉದ್ಯೋಗಗಳ ಮೇಲಿನ ತೆರಿಗೆಯ ದರಗಳು

[6][ [5][ [4][ [3][ [2]

| ಕ್ರಮ ಸಂಖ್ಯೆ | ವ್ಯಕ್ತಿಗಳ ವರ್ಗ | ತೆರಿಗೆಯ ದರ |
|---|---|---|
| (1) | (2) | (3) |
| 1. | ಒಂದು ತಿಂಗಳಿಗೆ ರೂ.25,000-00 ಮತ್ತು ಹೆಚ್ಚಿನ ಸಂದರ್ಭಾನುಸಾರವಾಗಿ, ಸಂಬಳ ಅಥವಾ ಮಜೂರಿಯನ್ನು ಅಥವಾ ಇವೆರಡನ್ನೂ ಪಡೆಯುವ ವ್ಯಕ್ತಿಗಳು. | ತಿಂಗಳಿಗೆ ರೂ. 200-00 |
| 2. | ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರಡಿಯಲ್ಲಿ ನೋಂದಾಯಿಸಿದ ಅಥವಾ ನೋಂದಣಿ ಪಡೆಯಲು ಬಾಧ್ಯರಾಗಿರುವ ವ್ಯಕ್ತಿಗಳು. | ವರ್ಷಕ್ಕೆ ರೂ.2,500-00 |
| 3. | ನ್ಯಾಯವಾದಿಗಳು, ಸಮಾಲೋಚಕರು, ಏಜೆಂಟರು, ಚಾರ್ಟರ್ಡ್ ಅಕೌಂಟೆಂಟ್‌ಗಳು ಮತ್ತು ವಿಮಾಗಣಕರು, ಇಂಜಿನಿಯರುಗಳು, ಆರೋಗ್ಯಪಾಲನಾ ವೃತ್ತಿಪರರು, ಎಸ್ಟೇಟ್ ಏಜೆಂಟರುಗಳು ಅಥವಾ ದಳ್ಳಾಳಿಗಳು, ಬ್ಯೂಟಿ ಪಾರ್ಲರ್‌ಗಳು, ಡ್ರೈಕ್ಲೀನರ್‌ಗಳು ಮತ್ತು ಆಂತರಿಕ ವಿನ್ಯಾಸಕಾರರು, ಪತ್ರಕರ್ತರು ಮತ್ತು ಜಾಹೀರಾತು ಏಜೆನ್ಸಿಗಳು, ಡಿಶ್ ಆಂಟೆನಾ ಕೇಬಲ್ ಟಿವಿ ಬಳಸಿ ಮನರಂಜನೆಯನ್ನು ಒದಗಿಸುವವರು, ಅವಧಿ ಕಾಲ ಬಳಕೆ ಮಾರಾಟದ ಗಣಕಯಂತ್ರ ಸಂಸ್ಥೆಗಳು, ಗಣಕಯಂತ್ರ ತರಬೇತಿ ಸಂಸ್ಥೆಗಳು/ಚಾಲನಾ ಸಂಸ್ಥೆಗಳು/ ತಾಂತ್ರಿಕ ತರಬೇತಿ ಸಂಸ್ಥೆಗಳು, ಜ್ಯೋತಿಷಿಗಳು, ಹಸ್ತ ಸಾಮುದ್ರಿಕ ಶಾಸ್ತ್ರಜ್ಞರು, ಸಂಖ್ಯಾ ಶಾಸ್ತ್ರಜ್ಞರು, ವಾಸ್ತು ಸಲಹೆಗಾರರು ಮತ್ತು ನಂಬಿಕೆಯಾಧಾರಿತ ಚಿಕಿತ್ಸಕರನ್ನು ಒಳಗೊಂಡಂತೆ ವೃತ್ತಿಗಳು, ಕಸಬುಗಳು, ಆಜೀವಿಕೆಗಳು ಮತ್ತು ಉದ್ಯೋಗಗಳಲ್ಲಿ, 2 ವರ್ಷಗಳಿಗಿಂತ ಹೆಚ್ಚು ಕಾಲ ತೊಡಗಿಸಿಕೊಂಡಿರುವ ಸ್ವಯಂ ಉದ್ಯೋಗಿ ವ್ಯಕ್ತಿಗಳು. | ವರ್ಷಕ್ಕೆ ರೂ. 2,500-00 |
| 4. | ಕುದುರೆಗಳ ಮಾಲೀಕರು ಮತ್ತು ತರಬೇತಿದಾರರು, ಜಾಕಿಗಳು, ನಿರ್ದೇಶಕರು, ನಟ ಮತ್ತು ನಟಿಯರು (ಕಿರಿಯ ಕಲಾವಿದರನ್ನು ಹೊರತುಪಡಿಸಿ), ಆಯಿಲ್ ಪಂಪ್‌ಗಳು ಮತ್ತು ಸೇವಾ ಕೇಂದ್ರಗಳು, ಗ್ಯಾಸ್ ಸ್ಟೇಷನ್‌ಗಳು, ಎಲೆಕ್ಟ್ರಿಕ್ ಚಾರ್ಜಿಂಗ್ ಸ್ಟೇಷನ್‌ಗಳು, ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಮತ್ತು ಸ್ಥಳೀಯ ಸಂಸ್ಥೆಗಳು ನಡೆಸುತ್ತಿರುವುದನ್ನು ಹೊರತುಪಡಿಸಿದ ನರ್ಸಿಂಗ್ ಹೋಮ್‌ಗಳು, ಆಸ್ಪತ್ರೆಗಳು, ರೋಗಪತ್ತೆ ಕೇಂದ್ರಗಳು, ಕ್ಲಿನಿಕಲ್ ಲ್ಯಾಬೋರೇಟರಿಗಳು ಮತ್ತು ಎಕ್ಸ್‌ರೇ ಕ್ಲಿನಿಕ್‌ಗಳ ಮಾಲೀಕರು, ದೈಹಿಕ ವ್ಯಾಯಾಮ ಮತ್ತು ಸುಸ್ಥಿತಿ ಕೇಂದ್ರಗಳ ಮಾಲೀಕರು. | ವರ್ಷಕ್ಕೆ ರೂ.2,500-00 |
| 5. | ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಮತ್ತು ಸ್ಥಳೀಯ | |

| | | |
|---|---|---|
| | ಸಂಸ್ಥೆಗಳು ನಡೆಸುತ್ತಿರುವುದನ್ನು ಹೊರತುಪಡಿಸಿದ ಶಿಕ್ಷಣ ಸಂಸ್ಥೆಗಳು ಮತ್ತು ಟ್ಯೂಟೋರಿಯಲ್ ಕಾಲೇಜುಗಳು ಅಥವಾ ಸಂಸ್ಥೆಗಳು. | ವರ್ಷಕ್ಕೆ ರೂ.2,500-00 |
| 6. | ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಸಂಸ್ಥೆಗಳ ಅಧಿನಿಯಮ, 1961ರ ಅಡಿಯಲ್ಲಿ ಪರಿಭಾಷಿಸಲಾದ ಐದಕ್ಕಿಂತ ಹೆಚ್ಚು ಉದ್ಯೋಗಿಗಳನ್ನು ನೇಮಿಸಿಕೊಂಡಿರುವ ಸಂಸ್ಥೆಗಳ ಉದ್ಯೋಗದಾತರು. | ವರ್ಷಕ್ಕೆ ರೂ.2,500-00 |
| 7. | ಪರವಾನಗಿ ಪಡೆದ ಮದ್ಯ ಮಾರಾಟಗಾರರು, ಕರ್ನಾಟಕ ಲೇವಾದೇವಿದಾರರ ಅಧಿನಿಯಮ, 1961ರಡಿಯಲ್ಲಿ ಪರವಾನಗಿ ಪಡೆದ ಲೇವಾದೇವಿದಾರರು, ಚಿಟ್‌ಫಂಡ್ ನಡೆಸುತ್ತಿರುವ ವ್ಯಕ್ತಿಗಳು ಅಥವಾ ಸಂಸ್ಥೆಗಳು. | ವರ್ಷಕ್ಕೆ ರೂ.2,500-00 |
| 8. | ಮೋಟಾರು ವಾಹನಗಳ ಅಧಿನಿಯಮ, 1988 (1988ರ ಕೇಂದ್ರ ಅಧಿನಿಯಮ 59) ರಡಿಯಲ್ಲಿ ಸ್ವಂತ ಅಥವಾ ಬಾಡಿಗೆಗೆ ಉಪಯೋಗಿಸಲಾಗುವ, ಸಾರಿಗೆ ವಾಹನಗಳ ಕೊಡಲಾದ ಪರ್ಮಿಟ್ಟುಗಳನ್ನು ಹೊಂದಿರುವ, ಸಾರಿಗೆ ವಾಹನಗಳ ಮಾಲೀಕರು (ಆಟೋ ರಿಕ್ಷಾಗಳನ್ನು ಹೊರತುಪಡಿಸಿ); ಸರಕು ಸಾರಿಗೆ ಏಜೆನ್ಸಿಗಳು (ಜಿಟಿಎ) ಮತ್ತು ಫಾರ್‌ವರ್ಡಿಂಗ್ ಅಂಡ್ ಕ್ಲಿಯರಿಂಗ್ ಏಜೆಂಟರನ್ನು ಒಳಗೊಂಡಂತೆ ಸಾರಿಗೆ ಗುತ್ತಿಗೆದಾರರು.<br>**ವಿವರಣೆ.–** ಈ ನಮೂದಿನ ಉದ್ದೇಶಕ್ಕಾಗಿ, ಸರಕು ಸಾರಿಗೆ ಏಜೆನ್ಸಿ ಅಥವಾ ಜಿಟಿಎ ಎಂದರೆ ರಸ್ತೆಯ ಮೂಲಕ ಸರಕುಗಳ ಸಾಗಾಣಿಕೆಗೆ ಸಂಬಂಧಿಸಿದಂತೆ, ಸೇವೆಯನ್ನು ಒದಗಿಸುವ ಮತ್ತು ಯಾವುದೇ ಹೆಸರಿನಿಂದ ಕರೆಯಲಾಗುವ ಸರಕು ರವಾನೆ ಪತ್ರವನ್ನು ನೀಡುವ ಯಾವುದೇ ವ್ಯಕ್ತಿ. | ವರ್ಷಕ್ಕೆ ರೂ.2,500-00 |
| 9. | ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959 (1959ರ ಕರ್ನಾಟಕ ಅಧಿನಿಯಮ 11) ಮೇರೆಗೆ ನೋಂದಾಯಿಸಲಾದ ಸಹಕಾರಿ ಸಂಘಗಳು ಮತ್ತು ಯಾವುದೇ ವೃತ್ತಿ, ಕಸಬು ಅಥವಾ ಆಜೀವಿಕೆಯಲ್ಲಿ ತೊಡಗಿರುವವರು. | ವರ್ಷಕ್ಕೆ ರೂ.2,500-00 |
| 10. | ಕಂಪನಿಗಳ ಅಧಿನಿಯಮ, 2013ರ (2013ರ ಕೇಂದ್ರ ಅಧಿನಿಯಮ 18) ಮೇರೆಗೆ ನೋಂದಾಯಿಸಲಾದ ಮತ್ತು ಯಾವುದೇ ವೃತ್ತಿ, ಕಸಬು ಅಥವಾ ಆಜೀವಿಕೆಯಲ್ಲಿ ತೊಡಗಿರುವ ಕಂಪನಿಗಳು; ಬ್ಯಾಂಕಿಂಗ್ ನಿಯಂತ್ರಣದ ಅಧಿನಿಯಮ, 1949ರಲ್ಲಿ ಪರಿಭಾಷಿಸಲಾದ ಬ್ಯಾಂಕಿಂಗ್ ಕಂಪನಿಗಳು.<br>**ವಿವರಣೆ.-** ಈ ನಮೂದಿನ ಉದ್ದೇಶಕ್ಕಾಗಿ, 'ಬ್ಯಾಂಕಿಂಗ್ ಕಂಪನಿಗಳು' ಎಂದರೆ, ಬ್ಯಾಂಕಿಂಗ್ ನಿಯಂತ್ರಣ ಅಧಿನಿಯಮ, 1949 (1949ರ ಕೇಂದ್ರ ಅಧಿನಿಯಮ 10)ರ ಉಪಬಂಧದ ಮೂಲಕ ಕಾರ್ಯಾಚರಣೆಯನ್ನು ನಿರ್ವಹಿಸುವ ಯಾವುದೇ ಬ್ಯಾಂಕನ್ನು ಒಳಗೊಳ್ಳುವುದು. | ವರ್ಷಕ್ಕೆ ರೂ.2,500-00 |
| 11. | ಹಿಂದಿನ ಯಾವುದೇ ನಮೂದಿನಲ್ಲಿ ನಮೂದಿಸಿರುವ ವ್ಯಕ್ತಿಗಳನ್ನು ಹೊರತುಪಡಿಸಿ, ಯಾವುದೇ ವೃತ್ತಿ, ಕಸಬು, ಆಜೀವಿಕೆ ಅಥವಾ ಉದ್ಯೋಗದಲ್ಲಿ ನಿರತರಾಗಿರುವ ಮತ್ತು ಆದಾಯ ತೆರಿಗೆ ಅಧಿನಿಯಮ, | ವರ್ಷಕ್ಕೆ ರೂ.2,500-00 |

| | | |
|---|---|---|
| | 1961 (1961ರ ಕೇಂದ್ರ ಅಧಿನಿಯಮ 43)ರ ಅಡಿಯಲ್ಲಿ ತೆರಿಗೆ ಪಾವತಿಸುವ ವ್ಯಕ್ತಿಗಳು | |
| 12. | ಯಾವುದೇ ವೃತ್ತಿ, ಕಸಬು, ಆಜೀವಿಕೆ ಅಥವಾ ಉದ್ಯೋಗದಲ್ಲಿ ನಿರತರಾಗಿರುವ ಹಿಂದಿನ ಯಾವುದೇ ನಮೂದಿನಲ್ಲಿ ನಮೂದಿಸಿರುವ ವ್ಯಕ್ತಿಗಳನ್ನು ಹೊರತುಪಡಿಸಿ, ಕನಿಷ್ಠ ಎರಡು ವರ್ಷಗಳ ಕಾಲಾವಧಿಯೊಂದಿಗೆ ಮತ್ತು ರಾಜ್ಯ ಸರ್ಕಾರವು ಕಾಲಕಾಲಕ್ಕೆ ಹೊರಡಿಸಿದ ಅಧಿಸೂಚನೆಯಲ್ಲಿ ವಿನಾಯಿತಿಯನ್ನು ಪಡೆಯದಿರುವ ವ್ಯಕ್ತಿಗಳು. | ವರ್ಷಕ್ಕೆ ರೂ.2,500-00 |

**ವಿವರಣೆ I.-** ಈ ಅನುಸೂಚಿಯಲ್ಲಿ ಏನೇ ಇದ್ದರೂ, ಒಬ್ಬ ವ್ಯಕ್ತಿಯು ಅನುಸೂಚಿಯಲ್ಲಿ ಒಂದಕ್ಕಿಂತ ಹೆಚ್ಚು ನಮೂದುಗಳಲ್ಲಿ ಸೇರಿದ್ದರೆ, ಅಂತಹ ಯಾವುದೇ ಒಂದು ನಮೂದಿನ ಅಡಿಯಲ್ಲಿ ತೆರಿಗೆಯನ್ನು ಪಾವತಿಸತಕ್ಕದ್ದು.

**ವಿವರಣೆ II.-** ಈ ಅನುಸೂಚಿಯಲ್ಲಿ 4ನೇ ಕ್ರಮ ಸಂಖ್ಯೆಯ ಪ್ರಕಾರ ತೆರಿಗೆಯ ಹೊಣೆಗಾರಿಕೆಯನ್ನು ನಿರ್ಧರಿಸುವ ಉದ್ದೇಶಗಳಿಗಾಗಿ, ವರ್ಷದ ಯಾವುದೇ ಸಮಯದಲ್ಲಿರುವ ಕೆಲಸಗಾರರ ಮತ್ತು/ಅಥವಾ ಉದ್ಯೋಗಿಗಳ ಅತ್ಯಂತ ಹೆಚ್ಚಿನ ಸಂಖ್ಯೆಯ ಆಧಾರವೆಂಬುದಾಗಿ ಪರಿಗಣಿಸತಕ್ಕದ್ದು.

**ವಿವರಣೆ III.-** ಈ ಅನುಸೂಚಿಯ ಉದ್ದೇಶಗಳಿಗಾಗಿ, ಯಾವುದೇ ಆಸ್ತಿಯನ್ನು ಅಥವಾ ವ್ಯವಹಾರವನ್ನು, ಗುತ್ತಿಗೆದಾರರನ್ನು ಗುತ್ತಿಗೆಗೆ ಪಡೆದಿದ್ದಲ್ಲಿ ಅಂಥ ಗುತ್ತಿಗೆದಾರನು ಈ ಅಧಿನಿಯಮದಡಿಯಲ್ಲಿ ಹೊಣೆಗಾರನಾದ ವ್ಯಕ್ತಿ ಎಂದು ಭಾವಿಸತಕ್ಕದ್ದು.

**ವಿವರಣೆ IV.-** ಯಾವುದೇ ವೃತ್ತಿ, ಕಸಬು ಅಥವಾ ಆಜೀವಿಕೆಯಲ್ಲಿ ತೊಡಗಿರುವ ಸಂಸ್ಥೆಯ ಯಾವುದೇ ಪಾಲುದಾರರ ಮೇಲೆ, ಅಂತಹ ಸಂಸ್ಥೆಯು ತೆರಿಗೆಯನ್ನು ಪಾವತಿಸಿದ್ದರೆ, ಈ ಅಧಿನಿಯಮದ ಅಡಿಯಲ್ಲಿ ಯಾವುದೇ ತೆರಿಗೆಯನ್ನು ವಿಧಿಸತಕ್ಕದ್ದಲ್ಲ.

**ವಿವರಣೆ V.-** ಈ ಅನುಸೂಚಿಯಲ್ಲಿ ಏನೇ ಒಳಗೊಂಡಿದ್ದರೂ, ಅನುಸೂಚಿಯ ಯಾವುದೇ ಅಂಶದಲ್ಲಿ ನಮೂದಿಸಲಾದ ವ್ಯಕ್ತಿಯ ಪ್ರತಿಯೊಂದು ಹೆಚ್ಚುವರಿ ಸ್ಥಳವನ್ನು, ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ವೃತ್ತಿ ತೆರಿಗೆಯನ್ನು ವಿಧಿಸುವ ಉದ್ದೇಶಕ್ಕಾಗಿ, ಪ್ರತ್ಯೇಕ ವ್ಯಕ್ತಿ ಎಂದು ಭಾವಿಸತಕ್ಕದ್ದು ಮತ್ತು ಸರಕುಗಳನ್ನು ಸಂಗ್ರಹಿಸಲು ಗೋದಾಮಿನಂತೆ ವಿಶೇಷವಾಗಿ ಬಳಸಲಾಗುವ ಹೆಚ್ಚುವರಿ ವ್ಯವಹಾರ ಸ್ಥಳಗಳ ಸಂದರ್ಭದಲ್ಲಿ ಈ ವಿವರಣೆಯಲ್ಲಿರುವುದಾವುದೂ ಅನ್ವಯವಾಗತಕ್ಕದ್ದಲ್ಲ. ][2]][3]][4]][5]][6]][7]

**ವಿವರಣೆ VI.-** ಈ ಅನುಸೂಚಿಯಲ್ಲಿ ಏನೇ ಒಳಗೊಂಡಿದ್ದರೂ, ಅನುಸೂಚಿಯ ಯಾವುದೇ ಅಂಶದಲ್ಲಿ ನಮೂದಿಸಲಾದ ಯಾವುದೇ ಸ್ವಯಂ ಉದ್ಯೋಗಿ ತೆರಿಗೆದಾರನ ಪ್ರತಿಯೊಂದು ಶಾಖೆಯನ್ನು, ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ವೃತ್ತಿ ತೆರಿಗೆಯನ್ನು ವಿಧಿಸುವ ಉದ್ದೇಶಕ್ಕಾಗಿ, ಪ್ರತ್ಯೇಕ ತೆರಿಗೆದಾರನೆಂದು ಭಾವಿಸತಕ್ಕದ್ದು.][1]

1. 2003 ಅಧಿನಿಯಮ 07ರ ಮೂಲಕ ದಿನಾಂಕ: 01.04.2003ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 2006 ಅಧಿನಿಯಮ 05ರ ಮೂಲಕ ದಿನಾಂಕ: 01.04.2006ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ ಮತ್ತು ಬಿಟ್ಟುಬಿಡಲಾಗಿದೆ.
3. 2009 ಅಧಿನಿಯಮ 07ರ ಮೂಲಕ ದಿನಾಂಕ: 01.04.2009ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.
4. 2013 ಅಧಿನಿಯಮ 53ರ ಮೂಲಕ ದಿನಾಂಕ: 01.08.2013ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
5. 2015 ಅಧಿನಿಯಮ 14ರ ಮೂಲಕ ದಿನಾಂಕ: 01.04.2015ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.
6. 2018 ಅಧಿನಿಯಮ 06ರ ಮೂಲಕ ದಿನಾಂಕ: 01.04.2018ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ ಮತ್ತು ಬಿಟ್ಟುಬಿಡಲಾಗಿದೆ.
7. 2023 ಅಧಿನಿಯಮ 14ರ ಮೂಲಕ ದಿನಾಂಕ: 01.04.2023ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

******

## 2013ರ ಕರ್ನಾಟಕ ಅಧಿನಿಯಮ 27

(2013ರ ಮಾರ್ಚ್ ಹದಿನೆಂಟನೇ ದಿನಾಂಕದಂದು ಕರ್ನಾಟಕ ವಿಶೇಷ ರಾಜ್ಯ ಪತ್ರದಲ್ಲಿ ಮೊದಲ ಬಾರಿ ಪ್ರಕಟಿಸಲಾಗಿದೆ)

## ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ಅಧಿನಿಯಮ, 2013

(2013ರ ಮಾರ್ಚ್ ಹದಿನೈದನೇ ದಿನಾಂಕದಂದು ರಾಜ್ಯಪಾಲರ ಅನುಮತಿ ಪಡೆಯಲಾಗಿದೆ)

ಕರ್ನಾಟಕ ರಾಜ್ಯದಲ್ಲಿ ಜಾರಿಯಲ್ಲಿರುವ ಕೆಲವು ತೆರಿಗೆ ಕಾನೂನುಗಳನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕೆಲವು ತೆರಿಗೆ ಕಾನೂನುಗಳನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ನಾಲ್ಕನೇ ವರ್ಷದಲ್ಲಿ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ಅಧಿನಿಯಮ, 2013 ಎಂದು ಕರೆಯತಕ್ಕದ್ದು.

(2) ಇದು 2013ರ ಏಪ್ರಿಲ್ ಒಂದನೇ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**2. 1976ರ ಕರ್ನಾಟಕ ಅಧಿನಿಯಮ 35ರ ತಿದ್ದುಪಡಿ.-** ಕರ್ನಾಟಕ ವೃತ್ತಿಗಳ, ಕಸಬುಗಳ, ಆಜೀವಿಕೆಗಳ ಮತ್ತು ಉದ್ಯೋಗಗಳ ಮೇಲಣ ತೆರಿಗೆ ಅಧಿನಿಯಮ, 1976ರ (1976ರ ಕರ್ನಾಟಕ ಅಧಿನಿಯಮ 35) 16ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ಪರಂತುಕವನ್ನು ಬಿಟ್ಟುಬಿಡತಕ್ಕದ್ದು.

**3. 1979ರ ಕರ್ನಾಟಕ ಅಧಿನಿಯಮ 27ರ ತಿದ್ದುಪಡಿ.-** ಕರ್ನಾಟಕ ಸರಕುಗಳ ಪ್ರವೇಶದ ಮೇಲೆ ತೆರಿಗೆ ಅಧಿನಿಯಮ, 1979ರಲ್ಲಿ, (1979ರ ಕರ್ನಾಟಕ ಅಧಿನಿಯಮ 27),-

(1) 3ನೇ ಪ್ರಕರಣದ (7)ನೇ ಉಪಪ್ರಕರಣದಲ್ಲಿ, ``ಎರಡು ಲಕ್ಷ ರೂಪಾಯಿಗಳಿಗಿಂತಲೂ'' ಎಂಬ ಪದಗಳಿಗೆ ``ಐದು ಲಕ್ಷ ರೂಪಾಯಿಗಳಿಗಿಂತಲೂ'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(2) 4ನೇ ಪ್ರಕರಣದ (1)ನೇ ಉಪಪ್ರಕರಣದ (ಬಿ) ಖಂಡದಲ್ಲಿ, ``ಎರಡು ಲಕ್ಷ ರೂ.ಗಳಿಗಿಂತ'' ಎಂಬ ಪದಗಳಿಗೆ ``ಐದು ಲಕ್ಷ ರೂಪಾಯಿಗಳಿಗಿಂತ'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

******

## 2013ರ ಕರ್ನಾಟಕ ಅಧಿನಿಯಮ 53

(2013ರ ಜುಲೈ, ಮೂವತ್ತೊಂದನೇ ದಿನಾಂಕದಂದು ಕರ್ನಾಟಕ ವಿಶೇಷ ರಾಜ್ಯ ಪತ್ರದಲ್ಲಿ ಮೊದಲ ಬಾರಿ ಪ್ರಕಟಿಸಲಾಗಿದೆ)

## ಕರ್ನಾಟಕ ತೆರಿಗೆ ಕಾನೂನುಗಳ (ಎರಡನೇ ತಿದ್ದುಪಡಿ) ಅಧಿನಿಯಮ, 2013

(2013ರ ಜುಲೈ, ಮೂವತ್ತೊಂದನೇ ದಿನಾಂಕದಂದು ರಾಜ್ಯಪಾಲರ ಅನುಮತಿ ಪಡೆಯಲಾಗಿದೆ)

ಕರ್ನಾಟಕ ರಾಜ್ಯದಲ್ಲಿ ಜಾರಿಯಲ್ಲಿರುವ ಕೆಲವು ತೆರಿಗೆ ಕಾನೂನುಗಳನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕೆಲವು ತೆರಿಗೆ ಕಾನೂನುಗಳನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ನಾಲ್ಕನೇ ವರ್ಷದಲ್ಲಿ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ತೆರಿಗೆ ಕಾನೂನುಗಳ (ಎರಡನೇ ತಿದ್ದುಪಡಿ) ಅಧಿನಿಯಮ, 2013 ಎಂದು ಕರೆಯತಕ್ಕದ್ದು.

(2) ಇದು 2013ರ ಆಗಸ್ಟ್ ಒಂದನೇ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**2. 1957ರ ಕರ್ನಾಟಕ ಅಧಿನಿಯಮ 25ರ ತಿದ್ದುಪಡಿ.-** ಕರ್ನಾಟಕ ಮಾರಾಟಗಳ ತೆರಿಗೆ ಅಧಿನಿಯಮ, 1957ರಲ್ಲಿ (1957ರ ಕರ್ನಾಟಕ ಅಧಿನಿಯಮ 25) 4ನೇ ಪ್ರಕರಣದ (12)ನೇ ಉಪಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(13) ಯಾವುದೇ ನಿರ್ದಿಷ್ಟ ಸರಕುಗಳಿಗೆ ಸಂಬಂಧಿಸಿದಂತೆ (7)ನೇ ಉಪಪ್ರಕರಣದ ಅಡಿಯಲ್ಲಿ `ಸ್ಪಷ್ಟೀಕರಣ ಮತ್ತು ಪೂರ್ವಭಾವಿ ನಿರ್ಣಯಗಳ ಪ್ರಾಧಿಕಾರವು' ನೀಡಿದ ಯಾವುದೇ ಸ್ಪಷ್ಟೀಕರಣ ಅಥವಾ ನಿರ್ಣಯದಲ್ಲಿ ಏನೇ ಇದ್ದರೂ, ಅರ್ಜಿದಾರನು ಅಂಥ ಸರಕುಗಳಿಗೆ ಸಂಬAಧಿಸಿದAತೆ ಸಂದಾಯ ಮಾಡಬೇಕಾದ ತೆರಿಗೆಯ ದರವು, ಆಯುಕ್ತನು 3-ಎ ಪ್ರಕರಣದ (2)ನೇ ಉಪಪ್ರಕರಣದ ಅಡಿಯಲ್ಲಿ ಸ್ಪಷ್ಟೀಕರಿಸಬಹುದಾದಂತಹ ದರದಲ್ಲಿ, ಸರ್ಕಾರಿ ರಾಜ್ಯಪತ್ರದಲ್ಲಿ ಅದನ್ನು ಪ್ರಕಟಿಸಿದ ದಿನಾಂಕದಿಂದ, ಇರತಕ್ಕದ್ದು.''

**3. 1958ರ ಕರ್ನಾಟಕ ಅಧಿನಿಯಮ 30ರ ತಿದ್ದುಪಡಿ.-** ಕರ್ನಾಟಕ ಮನೋರಂಜನೆಗಳ ತೆರಿಗೆ ಅಧಿನಿಯಮ, 1958ರ (1958ರ ಕರ್ನಾಟಕ ಅಧಿನಿಯಮ 30) 4-ಎಎ ಪ್ರಕರಣದ ಕೋಷ್ಟಕದಲ್ಲಿ,

(i) (ಎ) ಕ್ರಮಸಂಖ್ಯೆಗೆ ಸಂಬಂಧಿಸಿದ ನಮೂದುಗಳಲ್ಲಿ, (3)ನೇ ಅಂಕಣದಲ್ಲಿ ``ಒಂದು ರೂಪಾಯಿ ಮತ್ತು ಐವತ್ತು ಪೈಸೆಯ'' ಎಂಬ ಪದಗಳಿಗೆ ``ಮೂರು ರೂಪಾಯಿಗಳ'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ii) (ಬಿ) ಕ್ರಮಸಂಖ್ಯೆಗೆ ಸಂಬಂಧಿಸಿದ ನಮೂದುಗಳಲ್ಲಿ, (3)ನೇ ಅಂಕಣದಲ್ಲಿ ``ಒಂದು ರೂಪಾಯಿಯ'' ಎಂಬ ಪದಗಳಿಗೆ ``ಎರಡು ರೂಪಾಯಿಗಳ'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**4. 1976ರ ಕರ್ನಾಟಕ ಅಧಿನಿಯಮ 35ರ ತಿದ್ದುಪಡಿ.-** ಕರ್ನಾಟಕ ವೃತ್ತಿಗಳ, ಕಸಬುಗಳ, ಆಜೀವಿಕೆಗಳ ಮತ್ತು ಉದ್ಯೋಗಗಳ ಮೇಲಣ ತೆರಿಗೆ ಅಧಿನಿಯಮ, 1976ರ (1976ರ ಕರ್ನಾಟಕ ಅಧಿನಿಯಮ 35) ಅನುಸೂಚಿಯಲ್ಲಿ 4ನೇ ಕ್ರಮಸಂಖ್ಯೆಗೆ ಸಂಬಂಧಿಸಿದ ನಮೂದುಗಳಲ್ಲಿ, (2)ನೇ ಅಂಕಣದಲ್ಲಿ ``36,000 ರೂಪಾಯಿಗಳಿಗೆ'' ಎಂಬ ಅಂಕಿಗಳು ಮತ್ತು ಪದ ಬರುವ ಎರಡು ಕಡೆಗಳಲ್ಲಿ ``1,20,000 ರೂಪಾಯಿಗಳಿಗೆ'' ಎಂಬ ಅಂಕಿಗಳು ಮತ್ತು ಪದವÀನ್ನು ಅನುಕ್ರಮವಾಗಿ ಪ್ರತಿಯೋಜಿಸತಕ್ಕದ್ದು.

**5. 1979ರ ಕರ್ನಾಟಕ ಅಧಿನಿಯಮ 27ರ ತಿದ್ದುಪಡಿ.-** ಕರ್ನಾಟಕ ಸರಕುಗಳ ಪ್ರವೇಶದ ಮೇಲೆ ತೆರಿಗೆ ಅಧಿನಿಯಮ, 1979ರ (1979ರ ಕರ್ನಾಟಕ ಅಧಿನಿಯಮ 27) 12-ಸಿ ಪ್ರಕರಣದ (2)ನೇ ಉಪಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(3) ಯಾವುದೇ ನಿರ್ದಿಷ್ಟ ಸರಕುಗಳಿಗೆ ಸಂಬಂಧಿಸಿದಂತೆ (1)ನೇ ಉಪಪ್ರಕರಣದ ಅಡಿಯಲ್ಲಿ `ಸ್ಪಷ್ಟೀಕರಣ ಮತ್ತು ಪೂರ್ವಭಾವಿ ನಿರ್ಣಯ ಪ್ರಾಧಿಕಾರವು' ನೀಡಿದ ಯಾವುದೇ ಸ್ಪಷ್ಟೀಕರಣ ಅಥವಾ ನಿರ್ಣಯದಲ್ಲಿ ಏನೇ ಇದ್ದರೂ, ಅರ್ಜಿದಾರನು ಅಂಥ ಸರಕುಗಳಿಗೆ ಸಂಬಂಧಿಸಿದಂತೆ ಸಂದಾಯ ಮಾಡಬೇಕಾದ ತೆರಿಗೆಯ ದರವು, ಆಯುಕ್ತನು 12ನೇ ಪ್ರಕರಣದ (7)ನೇ ಉಪಪ್ರಕರಣದ ಅಡಿಯಲ್ಲಿ ಸ್ಪಷ್ಟೀಕರಿಸಬಹುದಾದಂತಹ ದರದಲ್ಲಿ, ಸರ್ಕಾರಿ ರಾಜ್ಯಪತ್ರದಲ್ಲಿ ಅದನ್ನು ಪ್ರಕಟಿಸಿದ ದಿನಾಂಕದಿಂದ, ಅಂಥ ಇರತಕ್ಕದ್ದು.''

ಕರ್ನಾಟಕ ರಾಜ್ಯಪಾಲರ ಹೆಸರಿನಲ್ಲಿ
ಮತ್ತು ಅವರ ಆದೇಶಾನುಸಾರ

ಕೆ.ಎಸ್. ಮುದಗಲ್
ಸರ್ಕಾರದ ಕಾರ್ಯದರ್ಶಿ(ಪ್ರ)
ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ
ಇಲಾಖೆ

******

## 2015ರ ಕರ್ನಾಟಕ ಅಧಿನಿಯಮ 14

(2015ರ ಮಾರ್ಚ್, ಮೂವತ್ತೊಂದನೇ ದಿನಾಂಕದಂದು ಕರ್ನಾಟಕ ವಿಶೇಷ ರಾಜ್ಯ ಪತ್ರದಲ್ಲಿ ಮೊದಲ ಬಾರಿ ಪ್ರಕಟಿಸಲಾಗಿದೆ)

## ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ಅಧಿನಿಯಮ, 2015

(2015ರ ಮಾರ್ಚ್, ಮೂವತ್ತೊಂದನೇ ದಿನಾಂಕದಂದು ರಾಜ್ಯಪಾಲರ ಅನುಮತಿ ಪಡೆಯಲಾಗಿದೆ)

ಕರ್ನಾಟಕ ರಾಜ್ಯದಲ್ಲಿ ಜಾರಿಯಲ್ಲಿರುವ ಕೆಲವು ತೆರಿಗೆ ಕಾನೂನುಗಳನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕೆಲವು ತೆರಿಗೆ ಕಾನೂನುಗಳನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ ;

ಇದು ಭಾರತ ಗಣರಾಜ್ಯದ ಅರವತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ ;

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ಅಧಿನಿಯಮ, 2015 ಎಂದು ಕರೆಯತಕ್ಕದ್ದು.

(2) ಇದು 2015ರ ಏಪ್ರಿಲ್ ಒಂದನೇ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

ಮೂಲ ಅಧಿನಿಯಮದ 3ನೇ ಪ್ರಕರಣ ಮತ್ತು ಅನುಸೂಚಿಯನ್ನು ನಿಗಮಿತಗೊಳಿಸಲಾಗಿದೆ.

******

## 2016ರ ಕರ್ನಾಟಕ ಅಧಿನಿಯಮ 5

(2016ರ ಮಾರ್ಚ್, ಮೂವತ್ತೊಂದನೇ ದಿನಾಂಕದಂದು ಕರ್ನಾಟಕ ವಿಶೇಷ ರಾಜ್ಯ ಪತ್ರದಲ್ಲಿ ಮೊದಲ ಬಾರಿ ಪ್ರಕಟಿಸಲಾಗಿದೆ)

## ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ಅಧಿನಿಯಮ, 2013

(2016ರ ಮಾರ್ಚ್, ಮೂವತ್ತೊಂದನೇ ದಿನಾಂಕದಂದು ರಾಜ್ಯಪಾಲರ ಅನುಮತಿ ಪಡೆಯಲಾಗಿದೆ)

ಕರ್ನಾಟಕ ರಾಜ್ಯದಲ್ಲಿ ಜಾರಿಯಲ್ಲಿರುವ ಕೆಲವು ತೆರಿಗೆ ಕಾನೂನುಗಳನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕೆಲವು ತೆರಿಗೆ ಕಾನೂನುಗಳನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ ;

ಇದು ಭಾರತ ಗಣರಾಜ್ಯದ ಅರವತ್ತೇಳನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ಅಧಿನಿಯಮ, 2016 ಎಂದು ಕರೆಯತಕ್ಕದ್ದು.

(2) ಇದು 2016ರ ಏಪ್ರಿಲ್ ಒಂದನೇ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**4. 1976ರ ಕರ್ನಾಟಕ ಅಧಿನಿಯಮ 35ರ ತಿದ್ದುಪಡಿ.-** ಕರ್ನಾಟಕ ವೃತ್ತಿಗಳು, ಕಸುಬುಗಳು, ಆಜೀವಿಕೆಗಳ ಮತ್ತು ಉದ್ಯೋಗಗಳ ಮೇಲಣ ತೆರಿಗೆ ಅಧಿನಿಯಮ, 1976ರಲ್ಲಿ (1976ರ ಕರ್ನಾಟಕ ಅಧಿನಿಯಮ 35) 5ನೇ ಪ್ರಕರಣದ (3)ನೇ ಉಪಪ್ರಕರಣದಲ್ಲಿ "ಅರ್ಜಿಯನ್ನು ಸ್ವೀಕರಿಸಿದ ಮೂವತ್ತು

ದಿನಗಳೊಳಗೆ” ಎಂಬ ಪದಗಳಿಗೆ “ಅರ್ಜಿಯನ್ನು ಸ್ವೀಕರಿಸಿದ ಮೂರು ದಿನಗಳೊಳಗೆ” ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**2018ರ ಕರ್ನಾಟಕ ಅಧಿನಿಯಮ 06**

(2018ರ ಮಾರ್ಚ್, ಆರನೇ ದಿನಾಂಕದಂದು ಕರ್ನಾಟಕ ವಿಶೇಷ ರಾಜ್ಯ ಪತ್ರದಲ್ಲಿ ಮೊದಲ ಬಾರಿ ಪ್ರಕಟಿಸಲಾಗಿದೆ)

## ಕರ್ನಾಟಕ ವೃತ್ತಿಗಳ, ಕಸಬುಗಳ, ಆಜೀವಿಕೆಗಳ ಮತ್ತು ಉದ್ಯೋಗಿಗಳ ಮೇಲಣ ತೆರಿಗೆ (ತಿದ್ದುಪಡಿ) ಅಧಿನಿಯಮ, 2018

(2018ರ ಮಾರ್ಚ್, ಐದನೇ ದಿನಾಂಕದಂದು ರಾಜ್ಯಪಾಲರ ಅನುಮತಿ ಪಡೆಯಲಾಗಿದೆ)

ಕರ್ನಾಟಕ ವೃತ್ತಿಗಳ, ಕಸಬುಗಳ, ಆಜೀವಿಕೆಗಳ ಮತ್ತು ಉದ್ಯೋಗಿಗಳ ಮೇಲಣ ತೆರಿಗೆ ಅಧಿನಿಯಮ, 1976ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ವೃತ್ತಿಗಳ, ಕಸಬುಗಳ, ಆಜೀವಿಕೆಗಳ ಮತ್ತು ಉದ್ಯೋಗಿಗಳ ಮೇಲಣ ತೆರಿಗೆ ಅಧಿನಿಯಮ, 1976ನ್ನು (1976ರ ಕರ್ನಾಟಕ ಅಧಿನಿಯಮ 35) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೊಂಬತ್ತನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ವೃತ್ತಿಗಳ, ಕಸಬುಗಳ, ಆಜೀವಿಕೆಗಳ ಮತ್ತು ಉದ್ಯೋಗಿಗಳ ಮೇಲಣ ತೆರಿಗೆ (ತಿದ್ದುಪಡಿ) ಅಧಿನಿಯಮ, 2018 ಎಂದು ಕರೆಯತಕ್ಕದ್ದು.

(2) ಇದು 2018ನೇ ಏಪ್ರಿಲ್ ಒಂದನೇ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

ಮೂಲ ಅಧಿನಿಯಮದ 3ನೇ ಪ್ರಕರಣ ಮತ್ತು ಅನುಸೂಚಿಯನ್ನು ನಿಗಮಿತಗೊಳಿಸಲಾಗಿದೆ.

**2023ರ ಕರ್ನಾಟಕ ಅಧಿನಿಯಮ 14**

(2023ರ ಮಾರ್ಚ್, ಹದಿನಾಲ್ಕನೇ ದಿನಾಂಕದಂದು ಕರ್ನಾಟಕ ವಿಶೇಷ ರಾಜ್ಯ ಪತ್ರದಲ್ಲಿ ಮೊದಲ ಬಾರಿ ಪ್ರಕಟಿಸಲಾಗಿದೆ)

## ಕರ್ನಾಟಕ ವೃತ್ತಿಗಳ, ಕಸಬುಗಳ, ಆಜೀವಿಕೆಗಳ ಮತ್ತು ಉದ್ಯೋಗಿಗಳ ಮೇಲಣ ತೆರಿಗೆ (ತಿದ್ದುಪಡಿ) ಅಧಿನಿಯಮ, 2023

(2023ರ ಮಾರ್ಚ್, ಹದಿಮೂರನೇ ದಿನಾಂಕದಂದು ರಾಜ್ಯಪಾಲರ ಅನುಮತಿ ಪಡೆಯಲಾಗಿದೆ)

ಕರ್ನಾಟಕ ವೃತ್ತಿಗಳ, ಕಸುಬುಗಳ, ಆಜೀವಿಕೆಗಳ ಮತ್ತು ಉದ್ಯೋಗಗಳ ಮೇಲಣ ತೆರಿಗೆ ಅಧಿನಿಯಮ, 1976ನ್ನು ಮತ್ತಷ್ಟು ತಿದ್ದುಪಡಿ ಮಾಡುವುದಕ್ಕಾಗಿ ಒಂದು ಅಧಿನಿಯಮ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ, ಕರ್ನಾಟಕ ವೃತ್ತಿಗಳ, ಕಸುಬುಗಳ, ಆಜೀವಿಕೆಗಳ ಮತ್ತು ಉದ್ಯೋಗಗಳ ಮೇಲಣ ತೆರಿಗೆ ಅಧಿನಿಯಮ, 1976 (1976ರ ಕರ್ನಾಟಕ ಅಧಿನಿಯಮ 35)ನ್ನು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ನಾಲ್ಕನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ.-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ರ್ನಾಟಕ ವೃತ್ತಿಗಳ, ಕಸುಬುಗಳ, ಆಜೀವಿಕೆಗಳ ಮತ್ತು ಉದ್ಯೋಗಗಳ ಮೇಲಣ ತೆರಿಗೆ (ತಿದ್ದುಪಡಿ) ಅಧಿನಿಯಮ, 2023 ಎಂದು ಕರೆಯತಕ್ಕದ್ದು.

(2) ಅನ್ಯಥಾ ಉಪಬಂಧಿಸಿದುದನ್ನುಳಿದು, ಈ ಅಧಿನಿಯಮದ ಉಪಬಂಧಗಳು 2023ರ ಏಪ್ರಿಲ್, 1ನೇ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**2. ಪ್ರಕರಣ 2ರ ತಿದ್ದುಪಡಿ.-** ಕರ್ನಾಟಕ ವೃತ್ತಿಗಳ, ಕಸುಬುಗಳ, ಆಜೀವಿಕೆಗಳ ಮತ್ತು ಉದ್ಯೋಗಗಳ ಮೇಲಣ ತೆರಿಗೆ ಅಧಿನಿಯಮ, 1976 (1976ರ ಕರ್ನಾಟಕ ಅಧಿನಿಯಮ 35)ರ (ಇಲ್ಲಿ ಇನ್ನುಮುಂದೆ ಮೂಲ ಅಧಿನಿಯಮ ಎಂದು ಉಲ್ಲೇಖಿಸಲಾಗಿದೆ) ಪ್ರಕರಣ 2ರಲ್ಲಿ,-

(i) ಖಂಡ (ಎ) ನಂತರ, ಈ ಮುಂದಿನ ಖಂಡಗಳನ್ನು ಸೇರಿಸತಕ್ಕದ್ದು, ಎಂದರೆ:-

"(ಎಎ) "ಏಜೆಂಟ್" ಎಂದರೆ, ವ್ಯವಹಾರದ ಕ್ರಮದಲ್ಲಿ ಅಥವಾ ಮುಂದುವರಿಕೆಯಲ್ಲಿ ಇನ್ನೊಬ್ಬ ವ್ಯಕ್ತಿಯ ಪರವಾಗಿ ಕರ್ಯನರ್ವಹಿಸುವ ಒಬ್ಬವ್ಯಕ್ತಿ;

(ಎಬಿ) ಈ ಅಧಿನಿಯಮದ ಉದ್ದೇಶಗಳಿಗಾಗಿ, "ಕರನರ್ಧರಣೆ" ಎಂದರೆ, ಈ ಅಧಿನಿಯಮದ ಅಡಿಯಲ್ಲಿ ತೆರಿಗೆ ಬಾಧ್ಯತೆಯನ್ನು ನರ್ಧರಿಸುವುದು ಮತ್ತು ಸ್ವಯಂ-ಕರನರ್ಧರಣೆ, ಮರು-ಕರನರ್ಧರಣೆ ಮತ್ತು ಅತ್ಯುತ್ತಮ ವಿವೇಚನಾ ಕರನರ್ಧರಣೆಯನ್ನು ಒಳಗೊಳ್ಳುತ್ತದೆ;" ಮತ್ತು

(ii) ಖಂಡ (ಹೆಚ್)ರಲ್ಲಿ, ವಿವರಣೆಯಲ್ಲಿ, "ಪ್ರತಿಯೊಂದು" ಎಂಬ ಪದದ ತರುವಾಯ "ಮಾಲೀಕತ್ವದ ಘಟಕ" ಎಂಬುದನ್ನು ಸೇರಿಸತಕ್ಕದ್ದು.

**3. ಪ್ರಕರಣ 9ರ ತಿದ್ದುಪಡಿ.-** ಮೂಲ ಅಧಿನಿಯಮದ ಪ್ರಕರಣ 9ರ ಉಪ-ಪ್ರಕರಣ (2)ರಲ್ಲಿ, "ಒಂದೂವರೆಯಷ್ಟಕ್ಕೆ ಮೀರದ" ಎಂಬ ಪದಗಳ ಬದಲಾಗಿ, "ಶೇಕಡ ನೂರರಷ್ಟಕ್ಕೆ ಸಮನಾದ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**4. ಪ್ರಕರಣ 10ರ ತಿದ್ದುಪಡಿ.-** ಮೂಲ ಅಧಿನಿಯಮದ ಪ್ರಕರಣ 10ರ ಉಪ-ಪ್ರಕರಣ (6)ರಲ್ಲಿ, "2%" ಎಂಬ ಅಂಕಿ ಮತ್ತು ಚಿಹ್ನೆಯ ಬದಲಾಗಿ, "ಶೇಕಡಾ ಒಂದೂವರೆಯಷ್ಟು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**5. ಪ್ರಕರಣ 11ರ ತಿದ್ದುಪಡಿ.-** ಮೂಲ ಅಧಿನಿಯಮದ ಪ್ರಕರಣ11ರ ಉಪ-ಪ್ರಕರಣ (2)ರಲ್ಲಿ, "ಶೇಕಡಾ ಒಂದೂ ಕಾಲಷ್ಟು" ಎಂಬ ಪದಗಳ ಬದಲಾಗಿ, "ಶೇಕಡಾ ಒಂದೂವರೆಯಷ್ಟು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**6. ಪ್ರಕರಣ 12ರ ತಿದ್ದುಪಡಿ.-** ಮೂಲ ಅಧಿನಿಯಮದ ಪ್ರಕರಣ 12ರಲ್ಲಿ,-

(i) "ಯುಕ್ತ ಕಾರಣವಿಲ್ಲದೆ" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು;

(ii) "ಶೇಕಡ ಐವತ್ತಕ್ಕೆ ಮೀರದ" ಎಂಬ ಪದಗಳ ಬದಲಾಗಿ, "ಶೇಕಡಾ ಹತ್ತರಷ್ಟಕ್ಕೆ ಸಮನಾದ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**7. ಅನುಸೂಚಿಯ ಪ್ರತಿಯೋಜನೆ.-** ಮೂಲ ಅಧಿನಿಯಮದಲ್ಲಿ, ಅದರ ಅನುಸೂಚಿ ಮತ್ತು ವಿವರಣೆ I ರಿಂದ Vರ ಬದಲಿಗೆ ಈ ಮುಂದಿನ ಅನುಸೂಚಿ ಮತ್ತು ವಿವರಣೆಗಳನ್ನು ಪ್ರತಿಯೋಜಿಸತಕ್ಕದ್ದು, ಅಂದರೆ:-

**ಅನುಸೂಚಿ**

**(ಪ್ರಕರಣ 3(2) ನ್ನು ನೋಡಿ)**

**ವೃತ್ತಿಗಳ, ಕಸುಬುಗಳ, ಆಜೀವಿಕೆಗಳ ಮತ್ತು ಉದ್ಯೋಗಗಳ ಮೇಲಣ ತೆರಿಗೆಯ ದರಗಳು**

| ಕ್ರಮ | ವ್ಯಕ್ತಿಗಳ ವರ್ಗ | ತೆರಿಗೆಯ ದರ |
|---|---|---|

| ಸಂಖ್ಯೆ | | |
|---|---|---|
| (1) | (2) | (3) |
| 1 | ಒಂದು ತಿಂಗಳಿಗೆ ರೂ. 25,000-00 ಮತ್ತು ಹೆಚ್ಚಿನ ಸಂದರ್ಭಾನುಸಾರವಾಗಿ, ಸಂಬಳ ಅಥವಾ ಮಜೂರಿಯನ್ನು ಅಥವಾ ಇವೆರಡನ್ನೂ ಪಡೆಯವ ವ್ಯಕ್ತಿಗಳು | ತಿಂಗಳಿಗೆ ರೂ.200-00 |
| 2 | ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017 ರಡಿಯಲ್ಲಿ ನೋಂದಾಯಿಸಿದ ಅಥವಾ ನೋಂದಣಿ ಪಡೆಯಲು ಬಾಧ್ಯರಾಗಿರುವ ವ್ಯಕ್ತಿಗಳು | ವರ್ಷಕ್ಕೆ ರೂ.2,500-00 |
| 3 | ಕಾನೂನು ವೃತ್ತಿನಿರತರು, ಸಮಾಲೋಚಕರು, ಏಜೆಂಟ್‌ರು, ಚಾರ್ಟೆಂಡ್ ಅಕೌಂಟೆಂಟ್‌ಗಳು ಮತ್ತು ವಿಮಾಗಣಕರು (actuaries), ಇಂಜಿನಿಯರ್‌ಗಳು, ಆರೋಗ್ಯಪಾಲನಾ ವೃತ್ತಿಪರರು, ಎಸ್ಟೇಟ್ ಏಜೆಂಟ್‌ರು ಅಥವಾ ದಳ್ಳಾಳಿಗಳು, ಬ್ಯೂಟಿ ಪಾರ್ಲರ್‌ಗಳು, ಡ್ರೈಕ್ಲೀನರ್ಸ್ ಮತ್ತು ಆಂತರಿಕ ವಿನ್ಯಾಸಕಾರರು, ಪತ್ರಕರ್ತಕರುಗಳು ಮತ್ತು ಜಾಹೀರಾತು ಏಜೆನ್ಸಿಗಳು. ಡಿಶ್, ಆಂಟೆನಾ ಕೇಬಲ್ ಟಿವಿ ಬಳಸಿ ಮನರಂಜನೆಯನ್ನು ಒದಗಿಸುವವರು, ಅವಧಿ ಕಾಲ ಬಳಕೆ ಮಾರಾಟದ (selling timing) ಗಣಕಯಂತ್ರ ಸಂಸ್ಥೆಗಳು, ಗಣಕಯಂತ್ರ ತರಬೇತಿ ಸಂಸ್ಥೆಗಳು / ಚಾಲನಾ (driving) ಸಂಸ್ಥೆಗಳು / ತಾಂತ್ರಿಕ ತರಬೇತಿ ಸಂಸ್ಥೆಗಳು, ಜ್ಯೋತಿಷಿಗಳು, ಹಸ್ತ ಸಾಮುದ್ರಿಕ ಶಾಸ್ತ್ರಜ್ಞರು (astro palmist), ಸಂಖ್ಯಾ ಶಾಸ್ತ್ರಜ್ಞರು (numerologist), ವಾಸ್ತು ಸಲಹೆಗಾರರು ಮತ್ತು ನಂಬಿಕೆಯಾಧಾರಿತ ಚಿಕಿತ್ಸಕರನ್ನು (faith healers) ಒಳಗೊಂಡಂತೆ ವೃತ್ತಿಗಳು, ಕಸುಬುಗಳು, ಆಜೀವಿಕೆಗಳು ಮತ್ತು ಉದ್ಯೋಗಗಳಲ್ಲಿ, ಎರಡು ವರ್ಷಗಳಿಗಿಂತ ಹೆಚ್ಚು ಕಾಲ ತೊಡಗಿಸಿಕೊಂಡಿರುವ ಸ್ವಯಂ ಉದ್ಯೋಗಿ ವ್ಯಕ್ತಿಗಳು. | ವರ್ಷಕ್ಕೆ ರೂ.2,500-00 |
| 4 | ಕುದುರೆಗಳ ಮಾಲೀಕರು ಮತ್ತು ತರಬೇತಿದಾರರು, ಜಾಕಿಗಳು, ನಿರ್ದೇಶಕರು, ನಟ ಮತ್ತು ನಟಿಯರು (ಕಿರಿಯ ಕಲಾವಿದರನ್ನು ಹೊರತುಪಡಿಸಿ), ಆಯಿಲ್ ಪಂಪ್‌ಗಳು ಮತ್ತು ಸೇವಾ ಕೇಂದ್ರಗಳು, ಗ್ಯಾಸ್ ಸ್ಟೇಷನ್‌ಗಳು, ಎಲೆಕ್ಟ್ರಿಕ್ ಚಾರ್ಜಿಂಗ್ ಸ್ಟೇಷನ್‌ಗಳ ಮಾಲೀಕರು, ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಮತ್ತು ಸ್ಥಳೀಯ ಸಂಸ್ಥೆಗಳು ನಡೆಸುತ್ತಿರುವುದನ್ನು ಹೊರತುಪಡಿಸಿದ ನರ್ಸಿಂಗ್ ಹೋಮ್‌ಗಳು, ಆಸ್ಪತ್ರೆಗಳು, ರೋಗಪತ್ತೆ ಕೇಂದ್ರಗಳು, ಕ್ಲಿನಿಕಲ್ ಲ್ಯಾಬೋರೇಟರಿಗಳು ಮತ್ತು ಎಕ್ಸ್‌ರೇ ಕ್ಲಿನಿಕ್‌ಗಳ ಮಾಲೀಕರು, ದೈಹಿಕ ವ್ಯಾಯಾಮ ಮತ್ತು ಸುಸ್ಥಿತಿ ಕೇಂದ್ರಗಳ ಮಾಲೀಕರು | ವರ್ಷಕ್ಕೆ ರೂ.2,500-00 |
| 5 | ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಮತ್ತು ಸ್ಥಳೀಯ ಸಂಸ್ಥೆಗಳು ನಡೆಸುತ್ತಿರುವುದನ್ನು ಹೊರತುಪಡಿಸಿದ, ಶಿಕ್ಷಣ ಸಂಸ್ಥೆಗಳು ಮತ್ತು ಟ್ಯೂಟೋರಿಯಲ್ ಕಾಲೇಜುಗಳು ಅಥವಾ ಸಂಸ್ಥೆಗಳು. | ವರ್ಷಕ್ಕೆ ರೂ.2,500-00 |
| 6 | ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಸಂಸ್ಥೆಗಳ ಅಧಿನಿಯಮ, 1961ರ ಅಡಿಯಲ್ಲಿ ಪರಿಭಾಷಿಸಲಾದ ಐದಕ್ಕಿಂತ ಹೆಚ್ಚು ಉದ್ಯೋಗಿಗಳನ್ನು ನೇಮಿಸಿಕೊಂಡಿರುವ ಸಂಸ್ಥೆಗಳ ಉದ್ಯೋಗದಾತರು. | ವರ್ಷಕ್ಕೆ ರೂ.2,500-00 |
| 7 | ಪರವಾನಿಗೆ ಪಡೆದ ಮದ್ಯ ಮಾರಾಟಗಾರರು, ಕರ್ನಾಟಕ ಲೇವಾದೇವಿದಾರರ ಅಧಿನಿಯಮ, 1961ರಡಿಯಲ್ಲಿ ಪರವಾನಗಿ ಪಡೆದ ಲೇವಾದೇವಿದಾರರು, ಚಿಟ್‌ಫಂಡ್ ನಡೆಸುತ್ತಿರುವ ವ್ಯಕ್ತಿಗಳು ಅಥವಾ | ವರ್ಷಕ್ಕೆ ರೂ.2,500-00 |

| | | |
|---|---|---|
| | ಸಂಸ್ಥೆಗಳು. | |
| 8 | ಮೋಟಾರು ವಾಹನಗಳ ಅಧಿನಿಯಮ 1988 (1988 ಕೇಂದ್ರ ಅಧಿನಿಯಮ 59)ರಡಿಯಲ್ಲಿ ಸ್ವಂತ ಅಥವಾ ಬಾಡಿಗೆಗೆ ಉಪಯೋಗಿಸಲಾಗುವ, ಸಾರಿಗೆ ವಾಹನಗಳ ಕೊಡಲಾದ ಪರ್ಮಿಟ್ಟುಗಳನ್ನು ಹೊಂದಿರುವ, ಸಾರಿಗೆ ವಾಹನಗಳ ಮಾಲೀಕರು (ಆಟೋ ರಿಕ್ಷಾಗಳನ್ನು ಹೊರತುಪಡಿಸಿ); ಸರಕು ಸಾರಿಗೆ ಏಜನ್ಸಿಗಳು (ಜಿಟಿಎ) ಮತ್ತು ರವಾನೆ ಮತ್ತು ತೀರಿಕೆ ಏಜೆಂಟರನ್ನು ಒಳಗೊಂಡಂತೆ ಸಾರಿಗೆ ಗುತ್ತಿಗೆದಾರರು.<br>**ವಿವರಣೆ-** ಈ ನಮೂದಿನ ಉದ್ದೇಶಕ್ಕಾಗಿ, ಸರಕು ಸಾರಿಗೆ ಏಜನ್ಸಿ (ಜಿಟಿಎ) ಎಂದರೆ ರಸ್ತೆಯ ಮೂಲಕ ಸರಕುಗಳ ಸಾಗಾಣಿಕೆಗೆ ಸಂಬಂಧಿಸಿದಂತೆ, ಸೇವೆಯನ್ನು ಒದಗಿಸುವ ಮತ್ತು ಯಾವುದೇ ಹೆಸರಿನಿಂದ ಕರೆಯಲಾಗುವ ಸರಕು ರವಾನೆ ಪತ್ರವನ್ನು (consignment note) ನೀಡುವ ಯಾವುದೇ ವ್ಯಕ್ತಿ. | ವರ್ಷಕ್ಕೆ ರೂ.2,500-00 |
| 9 | ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959 (1959ರ ಕರ್ನಾಟಕದ ಅಧಿನಿಯಮ 11) ಮೇರೆಗೆ ನೋಂದಾಯಿಸಲಾದ ಸಹಕಾರಿ ಸಂಘಗಳು ಮತ್ತು ಯಾವುದೇ ವೃತ್ತಿಗಳ, ಕಸುಬುಗಳ ಅಥವಾ ಆಜೀವಿಕೆಗಳಲ್ಲಿ ತೊಡಗಿರುವವರು. | ವರ್ಷಕ್ಕೆ ರೂ.2,500-00 |
| 10 | ಕಂಪನಿಗಳ ಅಧಿನಿಯಮ, 2013ರ (2013ರ ಕೇಂದ್ರ ಅಧಿನಿಯಮ 18) ಮೇರೆಗೆ ನೋಂದಾಯಿಸಲಾದ ಮತ್ತು ಯಾವುದೇ ವೃತ್ತಿಗಳ, ಕಸುಬುಗಳ ಅಥವಾ ಆ ಜೀವಿಕೆಗಳಲ್ಲಿ ತೊಡಗಿರುವ ಕಂಪನಿಗಳು; ಬ್ಯಾಂಕಿಂಗ್ ನಿಯಂತ್ರಣದ ಅಧಿನಿಯಮ, 1949ರಲ್ಲಿ ಪರಿಭಾಷಿಸಲಾದ ಬ್ಯಾಂಕಿಂಗ್ ಕಂಪನಿಗಳು.<br>**ವಿವರಣೆ.-** ಈ ನಮೂದಿನ ಉದ್ದೇಶಕ್ಕಾಗಿ, "ಬ್ಯಾಂಕಿಂಗ್ ಕಂಪನಿಗಳು" ಎಂದರೆ, ಬ್ಯಾಂಕಿಂಗ್ ನಿಯಂತ್ರಣ ಅಧಿನಿಯಮ, 1949ರ (1949ರ ಕೇಂದ್ರ ಅಧಿನಿಯಮ 10) ಉಪಬಂಧದ ಮೂಲಕ ಕಾರ್ಯಾಚರಣೆಯನ್ನು ನಿರ್ವಹಿಸುವ ಯಾವುದೇ ಬ್ಯಾಂಕ್‌ನ್ನು ಒಳಗೊಳ್ಳುವುದು. | ವರ್ಷಕ್ಕೆ ರೂ.2,500-00 |
| 11 | ಹಿಂದಿನ ಯಾವುದೇ ನಮೂದುಗಳಲ್ಲಿ ನಮೂದಿಸಿರುವ ವ್ಯಕ್ತಿಗಳನ್ನು ಹೊರತುಪಡಿಸಿ, ಯಾವುದೇ ವೃತ್ತಿಗಳ, ಕಸುಬುಗಳ, ಆಜೀವಿಕೆಗಳ ಅಥವಾ ಉದ್ಯೋಗಗಳಲ್ಲಿ ನಿರತರಾಗಿರುವ ಮತ್ತು ಆದಾಯ ತೆರಿಗೆ ಅಧಿನಿಯಮ, 1961 (1961ರ ಕೇಂದ್ರ ಅಧಿನಿಯಮ 43)ರ ಅಡಿಯಲ್ಲಿ ತೆರಿಗೆ ಪಾವತಿಸುವ ವ್ಯಕ್ತಿಗಳು. | ವರ್ಷಕ್ಕೆ ರೂ.2,500-00 |
| 12 | ಯಾವುದೇ ವೃತ್ತಿಗಳ, ಕಸುಬುಗಳ, ಆಜೀವಿಕೆಗಳ ಅಥವಾ ಉದ್ಯೋಗಗಳಲ್ಲಿ ನಿರತರಾಗಿರುವ ಹಿಂದಿನ ಯಾವುದೇ ನಮೂದುಗಳಲ್ಲಿ ನಮೂದಿಸಿದ ವ್ಯಕ್ತಿಗಳನ್ನು ಹೊರತುಪಡಿಸಿ, ಕನಿಷ್ಟ ಎರಡು ವರ್ಷಗಳ ಕಾಲಾವಧಿಯೊಂದಿಗೆ ಮತ್ತು ರಾಜ್ಯ ಸರ್ಕಾರವು ಕಾಲಕಾಲಕ್ಕೆ ಹೊರಡಿಸಿದ ಅಧಿಸೂಚನೆಯಲ್ಲಿ ವಿನಾಯಿತಿಯನ್ನು ಪಡೆಯದಿರುವ ವ್ಯಕ್ತಿಗಳು. | ವರ್ಷಕ್ಕೆ ರೂ.2,500-00 |

**ವಿವರಣೆ I. -** ಈ ಅನುಸೂಚಿಯಲ್ಲಿ ಏನೇ ಇದ್ದರೂ, ಒಬ್ಬ ವ್ಯಕ್ತಿಯು ಅನುಸೂಚಿಯಲ್ಲಿ ಒಂದಕ್ಕಿಂತ ಹೆಚ್ಚು ನಮೂದುಗಳಲ್ಲಿ ಸೇರಿದ್ದರೆ, ಅಂತಹ ಯಾವುದೇ ಒಂದು ನಮೂದಿನ ಅಡಿಯಲ್ಲಿ ತೆರಿಗೆಯನ್ನು ಪಾವತಿಸತಕ್ಕದ್ದು.

**ವಿವರಣೆ II. -** ಈ ಅನುಸೂಚಿಯಲ್ಲಿ 4ನೇ ಕ್ರಮ ಸಂಖ್ಯೆಯ ಪ್ರಕಾರ ತೆರಿಗೆಯ ಹೊಣೆಗಾರಿಕೆಯನ್ನು ನಿರ್ಧರಿಸುವ ಉದ್ದೇಶಗಳಿಗಾಗಿ, ವರ್ಷದ ಯಾವುದೇ ಸಮಯದಲ್ಲಿರುವ ಕೆಲಸಗಾರರ ಮತ್ತು/ಅಥವಾ ಉದ್ಯೋಗಿಗಳ ಅತ್ಯಂತ ಹೆಚ್ಚಿನ ಸಂಖ್ಯೆಯ ಆಧಾರವೆಂಬುದಾಗಿ ಪರಿಗಣಿಸತಕ್ಕದ್ದು.

**ವಿವರಣೆ III. -** ಈ ಅನುಸೂಚಿಯ ಉದ್ದೇಶಗಳಿಗಾಗಿ, ಯಾವುದೇ ಆಸ್ತಿಯನ್ನು ಅಥವಾ ವ್ಯವಹಾರವನ್ನು, ಗುತ್ತಿಗೆದಾರರನ್ನು ಗುತ್ತಿಗೆಗೆ ಪಡೆದಿದ್ದಲ್ಲಿ ಅಂಥ ಗುತ್ತಿಗೆದಾರನು ಈ ಅಧಿನಿಯಮದಡಿಯಲ್ಲಿ ಹೊಣೆಗಾರನಾದ ವ್ಯಕ್ತಿ ಎಂದು ಭಾವಿಸತಕ್ಕದ್ದು."

**ವಿವರಣೆ IV. -** ಯಾವುದೇ ವೃತ್ತಿ, ಕಸುಬು ಅಥವಾ ಆಜೀವಿಕೆಯಲ್ಲಿ ತೊಡಗಿರುವ ಸಂಸ್ಥೆಯ ಯಾವುದೇ ಪಾಲುದಾರರ ಮೇಲೆ, ಅಂತಹ ಸಂಸ್ಥೆಯು ತೆರಿಗೆಯನ್ನು ಪಾವತಿಸಿದ್ದರೆ, ಈ ಅಧಿನಿಯಮದ ಅಡಿಯಲ್ಲಿ ಯಾವುದೇ ತೆರಿಗೆಯನ್ನು ವಿಧಿಸತಕ್ಕದ್ದಲ್ಲ.

**ವಿವರಣೆ V. -** ಈ ಅನುಸೂಚಿಯಲ್ಲಿ ಏನೇ ಒಳಗೊಂಡಿದ್ದರೂ, ಅನುಸೂಚಿಯ ಯಾವುದೇ ಅಂಶದಲ್ಲಿ ನಮೂದಿಸಲಾದ ವ್ಯಕ್ತಿಯ ಪ್ರತಿಯೊಂದು ಹೆಚ್ಚುವರಿ ಸ್ಥಳವನ್ನು, ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ವೃತ್ತಿ ತೆರಿಗೆಯನ್ನು ವಿಧಿಸುವ ಉದ್ದೇಶಕ್ಕಾಗಿ, ಪ್ರತ್ಯೇಕ ವ್ಯಕ್ತಿ ಎಂದು ಭಾವಿಸತಕ್ಕದ್ದು ಮತ್ತು ಸರಕುಗಳನ್ನು ಸಂಗ್ರಹಿಸಲು ಗೋದಾಮಿನಂತೆ ವಿಶೇಷವಾಗಿ ಬಳಸಲಾಗುವ ಹೆಚ್ಚುವರಿ ವ್ಯವಹಾರ ಸ್ಥಳಗಳ ಸಂದರ್ಭದಲ್ಲಿ ಈ ವಿವರಣೆಯಲ್ಲಿರುವುದಾವುದೂ ಅನ್ವಯವಾಗತಕ್ಕದ್ದಲ್ಲ.

ಕರ್ನಾಟಕ ರಾಜ್ಯಪಾಲರ ಹೆಸರಿನಲ್ಲಿ
ಮತ್ತು ಅವರ ಆದೇಶಾನುಸಾರ

ಜಿ. ಶ್ರೀಧರ್
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ